ಮಹಾತ್ಮರ ಮನೋರಂಗ
ಅನುವಾದಕರು:
ಶ್ರೀ. ರಂ. ರಾ. ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೪ ಪುಟ, ಬೆಲೆ: ೪-೮-೦
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಬೆಲೆ: ಎರಡು ಆಣೆ

ಕರ್ಮವೀರ

ವಚನಶಾಸ್ತ್ರ ರಹಸ್ಯ

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(

Editor
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೧—೧೨—೧೯೪೭ —(ಸಂಚಿಕೆ ೩೨)—

ಯುರೋಪನ್ನು ಸ್ವಾಹಾಕರಿಸಲು ಮಾರ್ಶಲ್ಲರ ತಂತ್ರ

ಭದ್ರತಾ ಮಂಡಲದ ಬದಲಾವಣೆ— ಆತ್ಮರಕ್ಷಣೆಯ ಹಕ್ಕಿನ ನೆವ— ಸಹಾಯ ಯೋಜನೆಯ ಇಂದ್ರಜಾಲ— ಡಾಲರ್ ಪ್ರಭುತ್ವಕ್ಕೆ ಪೀಠಿಕೆ

ರಶಿಯದ ವಿರುದ್ಧ ಮಾರ್ಶಲ್ಲರ ಕೈವಾಡ

ಸಂಯುಕ್ತ ರಾಷ್ಟ್ರಸಂಘದಲ್ಲಿ ಮೂಲಭೂತ ಬದಲಾವಣೆಗಳಾಗುತ್ತಿವೆಯೆಂಬುದೀಗ ಸ್ಪಷ್ಟವಾಗುತ್ತಿದೆ. ಅದಕ್ಕೆ ಅಮೇರಿಕದ ಸಂಯುಕ್ತ ಸಂಸ್ಥಾನದ ಸೆಕ್ರೆಟರಿ ಆಫ್ ಸ್ಟೇಟರಾದ ಜಾರ್ಜ ಮಾರ್ಶಲ್ಲರ ಸೂಚನೆಗಳೇ ಕಾರಣ. ಸಂ. ರಾ. ಸಂಘದ ಮೂಲ ಪಟದಲ್ಲಿ ಯಾವುದಾದರೊಂದು ದೊಡ್ಡ ಪ್ರಭುತ್ವದ ವಿರುದ್ಧವಾಗಿ ಕ್ರಮತೆಗೆದುಕೊಳ್ಳುವ ತೀರ್ಪಿಗೆ ಅವಕಾಶವಿಲ್ಲ. ಈಗ ಅದು ಸಾಧ್ಯವಾಗಬೇಕಾಗಿದೆ. ಮೊದಲು ಆಕ್ರಾಮಕ ರಾಜ್ಯಗಳ ವಿರುದ್ಧವಾಗಿ ತೆಗೆದುಕೊಳ್ಳುವ ತೀರ್ಪು ಪ್ರತಿಷೇಧಾಧಿಕಾರಕ್ಕೆ ಅಧೀನವಾಗಿತ್ತು. ಈಗ ಪ್ರತಿಷೇಧಾಧಿಕಾರವೇ ಅವಶ್ಯವಿದ್ದರೆ ಅಲ್ಲಗಳೆಯಲ್ಪಡುವುದು.

ಯುದ್ಧ ಮತ್ತು ಶಾಂತಿಗಳ ಕವಲು ಕರಾರುಗಳ ಪರಿಶೀಲನೆ ಸಂ. ರಾ. ಸಂಘಕ್ಕೆ ಮೊದಲು ಸಂಬಂಧಿಸಿದ್ದಿಲ್ಲ. ಈಗ ಕೊರಿಯದ ಪ್ರಶ್ನೆಯನ್ನು ಬಿಡಿಸಲು ಸಂ. ರಾ. ಸಂಘವನ್ನು ಕೇಳಿಕೊಳ್ಳಲಾಗಿದೆ. ಅದರಂತೆ ಇನ್ನು ಮೇಲೆ ಇನ್ನೂ ಇತರ ನ್ಯಾಯನಿರ್ಣಯದ ಕೆಲಸಗಳು ಸಂಘದ ಕಾರ್ಯಕ್ಷೇತ್ರಕ್ಕೆ ಒಳಪಡಬಹುದು. ಭದ್ರತಾಮಂಡಲದಲ್ಲಿ ೨೦ ಸೂಚನೆಗಳನ್ನು ಪ್ರತಿಷೇಧಿಸಿದ ರಶಿಯದ ವಿರುದ್ಧವಾಗಿಯೇ ಇಂತಹ ಬದಲಾವಣೆಗಳಾಗುತ್ತಿವೆ. ಆದರಿಂದಲೇ ರಶಿಯದ ಉಪ ಪರರಾಷ್ಟ್ರ ಮಂತ್ರಿಯಾದ ಆಂದ್ರೀ ವಿಶಿನಸ್ಕಿಯು ಮಾರ್ಶಲ್ಲರ ವಿಚಾರವನ್ನು ಅಷ್ಟು ಸಿಟ್ಟಿನಿಂದ ಖಂಡಿಸಿದುದು.

ಈಗಿರುವ ಬೃಹತ್ಪಂಚಕದ (Big Five) ವರ್ಚಸ್ಸಿಗೊಳಗಾದ ೧೧ ಸದಸ್ಯರ ಭದ್ರತಾಮಂಡಲದ ಬದಲು ೫೫ ರಾಷ್ಟ್ರಗಳ ಸಭೆಯೊಂದನ್ನು ಸ್ಥಾಪಿಸಬೇಕೆಂಬುದೇ ಮಾರ್ಶಲ್ಲರ ಮುಖ್ಯವಿಚಾರ ಇದಕ್ಕೆ ರಶಿಯವು ಪ್ರತಿಷೇಧಾಧಿಕಾರವನ್ನು ದುರುಪಯೋಗ ಮಾಡಿದ್ದೇ ಕಾರಣವೆಂದು ಹೇಳಲಾಗುತ್ತಿದೆ. ಈ ಸಭೆಯಲ್ಲಿ ಪ್ರತಿಷೇಧಾಧಿಕಾರವಿಲ್ಲ. ೨/೩ ರಷ್ಟು ಸದಸ್ಯರ ಮತದಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತದೆ. ಇದರಿಂದ ಬೃಹತ್ಪಂಚಕದಲ್ಲಿ ಯಾವ ಒಂದು ದೊಡ್ಡ ಪ್ರಭುತ್ವವೇ ಆಗಲಿ, ಸಂಘದ ನಿರ್ಣಯಗಳನ್ನು ಪ್ರತಿಷೇಧಿಸಲು ಸಮರ್ಥವಾಗದಂತಾಗುತ್ತದೆ. ಪ್ರತಿಷೇಧಾಧಿಕಾರಕ್ಕಿಂದು ಹೀಗೆ ಸಮಾಧಿ ಕಟ್ಟಲಾಗುತ್ತಿದೆ.

ಪಾಶ್ಚಾತ್ಯ ಪರೋಪಕಾರಿ



(ಯುರೋಪಿಗೆ ಅಮೇರಿಕ ಕೊಡಬೇಕೆಂದಿರುವ ಸಹಾಯದ ಬಗ್ಗೆ ಯುಗೋಸ್ಲೇವಿಯನ್ ಪತ್ರಿಕೆಯೊಂದರ ವ್ಯಂಗ್ಯ ಚಿತ್ರ)

ಆತ್ಮರಕ್ಷಣೆಯ ಹಕ್ಕು

ಸಂಘದ ನಿರ್ಣಯಗಳನ್ನು ಅಮಲಿನಲ್ಲಿ ತರುವ ಕೆಲಸ ಆಯಾ ನಿರ್ಣಯಗಳಿಗೆ ಬೆಂಬಲವಿತ್ತ ಸದಸ್ಯರಾಷ್ಟ್ರಗಳ ಪಾಲಿಗೆ ಸೇರಿದ್ದು, ಸದಸ್ಯರಾಷ್ಟ್ರಗಳಿಗೆ ಸ್ವತಃ ಇಲ್ಲವೆ ಇತರ ಸಹಾಯದಿಂದ ಆತ್ಮರಕ್ಷಣೆ ಮಾಡಿಕೊಳ್ಳುವ ಹಕ್ಕು ಹೊಸ ಪಟದ ಪ್ರಕಾರ ದೊರಕುತ್ತದೆ. ಇದರಲ್ಲಿ ಆಕ್ರಮಣದಂತಹ ಇನ್ನೂ ಅನೇಕ ವಿಷಯಗಳ ಬಗ್ಗೆ ಮಾಡಬೇಕಾದ ಕರ್ತವ್ಯ ಅಡಕವಾತದೆ. ಈ ವ್ಯವಸ್ಥೆಯಿಂದ ಭದ್ರತಾಮಂಡಲಕ್ಕೆ ಆಕ್ರಮಣ ನಡೆದ ಸಂದರ್ಭಗಳಲ್ಲಿ ತೀವ್ರವಾಗಿ ಸಂಘವು ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡಲು ಅನುಕೂಲ ಸಿಗುತ್ತದೆ. ಇದು ಹೇಗೆ ಕಾರ್ಯಕಾರಿಯಾಗಬಲ್ಲದೆಂಬುದನ್ನು ಗ್ರೀಸು ಉದಾಹರಿಸುತ್ತದೆ, ಅಲ್ಲಿ ರಶಿಯವು ಭದ್ರತಾಮಂಡಲದ ಕಾರ್ಯಗತಿಯನ್ನು ಕುಂಠಿಸಿದೆ ಅದರ ಫಲವಾಗಿ ಯುಗೋಸ್ಲೋವಿಯ, ಅಲ್ಬೇನಿಯ ಮತ್ತು ಬಲ್ಗೇರಿಯಗಳ ಕಡೆಯಿಂದ ಗ್ರೀಕ ಕೂಟ ಯೋಧರಿಗೆ ಸಹಾಯವನ್ನು ಕಳುಹಬೇಕೆಂದು ಮಾರ್ಶಲ್ಲರೂ ಸಂಘವನ್ನು ಕೇಳುತ್ತಿದ್ದಾರೆ.

ಭದ್ರತಾಮಂಡಲದಲ್ಲಿ ಮೂಲಭೂತ ಬದಲಾವಣೆ

ಇದರಮೇಲೆ ಈ ಯೋಜನೆ ವ್ಯವಹಾರ್ಯವೆನಿಸದಿದ್ದರೆ. ಸಭೆಯ ೨/೩ ಅಂಶವು ಆತ್ಮರಕ್ಷಣೆಗಾಗಿ ಬಾಲ್ಕನ್ ರಾಜ್ಯಗಳ ವಿರುದ್ಧ ಕ್ರಮತೆಗೆದುಕೊಳ್ಳಲು ವಿಧಿಸಬಹುದು. ಈ ಸದಸ್ಯರಾಷ್ಟ್ರಗಳು ಸಂ. ರಾ. ಸಂಘದಲ್ಲಿ ಅವಶ್ಯವಿದ್ದರೆ ಆ ಮೂರು ಸೋವಿಯೆಟ್ ಅನುಯಾಯಿ ರಾಷ್ಟ್ರಗಳೊಡನೆ ಇರುವ ವ್ಯಾಪಾರ ಸಂಬಂಧವನ್ನು ಕಡಿದುಕೊಳ್ಳಬಹುದು. ಒಂದುವೇಳೆ ನೇರವಾಗಿ ಸೋವಿಯಟ್ ಆಕ್ರಮಣ ಪ್ರಾರಂಭವಾದರೆ ಅದರ ವಿರುದ್ಧ ತಕ್ಕಕ್ರಮವನ್ನು ಇದು ತೆಗೆದುಕೊಳ್ಳಬಲ್ಲುದು. ಬೇಕಾದರೆ ಒಂದು ಸಂಯುಕ್ತ ಸೈನ್ಯವನ್ನಾದರೂ ಗ್ರೀಸಿಗೆ ಕಳುಹಬಹುದು. ಇದರಮೇಲೆ ನಿರ್ವೀರ್ಯವಾಗಿರುವ ಭದ್ರತಾಮಂಡಲದ ಬಲವನ್ನು ಹೆಚ್ಚಿಸಲಾಗುವದು. ಸಾನ್‌ಫ್ರಾನ್ಸಿಸ್ಕೋದಲ್ಲಿ ಆದ ಒಡಂಬಡಿಕೆಯಂತೆ ಪಂಚ ಮಹಾ ಪ್ರಭುತ್ವಗಳು ಒಪ್ಪಿದರೆ ಮಾತ್ರ ಜಗತ್ತಿನ ಶಾಂತಿಗೆ ಭಂಗತರಲು ಪ್ರಯತ್ನಿಸುವ ರಾಷ್ಟ್ರಗಳ ವಿರುದ್ಧ ಕ್ರಮತೆಗೆದುಕೊಳ್ಳಬಹುದಾಗಿತ್ತು. ಅದರ ದುರುಪಯೋಗ ಮಾಡಿಕೊಂಡು ರಶಿಯವು ಅಂಥ ಸಂದರ್ಭಗಳಲ್ಲಿ ಪ್ರತಿಷೇಧಾಧಿಕಾರ ಪ್ರಯೋಗ ಮಾಡಬಂದರೆ ಅದರ ವಿರುದ್ಧ ಈ ಸಭೆಯ ಬೆದರಿಕೆಯನ್ನು ಪಯೋಗಿಸಲಾಗುವುದು. ಅದರಿಂದ ಸಂ. ರಾ. ಸಂಘದ ಕಲ್ಪನೆಯಲ್ಲಿ ಮೂಲಭೂತ ಬದಲಾವಣೆಯಾದಂತಾಗುವದು.

ಪ್ರತಿಷೇಧಾಧಿಕಾರದ ಮೂಲ

ಸಂ. ರಾ. ಸಂಘವು ಸ್ಥಾಪನೆಯಾಗುವ ಕಾಲದಲ್ಲಿ ರಶಿಯ ಮತ್ತು ಅಮೇರಿಕಗಳು ಪಂಚ ಮಹಾ ಪ್ರಭುತ್ವಗಳಿಗೆ ಪ್ರತಿಷೇಧಾಧಿಕಾರ ವಿರಬೇಕೆಂದು ಒತ್ತಾಯ ಪಡಿಸಿದವು. ಅದಕ್ಕೆ ಕಾರಣವೇನೆಂದರೆ ಈ ಐದು ಪ್ರಭುತ್ವಗಳಲ್ಲಿ ಒಂದರ ವಿರುದ್ಧ ಯಾವದಾದರೊಂದು ಸಂದರ್ಭದಲ್ಲಿ ಕ್ರಮತೆಗೆದುಕೊಳ್ಳಲು ಸಭೆ ವಿಧಿಸಿದರೆ ಇಡೀ ಸಂಘವೇ ಕುಸಿದು ಬೀಳುವದೆಂದು ಎಲ್ಲ ಸದಸ್ಯರಾಷ್ಟ್ರಗಳು ಅದಕ್ಕೆ ಒಪ್ಪಿಗೆ ಇತ್ತವು. ಆದರೆ ಪಂಚಮಹಾ ಪ್ರಭುತ್ವಗಳಾದ ರಶಿಯ, ಅಮೇರಿಕ, ಇಂಗ್ಲಂಡ,



ಫ್ರಾನ್ಸ, ಮತ್ತು ಚೀನಗಳಲ್ಲಿ ಒಮ್ಮತವು ಅಸಾಧ್ಯವಾಗಿ ಹೋಯಿತು. ರಶಿಯ, ಅಮೇರಿಕಗಳ ನಡುವಣ ಹಗೆತನವು ದಿನೇ ದಿನೇ ಹೆಚ್ಚಾಗುತ್ತ ಹೋಯಿತು. ಇದರಿಂದ ಎಷ್ಟೋ ಮುಖ್ಯ ವಿಷಯಗಳಲ್ಲಿ ಸಂ. ರಾ. ಸಂಘವು ತಕ್ಕ ಕ್ರಮವನ್ನು ತೆಗೆದುಕೊಳ್ಳಲು ಆತಂಕವುಂಟಾಯಿತು. ಸಂಘದಲ್ಲಿಯ ಬಹು ಸಂಖ್ಯಾಕ ರಾಷ್ಟ್ರಗಳ ಬೆಂಬಲವನ್ನು ಪಡೆಯಲು ಅಮೇರಿಕವು ಶಕ್ತವಾಯಿತು. ಮತ್ತು ಅನೇಕ ಸಂದರ್ಭಗಳಲ್ಲಿ ರಶಿಯದ ವಿರುದ್ಧ ಬಹು ಸಂಖ್ಯಾಕ ರಾಷ್ಟ್ರಗಳು ವಿರುದ್ಧ ಮತ ಕೊಟ್ಟವು. ಅಂಥ ಸಮಯಗಳಲ್ಲೆಲ್ಲ ರಶಿಯವು ತನ್ನ ಪ್ರತಿಷೇಧಾಧಿಕಾರವನ್ನು ಬೇಕು ಬೇಕಾದ ಹಾಗೆ ಪ್ರಯೋಗಿಸಿತು. ಈ ಪ್ರಕಾರ ಅದರ ಪ್ರತಿಷೇಧಾಧಿಕಾರದ ಭಯವು ಸಂಘದ ಅನೇಕ ಕಾರ್ಯಗಳಿಗೆ ವಿಘ್ನಗಳನ್ನೊಡ್ಡುತ್ತಲೇ ಬಂದಿದೆ. ರಶಿಯ ಮತ್ತು ಅಮೇರಿಕಗಳಲ್ಲಿ ಒಡಕುಂಟಾಗದೆ ಕಾರ್ಯಸಾಗಿದ್ದಿದ್ದರೆ ಇಂಡೋನೇಶಿಯ, ದಕ್ಷಿಣ ಆಫ್ರಿಕ, ಮತ್ತು ಪಾಲಿಸ್ತಾನಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮಾತ್ರ. ರಶಿಯದ ಪ್ರತಿಷೇಧಾಧಿಕಾರದ ಭಯವು ಅಂತರ್ರಾಷ್ಟ್ರೀಯ ಪೋಲೀಸು ದಲ ಸ್ಥಾಪನೆಯನ್ನೂ ಅಣುಶಕ್ತಿಯ ನಿಯಂತ್ರಣವನ್ನೂ ತಡೆ ಹಿಡಿಯಿತು. ಪಾಶ್ಚಾತ್ಯ ಬಹುಸಂಖ್ಯಾಕರು ಅದೇ ವೇಳೆಗೆ ಜಗತ್ತನ್ನು ಕೂಡಲೆ ನಿರಾಯುಧಗೊಳಿಸುವ ರಶಿಯದ ಸೂಚನೆಯನ್ನು ಕಾರ್ಯರೂಪಕ್ಕೆ ಬರದಂತೆ ಮಾಡಿದರು. ಸೆಕ್ರೆಟರಿ ಮಾರ್ಶಲ್ಲರ ಸೂಚನೆಗಳಿಂದ ಬದಲಾಗುತ್ತಿರುವ ಸಂ. ರಾ. ಸಂಘದ ಕಲ್ಪನೆಯು ರಶಿಯ ಅಮೇರಿಕೆಗಳ ನಡುವಣ ಭಿನ್ನಾಭಿಪ್ರಾಯವನ್ನು ವಿಸ್ತಾರಗೊಳಿಸುವಂಥದಿದೆ. ಅದೆಂದರೆ ಪ್ರತಿಷೇಧಾಧಿಕಾರವನ್ನು ಮೀರಿ ಸದಸ್ಯರಲ್ಲಿ ೨/೩ ಅಂಶದ ಅಧಿಕಾರವನ್ನು ಹೆಚ್ಚಿಸಿ ರಶಿಯವನ್ನು ಅಲಕ್ಷ್ಯ ಮಾಡಿ ಇಲ್ಲವೆ ರಶಿಯದವಿರುದ್ಧವಾಗಿ ಕ್ರಮತೆಗೆದುಕೊಳ್ಳಲು ಅನು ಮಾಡಿಕೊಳ್ಳುವುದು. ಪರಮಾಣು ಶಕ್ತಿ ನಿಃಶಸ್ತ್ರೀಕರಣ ಮುಂತಾದ ವಿಷಯಗಳಲ್ಲಿ ಮಾತ್ರ ಸರ್ವ ಸದಸ್ಯರ ಒಪ್ಪಿಗೆ ಅವಶ್ಯವಿದ್ದು ಪ್ರತಿಷೇಧಾಧಿಕಾರ ಪ್ರಯೋಗವನ್ನು ಉಳಿಸಿಕೊಳ್ಳಲಾಗುವುದು. ಉಳಿದ ವಿಷಯಗಳಲ್ಲಿ ಪ್ರತಿಷೇಧಾಧಿಕಾರಕ್ಕೆ ಬೆಲೆ ಇಲ್ಲದಂತಾಗುವುದು. ಆದರೆ ಈ ಎಲ್ಲ ಸೂಚನೆಗಳಿಂದ ರಶಿಯದ ವಿರುದ್ಧ ಈ ಕೂಡಲೇ ಬಲಾತ್ಕಾರವನ್ನು ಕೈಗೊಳ್ಳಲಾಗುವದೆಂದು ಎಣಿಸತಕ್ಕದ್ದಲ್ಲ. ಅದು ಎಂದೂ ಉಪಯೋಗಿಸಲ್ಪಡದಿರಬಹುದು. ಆದರೆ ಸಂ. ರಾ. ಸಂಘದ ಚರ್ಚೆಗಳ ಮೂಲಕ ಮತ್ತು ೫೫ ರಾಷ್ಟ್ರಗಳ ಸಭೆಯ ಶಿಫಾರಸಿನ ಮೇರೆಗೆ ಸೂಚನೆಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಅವಿಶ್ರಾಂತವಾಗಿ ಮಾಡಲಾಗುವುದು.

ಸಹಾಯ ಯೋಜನೆಯ ಅಸ್ತ್ರ

ಇದರೊಂದಿಗೆ ಮಾರ್ಶಲ್ಲರ ಸಹಾಯ ಯೋಜನೆಯ ಬಗ್ಗೂ ಒಂದೆರಡು ಮಾತುಗಳನ್ನು ಹೇಳಬಹುದು. ಭದ್ರತಾ ಮಂಡಲವನ್ನು ಸುಭದ್ರ ಮಾಡಹೋಗುವುದರಿಂದ ರಶಿಯಕ್ಕೆ ಹೇಗೆ ಅಧಿಕಾರ ಭಂಗ ಉಂಟಾಗುವುದೋ ಹಾಗೇ ಮಾರ್ಶಲ್ ಯೋಜನೆಯ ಪ್ರಕಾರ ಯುರೋಪ್ಯ ರಾಷ್ಟ್ರಗಳು ಡಾಲರ್ ಸಹಾಯ ಪಡೆದರೆ ಅವರು ಹಾಕುವ ಅನೇಕ ರಾಜಕೀಯ ಕರಾರುಗಳಿಗೆ ಬದ್ಧರಾಗಿ ನಡೆಯಬೇಕಾಗುವುದರಿಂದ ರಶಿಯ ಮತ್ತು ಅದರ ಮಿತ್ರ ರಾಷ್ಟ್ರಗಳು ಸಾಲತೀರುವವರೆಗೆ ಅಮೇರಿಕದ ವಿರುದ್ಧ ಎಲ್ಲೂ ದನಿಯೆತ್ತದಂತಾಗುವುದು. ಈ ಕಾರಣದಿಂದಲೇ ರಶಿಯವು ಮಾರ್ಶಲ್ ಯೋಜನೆಯನ್ನು ತಿರಸ್ಕರಿಸಿತು. ಈ ಮಾರ್ಶಲ್ ಯೋಜನೆಗೆ ಅಮೇರಿಕಕ್ಕೆ ರಾಜಕೀಯ ವರ್ಚಸ್ಸನ್ನು ಹೆಚ್ಚು ಮಾಡಿಕೊಳ್ಳುವುದಲ್ಲದೆ ತನ್ನ ನಾಡಿನ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ಮಾಲುಗಳನ್ನು ಸಾಲ ತೆಗೆದುಕೊಂಡ ಜಗತ್ತಿನ ನಾನಾ ದೇಶಗಳಿಂದ ಅಗ್ಗದ ಬೆಲೆಗೆ ಯಥೇಚ್ಛವಾಗಿ ಕೊಳ್ಳಲನು ಮಾಡಿಕೊಡುವುದೂ ಉದ್ದೇಶವಾಗಿದೆ. ಇದನ್ನರಿತೇ ಕೆಲವು ದೇಶಗಳು ಎಂಥ ಅಗತ್ಯವಿದ್ದರೂ ಅಮೇರಿಕದ ಸಹಾಯವನ್ನು ಪಡೆಯಲು ಹಿಂದೆ ಮುಂದೆ ನೋಡುತ್ತಿವೆ. ನವೆಂಬರ ೧೧ ರಲ್ಲಿ ಫ್ರಾನ್ಸ್, ಇಟಲಿ, ಆಸ್ಟ್ರೀಯಗಳಿಗೆ ನಡುಗಾಲ ಸಹಾಯವಾಗಿ ೫೯ ಕೋಟಿ ೭೦ ಲಕ್ಷ ಡಾಲರುಗಳನ್ನು ಕೊಡಬೇಕೆಂದು ಕಾಂಗ್ರೆಸ್ಸಿನೆದುರು ಮಂಡಿಸಿದುದಾಗಿ ತಿಳಿಯುತ್ತದೆ. ಅದಲ್ಲದೆ ದೀರ್ಘಕಾಲಿಕ ಯೋಜ

—ಪಿ. ಸೀ. ಪ್ರಭಾಕ್ಕ

ರಾಜಕುಮಾರಿ ಅಮೃತಕುವರ

ಕೇಂದ್ರ ಸರಕಾರದ ಪ್ರಥಮ ಸ್ತ್ರೀ ಮಂತ್ರಿಗಳ ವ್ಯಕ್ತಿ ಪರಿಚಯ

ಲೇ:—ಶ್ರೀಮತಿ ಶಾಂತಿ ರಾಪಜ §

ಡಾ. ಪಟ್ಟಾಭಿಯವರು ೧೯೪೨ರ ಸ್ವಾತಂತ್ರ್ಯ ಹೋರಾಟವನ್ನು ಬಣ್ಣಿಸುವಾಗ ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದಾರೆ.

"ಅರಸು ಮನೆತನದಲ್ಲಿ ಹುಟ್ಟಿ, ಅರಮನೆಯಲ್ಲಿಯೇ ಬೆಳೆದು ಉತ್ಕೃಷ್ಟ ಶಿಕ್ಷಣವನ್ನೂ ಸನ್ಮಾನಗಳನ್ನೂ ಸಂಪಾದಿಸಿದ ರಾಜಕುಮಾರಿ ಅಮೃತಕುವರ ಅವರು ದೇಶಕ್ಕಾಗಿ ಮಾಡಿದ ಅಪೂರ್ವವಾದ ತ್ಯಾಗವನ್ನೂ ಸೇವೆಯನ್ನೂ ಹಿಂದುಸ್ತಾನದ ಇತಿಹಾಸಕಾರರೆಂದಿಗೂ ಮರೆಯಲಾರರು. "ಕಾಲ್ಕಾ ಎಂಬಲ್ಲಿ ಇವರನ್ನು ೧೯೪೨ ಅಕ್ಟೋಬರ ೩ನೇ ತಾರೀಖಿನದಿನ ಬಂಧಿಸಿ ಅಂಬಾಲಾ ಜೇಲಿಗೆ ಕರೆದುಕೊಂಡು ಹೋದರು. ಹೊರಡುವಾಗ್ಗೆ ಅವರಿಗೆ ನಿಮ್ಮನ್ನು ಲಾಹೋರಿಗೆ ಕಳಿಸಲಾಗುವದು. ಅಲ್ಲಿ ಸ್ತ್ರೀ ಸ್ಥಾನಬದ್ಧರನ್ನಿಡಲು ತಕ್ಕ ವ್ಯವಸ್ಥೆ ಮಾಡಲಾಗಿದೆ. ಅದಕ್ಕಾಗಿ ನೀವು ಹೆಚ್ಚಿನ ವಸ್ತ್ರ ಅಥವಾ ಸಾಮಾನುಗಳನ್ನು ತಕ್ಕೊಳ್ಳುವ ಅವಶ್ಯಕತೆಯಿಲ್ಲ. ಎಂದು ಹೇಳಿದರು. ಅದನ್ನು ನಂಬಿ ಕುವರರು ಎರಡು ಸೀರೆ, ಒಂದು ರಾಟಿ, ಒಂದು ಬೈಬಲ್, ಒಂದು ಗೀತಾ ಇಷ್ಟೇ ಸಾಮಾನುಗಳನ್ನು ತಕ್ಕೊಂಡರು. ಆದರೆ ನರಕ ಸಮಾನವಾದ ಆ ಅಂಬಾಲಾ ಜೇಲಿನಲ್ಲಿಯೇ ಆ ಅರಸುಕನ್ನೆಯನ್ನು ಒಂದ



(ಶ್ರೀಮತಿ ಶಾಂತಿ ರಾಪಜ)

ತಿಂಗಳ ವರೆಗೆ ಕೊಳೆಸಿದರು. ಅವರೂ ಆ ಸತ್ಯಾಗ್ರಹಿಯು ಹಿಮ್ಮೆಟ್ಟಲಿಲ್ಲ. ಅಂಬಾಲಾ ಜೇಲಿಗೆ ರಾತ್ರಿ ಸುಮಾರು ಒಂದು ಗಂಟೆಗೆ ಮುಟ್ಟಿದರು. ಅಲ್ಲಿಯ ಸ್ತ್ರೀಯರ ವಾರ್ಡಿನಲ್ಲಿ ಅವರನ್ನು ಒಗೆದರು. ಅದರ ಜೀರ್ಣವಾದ ಗೋಡೆಗಳು ಅನೇಕ ಪಾಚಿಗಳ ಮಲಮೂತ್ರದಿಂದ ತುಂಬಿಕೊಂಡಿದ್ದವು. ಆ ದುರ್ಗಂಧಯುಕ್ತ ಕೋಣೆಗಳಲ್ಲಿಯೇ ಅವರಿಗೆ ಇರಬೇಕಾಯ್ತು. ಒಮ್ಮೆ ಅದರ ಗೋಡೆ ಬಿದ್ದು ಇವರ ಭುಜಕ್ಕೆ ಚನ್ನಾದ ಪೆಟ್ಟು ತಗಲಿತು. ಸ್ತ್ರೀಯರ ಮರ್ಯಾದೆ ಕಾಯುವ ಒಂದು ಪ್ರತ್ಯೇಕ ಜಳಕದ ಮನೆ ಸಹ ಅಲ್ಲಿರಲಿಲ್ಲ. ಬೈಲಲ್ಲಿಯೇ ಜಳಕ ಮಾಡಬೇಕು. ಇನ್ನು ಅಲ್ಲಿಯ ಊಟವೂ ಆ ವಾತಾವರಣಕ್ಕೆ ಯೋಗ್ಯವಿತ್ತು. ೧೫ ದಿವಸಗಳಲ್ಲಿ ಮೂರು ಸಾರೆ ಅಮೃತಕುವರರಿಗೆ ಊಟಕ್ಕೆ ಕೊಡುವುದನ್ನೇ ಅಧಿಕಾರಿಗಳು ಮರೆತಿದ್ದರು. ಸಾಮಾನ್ಯ ಕೈದಿಗೂ ಇವರಂಥ ಸತ್ಯಾಗ್ರಹಿಗೂ ಏನೂ ಅಂತರವಿರಲಿಲ್ಲ ಇಡೀ ಸ್ತ್ರೀ ವಾರ್ಡಿನಲ್ಲಿ ಇವರೊಬ್ಬರೇ ಒಬ್ಬರು. ಇಂಥ ಘೋರ ಏಕಾಂತ ವಾಸದಲ್ಲಿ ೩ ವಾರ ಕಳೆದ ನಂತರ ೫ ಸ್ತ್ರೀ ಸಹವಾಸಿಗಳು ಇವರಿಗೆ ಸಿಕ್ಕರು. ಅವರನ್ನು ಅಲ್ಲಿ ಹಿಡಿದು ತರಲಾಗಿತ್ತು. ಶ್ರೀ. ಶ್ರೀಮತಿ ಸತ್ಯವತಿ ದೇವಿಯವರೂ ಅವರಲ್ಲಿಯ ಒಬ್ಬರು.

ಈ ಪ್ರಕಾರ ಎರಡು ತಿಂಗಳ ನರಕವಾಸದಲ್ಲಿ ರಾಜಕುಮಾರಿ ಕುವರರು ೧೪ ಪೌಂಡು ತೂಕ ಕಳೆದುಕೊಂಡಲ್ಲದೆ ಬೇನೆ ಬಿದ್ದು ಹಾಸಿಗೆಯನ್ನೇ ಹಿಡಿದರು. ಕಡೆಗೆ ಸರಕಾರಕ್ಕೆ ನಿರುಪಾಯವಾಗಿ ಅವರನ್ನು ಅವರ ಸ್ವಂತದ ಬಂಗಲೆಗೆ ಸಾಗಿಸಬೇಕಾಯಿತು. ಆ ಬಂಗ್ಲೆಯಲ್ಲಿ ಅವರಿಗೆ ೨೦ ತಿಂಗಳ ವರೆಗೆ ಅಖಂಡವಾದ 'ಚಿಪ್ಪ-ಸೆರೆ'ಯಲ್ಲಿ ಇರಬೇಕಾಯ್ತು. ಈ ಅವಧಿಯಲ್ಲಿ ಅವರ ಅಣ್ಣಂದಿರು ತೀರಿಕೊಂಡರೂ ಸರಕಾರವು ಅವರು ತಮ್ಮ ಅಣ್ಣರಿಗೆ ಬರೆದ ಸಾಂತ್ವನಪರ ಪತ್ರವನ್ನೂ ಸಹ ಮುಟ್ಟಿಸಲು ಒಪ್ಪಲಿಲ್ಲ.

ಇಂಥ ಅನೇಕ ಸಂಗತಿಗಳಿಂದ ಶ್ರೀಮತಿ ಅಮೃತ ಕುವರರ ಜೀವನ ಚರಿತ್ರೆಯು ಕೂಡಿಕೊಂಡಿದೆ. ಆದರೆ ಇಲ್ಲಿಯ ವರೆಗೆ ಅವರ ಚರಿತ್ರೆಯು ಅಷ್ಟು ಬಯಲಿಗೆ ಬರಲಿಲ್ಲ ಅದಕ್ಕೆ ಅಮೃತ ಕುವರರೇ ಕಾರಣರು. ತಮ್ಮ ರಾಜಮನೆತನದ ಬಗ್ಗೆ ಆಗಲಿ ಅಥವಾ ತಮ್ಮ ಕೆಲಸದ ಬಗ್ಗೆ ಆಗಲಿ ಅವರು ಮತ್ತೊಬ್ಬರ ಮುಂದೆ ಒಂದು ಶಬ್ದವನ್ನು ಸಹ ಆಡುವದಿಲ್ಲ ಯಾವಾಗಲೂ ಮೌನದಿಂದಲೇ ತಮ್ಮ ಕೆಲಸವನ್ನು ಮಾಡುತ್ತಿರುವರು. ಜಾಹಿರಾತ ಬೇಡ ಅವರಿಗೆ. ಮೊನ್ನೆ ಕೇಂದ್ರ ಸರಕಾರದ ಆರೋಗ್ಯಮಂತ್ರಿಗಳಾಗಲು ವಾಡಿಕೆಯ ಪ್ರಕಾರ ಪತ್ರಿಕಾಕರ್ತರ ಸಭೆಯೊಂದನ್ನು ಕರೆಯಬೇಕೆಂದು ಇವರಿಗೆ ಎಲ್ಲರೂ ಸೂಚಿಸಿದರು. ಇವರಿಗೆ ವರ್ತಮಾನ ಪತ್ರದ ಜಾಹೀರಾತಿಯೂ ಬೇಡಾಗಿತ್ತು. ಕಡೆಗೆ ಪ್ರಸಂಗಾಧೀನರಾಗಿ ಪಂಜಾಬ ಗಲಭೆ ಪ್ರದೇಶಗಳಿಗೆ ಭೆಟ್ಟಿ ಕೊಟ್ಟು ಬಂದ ಮೇಲೆ ಪತ್ರಿಕಾಕರ್ತರಿಗೆ ತಮ್ಮ ಸಂದರ್ಶನ ಕೊಟ್ಟು ತಮ್ಮ ವರದಿಯನ್ನು ಅವರಿಗೆ ಒಪ್ಪಿಸಿದರು.

ಪಂಜಾಬದ ಕಪುರಥಾಲಾ ಸಂಸ್ಥಾನದ ಸದ್ಯದ ಮಹಾರಾಜರ ಚಿಕ್ಕಂದಿರಾದ ಸರದಾರ ಸರ ಹರನಾಮ ಸಿಂಘರೇ ಅಮೃತಕುವರರ ಪಿತರು. ಅವರಿಗೆ ಏಳು ಮಕ್ಕಳಲ್ಲಿ ಈಕೆಯೊಬ್ಬಳೇ ಮಗಳು. ರಾಜ ಹರನಾಮ ಸಿಂಘರು ಅನೇಕ ವರುಷಗಳಿಂದ ಕಪುರಥಾಲಾ ಸಂಸ್ಥಾನದ ಜಹಗೀರಗಳ ವ್ಯವಸ್ಥಾಪಕರಾಗಿದ್ದರು. ೧೮೭೫ ರವರೆಗೂ ಆ ಕೆಲಸ ವಹಿಸಿದರು. ಅವರು ಬಹುಕಾಲದವರೆಗೆ ಗವ್ಹರ್ನರ ಜನರಲ್‌ರ ಕೌನ್ಸಿಲದ ಹಾಗೂ ಪ್ರಾಂತಿಕ ಕಾಯದೇ ಮಂಡಳದ ಸಭಾಸದರಾಗಿದ್ದರು ಸಿಮ್ಲಾದಲ್ಲಿಯೂ ಜಲಂದರದಲ್ಲಿಯೂ ಅವರು ಇದ್ದರು. ಅವರ ವಕ್ತೃತ್ವಕ್ಕೂ ಮುತ್ಸದ್ದಿತನಕ್ಕೂ ಮೆಚ್ಚಿ ಸರಕಾರದವರು ಅವರಿಗೆ ಕೆ. ಸಿ. ಆಯ. ಇ. ಪದವಿಯನ್ನು ಕೊಟ್ಟಿದ್ದಲ್ಲದೆ, ಅವರಿಗೆ "ರಾಜಾ" ಎಂಬ ಬಿರುದನ್ನು ಕೊಟ್ಟರು.

ರಾಜಾ ಹರನಾಮ ಸಿಂಘರು ಅರಸುಮನೆತನದವರಿದ್ದರೂ ಒಳ್ಳೆ ಪ್ರಗತಿ ಶೀಲರಿದ್ದರು. ಅವರ ಮನೆಯೆಂದರೆ, ಆಗಿನ ರಾಜಕಾರಣಗಳಿಗೆ ತತ್ವಜ್ಞಾನಿಗಳಿಗೆ, ಹಾಗೂ ಇತರ ಕಾರ್ಯಕರ್ತರಿಗೆ ಆಶ್ರಮಸ್ಥಾನವಾಗಿತ್ತು. ಇವರು ಮುಂದೆ ಕ್ರಿಶ್ಚನ್ ಧರ್ಮವನ್ನು ಸ್ವೀಕರಿಸಿದರು.

ಅಮೃತ ಕುವರರವರು ೧೮೮೭ ಫೆಬ್ರುವರಿ ೨ನೇ ತಾರೀಖಿನದಿನ ಜನ್ಮಿಸಿದರು. ಅವರ ಶಿಕ್ಷಣವು ಡೊರ್ಚೆಸ್ಟರ ಹಾಗು ಲಂಡನದಲ್ಲಿ ಆಯಿತು. ಮುಂದೆ ಅವರು ಅದೇ ಸಂಸ್ಥೆಯಲ್ಲಿ ಪ್ರಾಧ್ಯಾಪಿಕೆಯ ಶ್ರೇಯಸ್ಸಿನ ಸ್ಥಾನ ಪಡೆದರು. ಅವರು ಇಂಗ್ಲೀಷ ಫ್ರೆಂಚ ಹಾಗೂ ಸಂಗೀತದಲ್ಲಿ ವಿಶೇಷ ಜ್ಞಾನ ಸಂಪಾದಿಸಿದ್ದಾರೆ. ಅವರು ಟೆನಿಸ ಆಟದಲ್ಲಿ ಅತ್ಯಂತ ನಿಷ್ಣಾತರಿದ್ದು ತಮ್ಮ ಕಾಲಕ್ಕೆ ಅನೇಕ ಬಹುಮಾನಗಳನ್ನು ಗಳಿಸಿದ್ದಾರೆ. ಈಗ್ಗೆ ಅವರಿಗೆ ೬೦ ವರುಷಗಳಾದರೂ ಅವರ ಕಾರ್ಯತತ್ಪರತೆ ಹಾಗೂ ಉತ್ಸಾಹವನ್ನು ನೋಡಿದರೆ ನಮ್ಮ ತರುಣರು ಬೆರಳು ಕಚ್ಚಬಹುದು

ತಮ್ಮ ತಂದೆಯವರ ಸಹಾಯದಿಂದ ಅವರಿಗೆ ಚಿಕ್ಕಂದಿನಲ್ಲಿಯೇ ಗೋಪಾಲಕೃಷ್ಣ ಗೋಖಲೆ ಸುರೇಂದ್ರನಾಥ ಬ್ಯಾನರ್ಜಿ ಮದನ ಮೋಹನ ಮಾಲವಿಯರಂಥ ಪ್ರಭೃತಿಗಳ ಪರಿಚಯ ಸಾನ್ನಿಧ್ಯಗಳು ಉಂಟಾಗಿ ದೇಶಪ್ರೇಮವು ಪ್ರಜ್ವಲಿಸಿತು. ಉಳಿದ ರಾಷ್ಟ್ರಪ್ರೇಮಿಗಳಂತೆ ಸ್ವತಂತ್ರ್ಯಕ್ಕಾಗಿ ಪ್ರಾಣಾರ್ಪಣೆಯನ್ನು ಸಹ ಮಾಡಲು ತಾವೂ ಸಿದ್ಧಕಟ್ಟಿದರು. ಮುಂದೆ ೧೯೧೫ ರಲ್ಲಿ ಗಾಂಧೀಜಿಯವರು ಹಿಂದುಸ್ತಾನಕ್ಕೆ ಬರಲು ಅವರ ಮಾರ್ಗದರ್ಶನದಲ್ಲಿ ತಮ್ಮ ನಿರ್ಧಾರವನ್ನು ಕೃತಿಯಲ್ಲಿಳಿಸಿಬಿಟ್ಟರು.

ಅನಂತರ ಅವರ ಜೀವನ ವೃತ್ತಿಯೇ ಮಾರ್ಪಟ್ಟಿತು. ತಮ್ಮ ರಾಜಮಹಲನ್ನು ಮತ್ತು ರಾಜ ಮನೆತನದ ಎಲ್ಲ ಸುಖೋಪಭೋಗಗಳನ್ನು ತೊರೆದು, ಒರಟಾದ ಖಾದಿ ಪಟ್ಟಿಯನ್ನು ಧರಿಸಿ, ಕೇವಲ ಖಾದಿಧಾರಿಗಳಾಗಿ, ಸ್ವದೇಶದಲ್ಲಿಯೂ ಪರದೇಶದಲ್ಲಿಯೂ ತಮಗೆ ದೊರೆತ ಮಾನ ಸನ್ಮಾನಗಳನ್ನು ಆಶೆ ಆಕಾಂಕ್ಷೆಗಳನ್ನು ತ್ಯಜಿಸಿ, ಗಾಂಧಿ ಆಶ್ರಮವಾಸಿಗಳಾಗುವದರಲ್ಲಿಯೇ ಸಂತೋಷ ಹೊಂದಿದರು. ಅದೊಂದು ಆದರ್ಶ ತ್ಯಾಗವೇ ಸರಿ.

ಅಮೃತ ಕೌರು ಭಾರತದ ಆದರ್ಶ ಮಹಿಳೆಯರು. ಸ್ತ್ರೀಜಾಗೃತಿಗಾಗಿ ಸರೋಜಿನಿಯವರೊಂದಿಗೆ ಪ್ರಾರಂಭಿಸಿ ಹೆಣಗುತ್ತಿದ್ದಾರೆ. ಅಖಿಲಭಾರತ ಮಹಿಳಾ ಪರಿಷತ್ತಿಗೆ ಇವರೂ ಒಬ್ಬ ಮುಖ್ಯ ಸಂಸ್ಥಾಪಕರೂ ಆಧಾರಸ್ತಂಭವೂ ಇರುವರು. ಅವರ ಮಾರ್ಗದರ್ಶನವಿಲ್ಲದ ಸ್ತ್ರೀ ಚಟುವಟಿಕೆಗಳೇ ಇಲ್ಲ. ಸ್ತ್ರೀಯರ ಭವಿಷ್ಯದ ಬಗ್ಗೆ ಗಾಂಧೀಜಿಯವರ ಕೂಡ ಚರ್ಚಿಸಿ ತಮ್ಮ ವಿಚಾರಗಳನ್ನು ಇವರು "To women" ಎಂಬ ಚಿಕ್ಕ ಪುಸ್ತಕದಲ್ಲಿ ಒಳ್ಳೇ ಸ್ಫುಟವಾಗಿಯೂ ಸರಳವಾಗಿಯೂ ವ್ಯಕ್ತಪಡಿಸಿದ್ದಾರೆ. ಭಾರತ ಸಂಸ್ಕೃತಿಗೂ ಹಾಗೂ ಆಧುನಿಕ ವಾತಾವರಣಕ್ಕೂ ಅನುಕೂಲವಾಗಿ ವರ್ತಿಸಲು ನಮ್ಮ ಹಿಂದೀಯ ಮಹಿಳೆಯರು ಯಾವತರದ ಶಿಕ್ಷಣ ಪಡೆಯಬೇಕು ಏನುಮಾಡಬೇಕು. ಎಂಬುದನ್ನು ಸಾರಾಂಶವಾಗಿ ಅದರಲ್ಲಿ ಹೇಳಲಾಗಿದೆ.

ತಮ್ಮ ಆಂತರಾಷ್ಟ್ರೀಯ ಗೆಳೆತನದಿಂದ ಹಿಂದುಸ್ತಾನದ ಮಹಿಳೆಯರ ಕೂಗನ್ನು ದಿಗಂತದ ವರೆಗೂ ಹಬ್ಬಿಸಿದ ಶ್ರೇಯಸ್ಸು ಆನಿಬೆಸೆಂಟ ಸರೋಜಿನಿ ನಾಯಡು ಹಾಗೂ ರಾಜಕುಮಾರಿ ಅಮೃತಕೌರ ಮೂವರಿಗೇ ಸಲ್ಲುತ್ತದೆಂದರೆ ಅತಿಶಯೋಕ್ತಿಯಾಗಲಾರದು. ಇವರು ಭಾರತ ಮಹಿಳೆಯರಉನ್ನತಿಗಾಗಿ ಕಾರ್ಯ ಮಾಡಿದ್ದಾರೆ. ಅಖಿಲ ಭಾರತ ಮಹಿಳಾಪರಿಷತ್ತಿನ, ಮುಖಾಂತರ ಹಾಗೂ ಹಿಂದಿನ ಸರಕಾರದ ಸಲಹಾ ಸಮಿತಿಯ ಸ್ತ್ರೀ ಸದಸ್ಯರಾಗಿಯೂ ಮತ್ತು ಅನೇಕ ಮಹಿಳಾ ಸಂಸ್ಥೆಗಳ ಪರವಾಗಿಯೂ ಅವರು ತಮ್ಮ ಧ್ಯೇಯವನ್ನು ಸಾಧಿಸಲು ಯತ್ನಿಸಿದರು. ಹಿಂದುಸ್ತಾನದಲ್ಲಿ ಆಗಾಗ್ಗೆ ಆಗುವ ಘಟನಾತ್ಮಕ ಹಾಗೂ ರಾಜಕೀಯ ಬದಲಾವಣೆಗಳಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಕಾಪಾಡಲು ಇವರು ಮುಂದೆ ಇದ್ದೇ ಇರುತ್ತಿದ್ದರು. ೧೯೩೦ ರ ದುಂಡುಮೇಜಿನ ಪರಿಷತ್ತಿನ ಸಮಯಕ್ಕೆ ಇವರು ಸ್ತ್ರೀಯರ ಬಗ್ಗೆ ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟರು. ಅದೇ ಕಾರಣಕ್ಕಾಗಿ ಸಹ ಇವರು ಲಾರ್ಡ ಲೋದಿಯನರ ಮುಂದೆಯೂ ತಮ್ಮ ಹೇಳಿಕೆಯನ್ನು ಕೊಟ್ಟರು.

ಅದರಂತೆ ಇವರು ಶಿಕ್ಷಣದ ವಿಷಯದಲ್ಲಿಯೂ ಅತ್ಯಂತ ಅನುಭವಿಕರಿದ್ದಾರೆ. ಅವರು ಇಲ್ಲಿಯ ವರೆಗೆ ಮಾಡಿದ ಶಿಕ್ಷಣದ ಸೇವೆಯೇ ಅವರನ್ನು ೧೯೪೬ ನೆ ನವ್ಹೆಂಬರಿನಲ್ಲಿ ಜರುಗಿದ ಶಿಕ್ಷಣ ವಿಜ್ಞಾನ, ಹಾಗು ಸಂಸ್ಕೃತಿಗಳ ಯುಕ್ತರಾಷ್ಟ್ರ ಪರಿಷತ್ತಿಗೆ ಹಿಂದುಸ್ತಾನದ ಪ್ರತಿನಿಧಿಯಾಗಿ ಹೋಗಲು ಅರ್ಹರನ್ನಾಗಿ ಮಾಡಿತು. ಅವರು ಈ ಕಾರ್ಯದಲ್ಲಿ ತೋರಿಸಿದ ಯೋಗ್ಯತೆಯಿಂದಲೇ ಹಾಗೂ ಅವರು ಸಂಪಾದಿಸಿದ, ಅಂತರಾಷ್ಟ್ರೀಯ ಕೀರ್ತಿಯಿಂದಲೇ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳು ಮೂರು ಉಪಾಧ್ಯಕ್ಷರುಗಳಲ್ಲಿ ಇವರನ್ನು ಒಬ್ಬರನ್ನಾಗಿ ಆರಿಸಿದರು. ಗಾಂಧೀಜಿಯವರ ಕಾರ್ಯದರ್ಶಿಯಾಗಿ ಕೆಲಸಮಾಡುವ ಯೋಗ್ಯತೆಯನ್ನು ಅವರು ಸಂಪಾದಿಸಿದ್ದಾರೆ. ಅವರು ಗಾಂಧೀಜಿಯವರ ಕಾರ್ಯದರ್ಶಿಗಳಿದ್ದಾಗ ಪರದೇಶದ ಕೀರ್ತಿವೆತ್ತ ಬರಹಗಾರರ, ರಾಜಕಾರಣಿಗಳ ತತ್ವಜ್ಞಾನಿ ವಿಜ್ಞಾನಿಗಳ ನಿಕಟ ಪರಿಚಯವನ್ನು ಮಾಡಿಕೊಂಡಿದ್ದಾರೆ. ಮಿಸ ಅಗೆಥಾ ಹ್ಯಾರಿಸನ ಮಿ. ಹೊರೇಸ ಅಲೆಕ್ಝಾಂಡರ, ಮಿಸ್ ಮ್ಯುರಿಯಲ್ ಲೆಸ್ಟರ ಇವರ ಸ್ನೇಹವಂತೂ ವಿಶೇಷವಾಗಿದೆ.

ಈ ಎಲ್ಲ ಯೋಗ್ಯತೆಗೆ ತಕ್ಕ ವಿನಯ ಅವರಲ್ಲಿದೆ. ಒಂದು ದೃಷ್ಟಿಯಿಂದ ಅವರಲ್ಲಿ ವಿದ್ಯೆಗಿಂತ ವಿನಯವೇ ಹೆಚ್ಚಾಗಿದೆ. ಎಂದು ಹೇಳಬಹುದು. ಅವರ ಈ ಘಟನೆಗೆ ಅವರ ಸಾಹಸಶೀಲ ಸರಳ ಪ್ರೇಮಳ ಸ್ವಭಾವವೇ ಮುಖ್ಯ ಕಾರಣವೆಂದು ಹೇಳಬಹುದು. "ನನ್ನ ದೇಹದ ಎಲ್ಲವೂ ಬಾಪೂಜಿಗೆ ಸೇರಿವೆ" ಎಂದು ಅವರು ಹೇಳುತ್ತಾರೆ. ಅವರ ನಿರಹಂಕಾರ ನಿಷ್ಕಾಮ ನಿರಾಕಾಂಕ್ಷ ಮನೋವೃತ್ತಿಯೇ ಅವರನ್ನು ಹೊಣೆಗಾರವಾದ ಕೇಂದ್ರದ ಮಂತ್ರಿಪದಕ್ಕೆ ಏರಿಸಿದೆ. ಅದರಿಂದ ಭಾರತದ ಮಹಿಳೆಯರಷ್ಟೇ ಏಕೆ, ಇಡೀ ಸ್ತ್ರೀ ಜನಾಂಗಕ್ಕೆ ಅಪೂರ್ವ ಗೌರವವನ್ನೂ ಕೀರ್ತಿಯನ್ನೂ ತಂದುಕೊಟ್ಟಿದ್ದಾರೆ.

ಒಬ್ಬ ಸುಪ್ರಸಿದ್ಧ ಬರಹಗಾರರು ತಮ್ಮ 'ನೂರಜಹಾನ' ಎಂಬ ಕಾದಂಬರಿಯನ್ನು ಬರೆದು ಅಮೃತಕೌರರನ್ನು ಉದ್ದೇಶಿಸಿ— Royal by descent and royal to her finger tops and most royal in her friendship.— ಎಂದು ಇವರ ವ್ಯಕ್ತಿ ಚಿತ್ರವನ್ನು ವರ್ಣಿಸಿ ತಮ್ಮ ಕೃತಿಯನ್ನು ಅವರಿಗೆ ಅರ್ಪಿಸಿದ್ದಾರೆ. ಶ್ರೀಮತಿ ಅಮೃತಕೌರರ ಕೂಡ ಪಂಜಾಬದ ಗಲಭೆ ಪ್ರದೇಶಗಳಿಗೆ ಭೆಟ್ಟಿ ಕೊಟ್ಟ ಸರ ಮೌಂಟಬ್ಯಾಟನರೂ ಸಹ ಒಂದು ಸಂದರ್ಭದಲ್ಲಿ "A Himalayan task faces the new India in building her social services. I am sure that my great friend, Rajkumari Amrit Kaur, the new minister for Health, will rise to the challenge for she has abundant energy. vision and knowledge. And she will have the help of competent colleagues" ಎಂದು ಹೇಳಿದ್ದಾರೆ.



(ರಾಜಕುಮಾರಿ ಅಮೃತಕೌರ)

§ ಈ ಚಿಕ್ಕ ಲಬ್ಧ ಚಿತ್ರದ ಲೇಖಿಕೆಯಾದ ಶ್ರೀ. ಶಾಂತಿ ರಾಪಜ ಎಂಬವಳು ಸಂತಾಲಿ ರಂಬ ಜಾತಿ ಜನರಲ್ಲಿ ಹುಟ್ಟಿ ಬೆಳೆದು ಗ್ರಾಜ್ಯುಏಟ ಪರೀಕ್ಷೆಯನ್ನು ಪಾಸಾಗಿ ಈಗ ದಿಲ್ಲಿಯಲ್ಲಿ ಪತ್ರ ಪತ್ರ ವ್ಯವಸಾಯದಲ್ಲಿ ದುಡಿಯುತ್ತಿರುವಳು.

ಯುರೋಪನ್ನು ಸ್ವಾಹಾಕರಿಸಲು ಮಾರ್ಶಲ್ಲರ ತಂತ್ರ

(ಮೊದಲನೇ ಪುಟದಿಂದ)

ನೆಗೆ ಸುಮಾರು ೧೬೦ ಕೋಟಿಯಿಂದ ೨೦೦ ಕೋಟಿ ಡಾಲರುಗಳ ವರೆಗೆ ಬೇಕಾಗಬಹುದೆಂದು ಮಾರ್ಶಲ್ಲರು ಲೆಕ್ಕ ಹಾಕಿದ್ದಾರಂತೆ. ನಡುಗಾಲ ಸಹಾಯವನ್ನು ಇಂದಿನಿಂದ ಮಾರ್ಚಿಯವರೆಗೂ ದೀರ್ಘ ಸಹಾಯವನ್ನು ಏಪ್ರಿಲ್ಲಿನಿಂದ ಮುಂದೆಯೂ ಅಮೇರಿಕನ್ನರಿಂದ ತರಲು ಯತ್ನ ನಡೆಸಲಾಗುತ್ತಿದೆ. ಇದರೊಂದಿಗೆ ಚೀನಕ್ಕೆ ಬೇರೊಂದು ಯೋಜನೆ ತಯಾರಿಸಿ ಅದರ ಪ್ರಕಾರ ಸಹಾಯ ಸಲ್ಲಿಸಲು ಕಾರ್ಯವನ್ನು ಕೈಕೊಳ್ಳಲಿರುವದಾಗಿ ಮಾರ್ಶಲ್ಲರು ಹೇಳಿದ್ದಾರೆ.

ಮೇಲಿನ ಸಂಗತಿಗಳಿಂದ ಅಮೇರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ರಶಿಯವನ್ನು ಅದರ ಮನೆಯಲ್ಲಿಯೇ ಬಂಧಿಸಿಡಲು ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನು ತೆಗೆದುಕೊಳ್ಳಲು ಹವಣಿಸುತ್ತಿರುವುದು ಸ್ಪಷ್ಟವಾಗುತ್ತದೆ. ಇವರಿಂದ ಸಂಭವಿಸುವ ಯುದ್ಧದಂತಹ ವಿಶ್ವ ಸಮರವೊಂದು ನಡೆಯಬಹುದೋ ಹೇಗೆಂಬ ಭಯ ಜಗತ್ತಿನ ಸಾತ್ವಿಕ ರಾಷ್ಟ್ರಗಳಿಗೆ ಬಡಿದುಕೊಂಡಿದೆ. ಸತ್ಯಕ್ಕೆ ಜಯವೋ ಸತ್ವಕ್ಕೆ ಜಯವೋ, ಸತ್ಯದಿಂದ ಸತ್ವವೋ ಸತ್ವದಿಂದ ಸತ್ಯವೋ ಎಂಬುದನ್ನು ನಿರ್ಣಯಿಸುವ ಕಾಲ ಸಮೀಪಿಸುತ್ತಿದೆ!

ಮಂತ್ರಿ ಚತುಷ್ಟಯದ ಸಭೆ

ನಾಳಿನ ಮಂತ್ರಿ ಚತುಷ್ಟಯದ ಸಭೆಗಾಗಿ ರಶಿಯದ ಪರರಾಷ್ಟ್ರ ಮಂತ್ರಿಗಳಾದ ಎಂ. ಮೊಲಟೋವರು ವಿಮಾನ ಮಾರ್ಗವಾಗಿ ಲಂಡನ್ನಿಗೆ ತಾ. ೨೩ ರಲ್ಲಿ ಬಂದು ಮುಟ್ಟಿದರೆಂದು ತಿಳಿಯುತ್ತದೆ.

ಕಾಂಗ್ರೆಸ್ ಅಧ್ಯಕ್ಷರ ರಾಜೀನಾಮೆ

ನವೆಂಬರ ಮಧ್ಯದಲ್ಲಿ ಜರಗಿದ ಅ. ಭಾ. ಕಾಂಗ್ರೆಸ ಅಧಿವೇಶನದಲ್ಲಿ ಅಧ್ಯಕ್ಷ ಕೃಪಲಾನಿಯವರು ರಾಜೀನಾಮೆ ಕೊಟ್ಟದ್ದು ಕಾಂಗ್ರೆಸ ಇತಿಹಾಸದಲ್ಲಿ ಅಪೂರ್ವ ಪ್ರಸಂಗ. ಸುಮಾರು ೧೦ ವರ್ಷ ಹಿಂದೆ ಸುಭಾಸಬೋಸರಿಗೂ ಇಂಥ ಸ್ಥಿತಿ ಬಂದಿದ್ದರೂ ಅಗಿನ ಘಟನೆಗಳ ರೂಪ ಬೇರೆಯೆ ಇತ್ತು. ಕೃಪಲಾನಿಯವರ ರಾಜೀನಾಮೆ ಕಾಂಗ್ರೆಸ ಸಮಿತಿಗಳಿಗೂ ಕಾಂಗ್ರೆಸ್ ಸರಕಾರಗಳಿಗೂ ಈಗೀಗ ಬೆಳೆಯುತ್ತ ಬಂದಿರುವ ತಿಕ್ಕಾಟದ ಒಂದು ಅವಿರ್ಭಾವವೆಂದು ಹೇಳಬೇಕು. ಈ ವರೆಗೆ ಪ್ರಾಂತಗಳ ಹಂತದಲ್ಲಿ ಮಾತ್ರ ಈ ತಿಕ್ಕಾಟದ ಪ್ರದರ್ಶನ ಆಗಿಂದಾಗ್ಗೆ ಆಗುತ್ತ ಬಂದಿದೆ. ಕಾಂಗ್ರೆಸ ಸಮಿತಿಗಳ ಸಲಹೆಗಳನ್ನು ಕಾಂಗ್ರೆಸ ಸರಕಾರಗಳು ಕೇಳುವದಿಲ್ಲ. ಕೇಳಿದರೂ ಅವನ್ನು ನಡೆಸುವದಿಲ್ಲವೆಂಬ ದೂರುಗಳು ಬಹಿರಂಗವಾಗಿ ವ್ಯಕ್ತಗೊಳಿಸಲ್ಪಟ್ಟವೆ. ಆದರೆ ಕೆಳದರ್ಜೆಯ ಕಾಂಗ್ರೆಸ ಸಮಿತಿಗಳು ಹೊಣೆಗೇಡಿಗಳಿಂದಲೂ ಸ್ವಾರ್ಥಿಗಳಿಂದಲೂ ತುಂಬಿವೆಯೆಂದು ಅದಕ್ಕೆ ಸಮಾಧಾನ ಹೇಳಲಾಗುತ್ತಿತ್ತು. ಈಗ ಕಾಂಗ್ರೆಸಿನ ಶ್ರೇಷ್ಠತಮ ಮುಂದಾಳುಗಳಲ್ಲಿಯೇ ಈ ತಿಕ್ಕಾಟ ಬಂದು ಕಾಂಗ್ರೆಸ ಸರಕಾರಗಳಿಗೆ (ಕೇಂದ್ರ ಸಹಿತ) ತಮ್ಮಲ್ಲಿ ವಿಶ್ವಾಸವಿಲ್ಲೆಂದೂ ಅವು ತಮ್ಮನ್ನು ಕೇಳದೆ ಧೋರಣಗಳನ್ನು ನಿರ್ಧರಿಸುತ್ತವೆಂದೂ ಕೃಪಲಾನಿಯವರು ದೂರಿಕೊಂಡ್ಡರಿಂದ ಈ ತಿಕ್ಕಾಟವನ್ನು ಹೊಣೆಗೇಡಿತನಕ್ಕೆ ಹೊಂದಿಸಬರುವದಿಲ್ಲ. ಈ ವಿಷಯದಲ್ಲಿ ಕೃಪಲಾನಿಯವರ ನಿಲುಮೆ ಸಮರ್ಥನೀಯವಲ್ಲವೆಂದು ಪ್ರಜಾತಂತ್ರದ ಪ್ರತಿಪಾದಕರೆಲ್ಲರೂ ಒಪ್ಪಬೇಕು. ಯಾವದೇ ಪಕ್ಷದಿಂದ ಆರಿಸಿ ಬಂದವನಿರಲಿ, ಸರಕಾರದ ಮಂತ್ರಿಯಾದವನು ಇಡಿ ದೇಶಕ್ಕೆ-ವಿರೋಧಿಪಕ್ಷದವರನ್ನೊಳಗೊಂಡು-ಹೊಣೆಗಾರನಾಗಿರಬೇಕಾಗುತ್ತದೆ. ಅವನು ಶಾಸನಸಭೆಯ ಅಂಕೆಗೊಳಗಾಗಿರಬೇಕಲ್ಲದೆ ಎಂಥ ಪ್ರಬಲ ಸಂಸ್ಥೆಯಾಗಿದ್ದರೂ ಹೊರಗಿನ ಪಕ್ಷದ ನಿರ್ಣಯದಂತೆ ನಡೆಯುವದು ಸರ್ವಾಧಿಕಾರಿ ಪದ್ಧತಿಯ ಬೆಳವಣಿಗೆಗೆ ಪೋಷಕವಾಗದಿರದು. ಕೃಪಲಾನಿಯವರ ಹಾದಿಯನ್ನೊಪ್ಪಿದರೆ ಹಿಂದೀ ಒಕ್ಕೂಟ ಪಾರ್ಲಮೆಂಟು ನಾಜೀ ಜರ್ಮನಿಯ ರಾಯಿಕಸ್ಟಾಗ ಸಭೆಯಂತೆ ಕೈಗೊಂಬೆಯಾಗಿ ಮಾರ್ಪಟ್ಟೀತು. ಆದರೂ ಕೃಪಲಾನಿಯವರ ಸನ್ನಿವೇಶದಿಂದ ಕಾಂಗ್ರೆಸ್ಸಿನಲ್ಲಿದ್ದಿರುವ ಮೂಲಭೂತ ವೈಷಮ್ಯಗಳು ಬೆಳಕಿಗೆ ಬಂದಿವೆಯೆಂದು ಮನಗಂಡು ಅದರ ಸೂತ್ರಧಾರರು ವಿದೇಶಿಯದಿಂದ ಅಧಿಕಾರವನ್ನು ಕಸಿದುಕೊಳ್ಳಲು ಅನುಕೂಲವೂ ನಾನಾ ಸತ್ವಗಳ ಸಮ್ಮಿಲನವೂ ಆದ ಕಾಂಗ್ರೆಸ್ಸನ್ನು ಪ್ರಜಾತಂತ್ರವನ್ನು ಪರಿಣಾಮವಾಗಿ ನಡೆಸಿಕೊಂಡು ಹೋಗಲು ಸಮರ್ಥವಾದ ಸಮಾಧಾನ ಧರ್ಮ ಸತ್ವಗಳ ಮೇಲವಾಗುವಂತೆ ರೂಪಾಂತರಗೊಳಿಸುವ ಹಾದಿ ಹುಡುಕಬೇಕು. ಒಂದು ರಾಜಕೀಯ ಪಕ್ಷಕ್ಕೂ ಅದೇ ಪಕ್ಷದ ಸರಕಾರಕ್ಕೂ ತಿಕ್ಕಾಟ ಬರುವದು ಪ್ರಜೆಗಳ ಧೈರ್ಯಕ್ಕೆ ಪೋಷಕವಲ್ಲ. ಕಾಂಗ್ರೆಸ್ ಘಟನೆಯ ಪುನರ್ವಿಮರ್ಶೆಗಾಗಿ ನೇಮಿಸಲ್ಪಟ್ಟ ಸಮಿತಿ ಈ ಬಗೆಯ ತೊಡಕುಗಳನ್ನು ಹೋಗಲಾಡಿಸುವ ಯೋಜನೆ ಮಾಡಬೇಕೆಂದು ಸೂಚಿಸಬಹುದು. ಹೊಸ ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರು ಹಿಂದೆಲ್ಲ ಪ್ರಸಂಗಗಳಲ್ಲಿ ಮಾಡಿದಂತೆ ಇಂದೂ [illegible]ವಾದಿ ಸ್ವರಗಳನ್ನು ಸಂವಾದಿಗಳಾಗಿ ಮಾಡಲು ಸಮರ್ಥರಾಗುವರೆಂದು ನಂಬೋಣ.

ಮುರಾರಜಿಯವರ ಹೊಚ್ಚ ಹೊಸ ರಾಷ್ಟ್ರೀಯತೆ

ಭಾಷಾನ್ವಯ ಪ್ರಾಂತರಚನೆಯ ತತ್ವ ಸಾರ್ವತ್ರಿಕವಾಗಿ ಮನ್ನಿಸಲ್ಪಟ್ಟದ್ದು ಆ ಬಗ್ಗೆ ಕೇಂದ್ರ ಶಾಸನಸಭೆಯಲ್ಲಿ ಗೊತ್ತುವಳಿ ಬಂದು, ಹಲ ದಿನಗಳ ಕನಸು ನನಸಾಗುತ್ತಿರುವಾಗ ಕೆಲ "ಹೊಣೆಗಾರ" ವ್ಯಕ್ತಿಗಳು ಅಕಾರಣವಾಗಿ ಅಕಾಲದಲ್ಲಿ ಅದರ ವಿರುದ್ಧ ಪ್ರಚಾರವನ್ನು ಪ್ರಾರಂಭಿಸಿರುವದು ಶೋಚನೀಯ. ಮುಂಬಯಿ ಗೃಹಮಂತ್ರಿಗಳಾದ ಮುರಾರಜಿಯವರು ಈ ಸಾಲಿನಲ್ಲಿರುವದು ಇನ್ನಷ್ಟು ಮನನೋಯಿಸುವಂಥದು. ಭಾಷಾನ್ವಯ ಪ್ರಾಂತರಚನೆಯಿಂದ ಹಿಂದೀ ಒಕ್ಕೂಟದ ಶಕ್ತಿ ಕುಂದುವದೆಂಬ ಅವರ ಹೊಚ್ಚ ಹೊಸ ಅತಿರೇಕ ರಾಷ್ಟ್ರೀಯತೆಯ ವಾದ ಯಾರನ್ನೂ ಮನವೊಲಿಸಲಾರದು. ಅವರ ವಾದವನ್ನು ತರ್ಕಬದ್ಧವಾಗಿ ಮುಂದುವರಿಸಿದರೆ ಇಡಿ ಹಿಂದುಸ್ತಾನವನ್ನು ಅಖಂಡ ಪ್ರಾಂತವಾಗಿ ಮಾಡಬೇಕಾದೀತು. ಅದು ತೀರ ಅವ್ಯವಹಾರ್ಯವೆಂದು ಹೇಳಬೇಕಿಲ್ಲ. ಆಡಳಿತದ ಸೌಕರ್ಯಕ್ಕೆ ಪ್ರಾಂತಗಳು ಬೇಕಾಗಿರುವಾಗ ಪ್ರತಿಪ್ರಾಂತವನ್ನೂ ಆದಷ್ಟು ಸಮರಸ ಸತ್ವಗಳ ಸಮಾವೇಶದಿಂದ ನಿರ್ಮಿಸುವದು ಅತ್ಯಂತ ಉಪಯುಕ್ತವಾಗುತ್ತದೆ. ಮುಂಬಯಿ ಮದ್ರಾಸ ಪ್ರಾಂತಗಳಲ್ಲಿನ ವಿಷಮ ಸತ್ವಗಳ ತಿಕ್ಕಾಟವನ್ನು ಬಗೆಹರಿಸಲು ಒಮ್ಮೊಮ್ಮೆ ಅ. ಭಾ. ಮಟ್ಟದ ಜನರು ಬರಬೇಕಾಗುವದನ್ನು ನಾವು ಕಂಡಿದ್ದೇವೆ. ಇಂಥ ತಿಕ್ಕಾಟಕ್ಕೆ ಭಾಷಾನ್ವಯ ಪ್ರಾಂತರಚನೆಯಾದರೆ ಅವಕಾಶ ಕಡಿಮೆ. ಪ್ರಾಂತಗಳ ಹೆಚ್ಚಳದಿಂದ ಕೇಂದ್ರದ ಶಕ್ತಿ ಕುಂದುವದೆಂಬ ವಾದಕ್ಕೆ ಸೋವಿಯಟ್ ಯೂನಿಯನ್ನಿನ ಭಾಷಾನ್ವಯ ಸಂಘಟನೆ ಸ್ಪಷ್ಟ ಉತ್ತರವಾಗಿದೆ. ಹೀಗಿರಲು ಮದ್ರಾಸ ಮುಂಬಯಿ ಸರಕಾರಗಳೂ ಶಾಸನ ಸಭೆಗಳೂ ಒಪ್ಪಿಕೊಂಡ ತತ್ವಕ್ಕೆ ಅಡ್ಡಮಾತಾಡಿ ಮಂತ್ರಿಗಳಲ್ಲೊಬ್ಬರಾದ ಮುರಾರಜಿಯವರು ಏನೂ ಜಾಣತನ ತೋರಿದಂತಾಗಲಿಲ್ಲ. ರಾಷ್ಟ್ರಾಭಿಮಾನವನ್ನು ಶ್ರೀ ಮುರಾರಜಿಯವರು ಭಾಷಾನ್ವಯ ಪ್ರಾಂತವಾದಿಗಳಿಗೆ ಉಪದೇಶಿಸಬೇಕಿಲ್ಲ. ತಮ್ಮ ತಮ್ಮ ಜನರಿಗೆ ಅದು ಅಳಿವುಳಿವಿನ ಪ್ರಶ್ನೆಯಾದುದರಿಂದಲೇ ಅವರು ಈ ವಿಷಯದಲ್ಲಿ ಇಷ್ಟು ಅವಸರ ಮಾಡುತ್ತಿದ್ದಾರೆ.

ನಿಯಂತ್ರಣಗಳು ಹೋಗಲಿ

ಮಹಾತ್ಮಾ ಗಾಂಧಿಯವರಂಥ ಅದ್ವಿತೀಯರೇ ನಿಯಂತ್ರಣಗಳ ಮೇಲೆ ದೊಣ್ಣೆಯೆತ್ತಿರುವದರಿಂದ ಇಡೀ ದೇಶದಲ್ಲಿ ನಿಯಂತ್ರಣ, ಸೀದಾ ಪದ್ಧತಿಗಳಿಂದ ಮತ್ತು ಅವುಗಳ ದತ್ತಪುತ್ರನೆನಿಸುವ ಕಳ್ಳಪೇಟೆಯಿಂದ ಬೇಸತ್ತು ಹೋದ ಜನಕ್ಕೆ ಒಂದು ಊರುಗೋಲು ದೊರೆತಂತಾಗಿದೆ. ನಿಯಂತ್ರಣಗಳು ಒಡನೆ ಹೋಗಬೇಕೆಂಬ ತಿದ್ದುಪಡಿ ಅ. ಭಾ. ಕಾಂಗ್ರೆಸಿನಲ್ಲಿ ಕೆಲವೇ ಮತಗಳಿಂದ ಬಿದ್ದುಹೋದುದನ್ನು ನೋಡಿದರೆ ಜನಾಭಿಪ್ರಾಯ ಎಷ್ಟು ತೀವ್ರವಾಗಿದೆಯೆಂದು ಗೋಚರವಾಗುತ್ತದೆ. ಸೀದಾಪದ್ಧತಿ, ನಿಯಂತ್ರಣಗಳಿಂದ ಪ್ರಯೋಜನ ಪಡೆಯುವವರು ನಗರವಾಸಿಗಳೆಂಬಲ್ಲಿ ಸಂದೇಹವಿಲ್ಲ. ಆದರೆ ಕಳ್ಳಪೇಟೆಗೆ ಶರಣುಹೋಗಿ ಸಾಕಾದ ಪೇಟೆಯ ಜನರೇ ನಿಯಂತ್ರಣಗಳನ್ನು ಕಿತ್ತು ಹಾಕಿರೆಂದು ಕೂಗುವ ಕಾಲ ಬಂದಿದೆ. ನಿಯಂತ್ರಣಗಳಿಂದ ದೇಶದ ನೈತಿಕ ದಿವಾಳಿಯಾಗುತಿದೆಯೆಂಬ ಮಹಾತ್ಮರ ಮಾತು ಎಳ್ಳಷ್ಟೂ ಸುಳ್ಳಲ್ಲ. ಸೀದಾಪದ್ಧತಿ, ನಿಯಂತ್ರಣಗಳನ್ನು ಉಳಿಸಿಕೊಂಡು ಹೋಗಬೇಕೆಂಬದನ್ನು ಸಿದ್ಧಪಡಿಸಲು ಬೆಲೆ ಮತ್ತು ಸರಕಿನ ಮಂಡಲದ ವರದಿಯಲ್ಲಿ ಅನೇಕ ವಿಧಾನಗಳನ್ನುಪಯೋಗಿಸಲಾಗಿದೆ. ೧೯೪೮ ರ ಅಂತ್ಯದವರೆಗೆ ಆಹಾರ, ವಸ್ತ್ರಗಳೇ ಮೊದಲಾದ ಅನೇಕ ಪದಾರ್ಥಗಳಲ್ಲಿ ಅವಶ್ಯಕ "ಉಳಿತಾಯ''ವನ್ನು ಸಾಧಿಸುವದಸಾಧ್ಯವೆಂದೂ ನಿಯಂತ್ರಣಗಳನ್ನು ತೆಗೆದರೆ ಅನಾಹುತಗಳಾಗುವ ಸಂಭವವುಂಟೆಂದೂ ಅದರಿಂದ ನಿಯಂತ್ರಣಗಳನ್ನು ತೆಗೆಯಬೆ "ಸುಸಂಬದ್ಧ" ವಾಗಿ ನಿಯಂತ್ರಣಗಳನ್ನು ಸಂಘಟಿಸುವದೇ ತರಣೋಪಾಯವೆಂದೂ ಆ ಮಂಡಲದ ಹೇಳಿಕೆ. ಇದೇನೋ ಒಪ್ಪಬೇಕಾದ ಮಾತು. ಆದರೆ ಸುಮಾರು ನಾಲ್ಕು ವರ್ಷಗಳ ಅನುಭವವಾದ ನಂತರ ಸೀದಾ ಪದ್ಧತಿ ಮೊದಲಾದವುಗಳ ಸುಧಾರಣೆಯಲ್ಲಿ ಸರಕಾರಕ್ಕೆ ಒಂದೇ ಒಂದು ಹೆಜ್ಜೆ ಮುಂದೆಸಾಗುವದು ಸಾಧ್ಯವಾಗಿಲ್ಲ ಮತ್ತು ಕಳ್ಳ ಪೇಟೆಯ ಮೇಲಿನ ಉಗ್ರ ಕ್ರಮಗಳು ಬಾಯಲ್ಲಿಯೇ ಉಳಿದಿವೆಯೆಂದ ಮೇಲೆ ಮಂತ್ರಿಗಳ ಸದಾಶಯಗಳನ್ನು ಬ್ರಿಟಿಶ ತರಬೇತಿಯ ನೌಕರಶಾಹಿ ಮನಃಪೂರ್ವಕವಾಗಿ ಕಾರ್ಯರೂಪಕ್ಕೆ ತರಲು ಸಿದ್ಧವಿಲ್ಲವೆಂದೂ ಮಂತ್ರಿಗಳೂ ಅಸಹಾಯರಾಗಿದ್ದಾರೆಂದೂ ಹೇಳಕು. ಆ "ಸುಸಂಘಟಿತತೆ" ಅಕಸ್ಮಾತ್ತಾಗಿ ಆಕಾಶದಿಂದಿಳಿದುಬರಲಾರದು. ಆದುದರಿಂದ ನಿಯಂತ್ರಣಗಳನ್ನು ಕಿತ್ತೊಗೆದು ಅದರಿಂದ ಬರಬಹುದಾದ ಅಪಾಯಗಳನ್ನು ಎದುರಿಸಲು ಸಿದ್ಧವಾಗುವದು ಪ್ರಯೋಗಯೋಗ್ಯವಾಗಿದೆ. ವ್ಯಾಪಾರಿಗಳಾದರೂ ತಮ್ಮ ಅತ್ಯಾಶೆಯನ್ನು ಬಿಗಿಹಿಡಿದು ಜನತೆ ಉಳಿದರೇ ತಮ್ಮ ಲಾಭ ಸ್ಥಿರವೆಂದು ಮನಗಂಡು ಅದರಂತೆ ಆಚರಿಸಬೇಕು. ಸಕ್ಕರೆ, ಬಟ್ಟೆ ಇವುಗಳ ನಿಯಂತ್ರಣವನ್ನು ಮೊದಲು ಕಿತ್ತೊಗೆದು ಪರೀಕ್ಷಿಸುವದು ಸರಕಾರದ ಮನಸಿನಲ್ಲಿದೆಯೆಂದು ಹೇಳಲಾಗಿದೆ. ಹೀಗೆ ಮಾಡಿ ನೋಡಬೇಕೆಂದು ಸರಕಾರಕ್ಕೆ ಒತ್ತಾಯ ಪಡಿಸುತ್ತೇವೆ.

ಯುಕ್ತರಾಷ್ಟ್ರಕ್ಕೊಂದು ಏಟು

ಯುಕ್ತರಾಷ್ಟ್ರಸಂಘವೇ ಜಗತ್ತಿನ ಆಶಾಕಿರಣವೆಂದು ಪಂ. ನೆಹರೂ ಅವರು ಕೇಂದ್ರ ಶಾಸನ ಸಭೆಯಲ್ಲಿ ಹೇಳಿದ ಮಾತಿನ ಪ್ರತಿಧ್ವನಿ ಇನ್ನೂ ಅಡಗದಿರುವಾಗಲೇ ದಕ್ಷಿಣ ಆಫ್ರಿಕೆಯಲ್ಲಿ ಹಿಂದೀಯರ ವಿರುದ್ಧ ಮಾಡಲ್ಪಟ್ಟಿರುವ ವರ್ಣ ಪಕ್ಷಪಾತದ ಬಗ್ಗೆ ಯುಕ್ತರಾಷ್ಟ್ರ ಸಂಘದ ಮುಂದೆ ಹಿಂದೀ ಪ್ರತಿನಿಧಿ ವಿಜಯಲಕ್ಷ್ಮಿಯವರು ತಂದ ಗೊತ್ತುವಳಿ ಅವಶ್ಯಕಬಹುಮತದೊರೆಯದೆ ಬಿದ್ದುಹೋದುದನ್ನು ನೋಡಿದರೆ ಅಸಂಘದಭವಿತವ್ಯದ ಬಗ್ಗೆಯೇ ಯಾರಿಗೂ ನಿರಾಶೆಯಾದೀತು. ಕಳೆದ ವರ್ಷ ವಿಜಯಲಕ್ಷ್ಮಿಯವರ ಪ್ರಯತ್ನದಿಂದ ಸೇನಾಪತಿ ಸ್ಮಟ್ಸರ ಉಪಾಯಗಳೆಲ್ಲ ವ್ಯರ್ಥವಾಗಿ ಈ ಸಮಸ್ಯೆಯನ್ನು ಉಭಯ ರಾಷ್ಟ್ರಗಳು ತಮ್ಮೊಳಗೆ ಬಗೆಹರಿಸಿಕೊಂಡು ಸಂಘಕ್ಕೆ ವರದಿ ಮಾಡಬೇಕೆಂಬ ಗೊತ್ತುವಳಿ ಪ್ರಚಂಡ ಬಹುಮತದಿಂದ ಸ್ವೀಕರಿಸಲ್ಪಟ್ಟಿತು. ಆದರೆ ಸ್ಮಟ್ಸರಿಗೆ ಗುಟ್ಟು ಗೊತ್ತಿತ್ತೋ ಏನೊ. ಅವರು ಆ ಬಗ್ಗೆ ಯಾವದೇ ಕ್ರಮತೆಗೆದುಕೊಳ್ಳಲಿಲ್ಲ ಮಾತ್ರವಲ್ಲ, ವರ್ಣದ್ವೇಷ ಕಾಯದೆಗಳನ್ನು ಹಿಂತೆಗೆದುಕೊಳ್ಳುವದಿಲ್ಲದೆಂದು ಬಹಿರಂಗವಾಗಿ ಸಾರಿ ಸಂಘಕ್ಕೆ ನೇರವಾಗಿ ಅವಮಾನ ಮಾಡಿದರು. ಹೀಗಿದ್ದರೂ ಈ ಬಾರಿ ಹಿಂದೀ ಗೊತ್ತುವಳಿಗೆ ಅವಶ್ಯ ೨/೩ ಬಹುಮತ ಬೀಳಲಿಲ್ಲ. ಇದರಿಂದ ವರ್ಣದ್ವೇಷಿಗಳಿಗೆ ಉತ್ತೇಜನ ದೊರೆಯಿತು ಮಾತ್ರವಲ್ಲ, ಸಂಘಕ್ಕೆ ಮಾನಾಪಮಾನದ ಪರಿವೆಯಿಲ್ಲದಂತಾಗಿದೆಯೆಂದು ಸಿದ್ಧವಾಗುತ್ತದೆ. ೩೧ ರಾಷ್ಟ್ರಗಳು ಹಿಂದುಸ್ತಾನಕ್ಕೆ ಮತವಿತ್ತವು. ೧೯ ಮಾತ್ರ ವಿರುದ್ಧವಾಗಿದ್ದವೆಂಬದು ನಿಜ. ಆದರೆ ಆ ೧೯ ರಲ್ಲಿ ಇಂಗ್ಲಂಡ್, ಅಮೇರಿಕೆಗಳಂಥ ಯುಕ್ತರಾಷ್ಟ್ರದ ಬೆನ್ನೆಲುಬೆನಿಸುವ ರಾಷ್ಟ್ರಗಳಿವೆಯೆಂಬದನ್ನೂ ಬ್ರಿಟಿಶ ಕಾಮನ್‌ವೆಲ್ತಿನ ಅನೇಕ—ಹಿಂದುಸ್ತಾನದ "ಸೋದರ" ರಾಜ್ಯಗಳಿವೆಯೆಂಬದನ್ನೂ ಮರೆಯಲಾಗದು. ಪ್ರಬಲ ರಾಷ್ಟ್ರಗಳಲ್ಲಿರುವ ವೈಷಮ್ಯವೂ ಚಾಣಕ್ಯತಂತ್ರವೂ ಈ ಸ್ಥಿತಿಗೆ ಒಂದು ಕಾರಣವೆಂದು ಹಿಂದೀಯರಿಗೆ ಗೊತ್ತಿದೆ. ಆಂಗ್ಲೋ ಅಮೇರಿಕನ್ನರು ತಮ್ಮ ಬಣದಲ್ಲಿ ಒಡಕುಂಟುಮಾಡಲು ಸಿದ್ಧರಿಲ್ಲ. ಬದಲಿಗೆ ಅವರು ಹಿಂದೀಯರ ಸ್ನೇಹಕ್ಕೆ ಎರವಾಗಲು ಸಿದ್ಧರೆಂದು ತಿಳಿಯಬೇಕೆ? ಲಾರ್ಡ ಮೌಂಟಬ್ಯಾಟನ್ನರು ಈ ಸಮಸ್ಯೆಯನ್ನು ಬಗೆಹರಿಸಲು ಸ್ವತಃ ಪ್ರಯತ್ನಿಸುವರೆಂದು ಹೇಳಲಾಗಿದೆ. ಆದರೆ ಆ ಮಾತು ಬೇರೆ. ಹಿಂದುಸ್ತಾನದ ವಿರುದ್ಧ ಮಾತುಕೊಟ್ಟ ೧೯ ರಾಷ್ಟ್ರಗಳು ವರ್ಣದ್ವೇಷಕ್ಕೂ ಅದರಿಂದ ನಿಶ್ಚಿತವಾಗಿಯೂ ಬರಲಿರುವ ಭಯಾನಕ ವಿಪ್ಲವಕ್ಕೂ ಸಹಾಯಮಾಡಿದಲ್ಲದೆ ಯುಕ್ತರಾಷ್ಟ್ರ ಸಂಘದ ಬೇರಿಗೇ ಕೊಡಲಿಯೇಟು ಕೊಟ್ಟರೆಂದು ನಾಳಿನ ಇತಿಹಾಸಕಾರ ಬರೆಯದಿರನು.

ರೇಲ್ವೇ ಮುಂಗಡ ಪತ್ರ

ಸ್ವತಂತ್ರ ಭಾರತದ ಮೊದಲನೇ ರೇಲ್ವೇ ಮುಂಗಡ ಪತ್ರವನ್ನು ಕಳೆದವಾರ ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ ಡಾ. ಜಾನ್ ಮಥಾಯರು ರೇಲ್ವೇ ಪ್ರವಾಸದ ದರಗಳನ್ನು ಏರಿಸಲಾಗುವದೆಂದು ಸಾರಿ ಜನತೆಯನ್ನು ಒಂದು ಬಗೆಯಾಗಿ ನಿರಾಶೆಗೊಳಿಸಿರುವರೆಂದು ಹೇಳಬೇಕು. ಡಾ. ಮಥಾಯರು ದರಗಳ ಏರಿಕೆ ಅನಿವಾರ್ಯವೆಂದು ಸಾಧಿಸಲು ಕೊಟ್ಟ ಕಾರಣಗಳು ಗ್ರಾಹ್ಯವಾಗಿವೆಯೆನ್ನದೆ ವಿಧಿಯಿಲ್ಲ, ದೇಶದ ವಿಭಜನೆಯಿಂದೊದಗಿದ ವಿಸಂಘಟನೆಯಿಂದ ಉತ್ಪನ್ನ ಅನಿರೀಕ್ಷಿತವಾಗಿ ಕುಗ್ಗಿದ್ದು ನಿಜವೇ. ವಿಭಜನೆಯಿಂದ ವಿಶೇಷ ಆಯಕಟ್ಟಿನ ಸ್ಥಳವಾಗಿ ಮಾರ್ಪಟ್ಟ ಅಸಾಮಕ್ಕೆ ಒಕ್ಕೂಟ ಭಾಗದಿಂದ ರೇಲ್ವೆಯ ಸಂಧಿಯನ್ನೊದಗಿಸುವ ವೆಚ್ಚವೂ ಅನಿವಾರ್ಯವೆ. ಅದೇ ಪ್ರಕಾರ ರೇಲ್ವೆ ಕೆಲಸಗಾರರಿಗೆ ಕೇಂದ್ರ ವೇತನ ಮಂಡಲದವರ ಸೂಚನೆಯನ್ನನುಸರಿಸಿ ಹೆಚ್ಚಿಸಿದ ಸಂಬಳ ಸವಲತ್ತುಗಳಿಂದ ರೇಲ್ವೇ ಭಾಂಡಾರಕ್ಕೆ ವರ್ಷಕ್ಕೆ ೨೫ ಕೋಟಿ ರೂಪಾಯಿ ವೆಚ್ಚ ಬಂದದ್ದನ್ನೂ ನಿರಾಕರಿಸಬರುವದಿಲ್ಲ. ಸ್ವತಂತ್ರ ಭಾರತದ ಸರಕಾರದಿಂದ ಬಂದ ಈ ದರಗಳ ಹೆಚ್ಚಳವನ್ನು, ಅದೂ ದೇಶದ ಪರಿಸ್ಥಿತಿಯನ್ನು ಲಕ್ಷಿಸಿ, ಜನರು ಗೊಣಗುಟ್ಟದೆ ಸ್ವೀಕರಿಸಬೇಕೆನ್ನುವದೂ ಯೋಗ್ಯವೆ. ಆದರೂ ಜನಸಾಮಾನ್ಯರ ಮೇಲೆ ಹೊಸ ಕರವನ್ನೇ ಹೊರಿಸಿದಂತಿರುವ ಈ ಹೆಚ್ಚಳವನ್ನು ಸಾರುವ ಮೊದಲು ರೇಲ್ವೇ ಮಂತ್ರಿಗಳು ಖಾತೆಯಲ್ಲಿ ಅವಶ್ಯವಿರುವ ಎಲ್ಲ ಮಿತವ್ಯಯವನ್ನೂ ಮಾಡಿದ್ದಾರೆಯೋ ಎಂಬ ಶಂಕೆ ಮೂಡುವದು ಸ್ವಾಭಾವಿಕ. ಅನವಶ್ಯಕ ನೌಕರರ ಕಡಿತ, ನೌಕರರ ಕ್ಷಮತೆಯ ಸುಧಾರಣೆ, ತಿಕೀಟಿಲ್ಲದ ಪ್ರವಾಸಿಕರ ತಪಾಸಣಾ ತೆಗೆದುಕೊಳ್ಳುವದು ಮೊದಲಾದವು ವಿಶೇಷ ಪ್ರಗತಿಹೊಂದಿದಂತೆ ತೋರಲಿಲ್ಲ. ಅಲ್ಲದೆ ದರಗಳ ಏರಿಕೆಯ ಪ್ರಮಾಣದಲ್ಲೂ ವಿವಿಧ ವರ್ಗಗಳಲ್ಲಿ ಪಂಕ್ತಿಪ್ರಪಂಚವಾದಂತಿದೆ. ಎರಡನೆಯ ಮತ್ತು ಇಂಟರ ವರ್ಗದ ಪ್ರವಾಸಿಕರ ಮೇಲಿನ ಹೆಚ್ಚಿದ ಭಾರ ಮೊದಲನೆ ವರ್ಗದವರಿಗಿಂತ ಹೆಚ್ಚಾಗಿದೆ. ಕಳೆದ ವರ್ಷವೇ ರೂಪಾಯಿಗೊಂದಾಣೆಯಂತೆ ಏರಿಸಿದ ದರದಲ್ಲಿ ಮತ್ತಷ್ಟು ಏರಿಕೆಯನ್ನು ಹೈರಿಸಲು ಮೂರನೆ ವರ್ಗದ ಪ್ರವಾಸಿಕರನ್ನು ಕೇಳಿಕೊಳ್ಳುವ ಮೊದಲು ಆ ವರ್ಗದ ಡಬ್ಬಿಗಳ ಅಮಾನುಷ ಸ್ಥಿತಿಗತಿಯನ್ನು ಸುಧಾರಿಸುವ ನಿಶ್ಚಿತ ಆಶೆಯಾದರೂ ಇದ್ದಿದ್ದರೆ ಜನ ಗೊಣಗುತಿದ್ದಿಲ್ಲ. ಅಂಥ ಆಶೆ ಮುಂದಿನ ವರ್ಷದಲ್ಲಾದರೂ ಫಲಿಸೀತೆಂದು ಹಾರೈಸಬೇಕಾಗಿದೆ.

ಹೈದರಾಬಾದ ರಾಜಕಾರಣ

ಹೈದರಾಬಾದದ ನಿಜಾಮರಿಗೆ—ಹಿಂದೀ ರಾಜಕಾರಣದ ಬೇರೆ ಕೆಲವು ಸತ್ವಗಳಂತೆಯೆ—ದಂಡೋಪಾಯದ ಪರಿಭಾಷೆಯಲ್ಲದೆ ಬೇರಾವದೂ ಅರ್ಥವಾಗುವದಿಲ್ಲೆಂದು ತೋರುತ್ತದೆ. ಉಳಿದ ನರೇಂದ್ರರಂತೆ ಬೇಗನೆ ಬುದ್ಧಿಗಲಿತು ತಮ್ಮ ಕಾಲ್ಪನಿಕ "ಸ್ವಾತಂತ್ರ್ಯ"ದ ಹಂಬಲು ಬಿಟ್ಟುಗೊಟ್ಟದ್ದರೆ ಅವರಿಗೂ ಗೌರವವಿತ್ತು, ಹಿಂದುಸ್ತಾನ ಸರಕಾರಕ್ಕೂ ಕೆಲ ಸವಲತ್ತು ಕೊಡುವಮನಸಾಗುತಿತ್ತು. ಆದರೆ ನಿಜಾಮಸಾಹೇಬರು— ಸಾಮಾನ್ಯವಾಗಿ ರಾಜಕುಲಗಳ ಅಂತಿಮ ಸಂತಾನಗಳು ಇತಿಹಾಸದುದ್ದಕ್ಕೂ ಮಾಡುತ್ತ ಬಂದಂತೆ—ಕುರುಡ ಹಿಡಿದದ್ದೇ ಬಡಿಗೆಯೆಂದು ಅತುಕೊಂಡರು. ಇದರಲ್ಲಿ ಅವರಿಗೆ ಸಂಸ್ಥಾನದ ಅಲ್ಪಸಂಖ್ಯಾಕ ಮುಸ್ಲಿಮರ ಪ್ರತಿಗಾಮಿ, ಜಾತಿದ್ವೇಷಿ ಇತ್ತಿಹಾದುಲ್ — ಮುಸ್ಲಿಮೀನ್ ಸಂಸ್ಥೆಯ ಬೆಂಬಲವೂ ಇತ್ತು. ಜಿನ್ನಾ ಸಾಹೇಬರು ಹಿಂದೆ ನಿಂತು ಇತ್ತಿಹಾದ್ ಸಂಸ್ಥೆಗೆ ಉಪದೇಶ ಕೊಡುತಿದ್ದರು. ಅವರ ಮಾತು ಕೇಳಿ ಅದರ ಅಧ್ಯಕ್ಷರ ರಿಜ್ವಿಯವರು "ಇಡಿ ಜಗತ್ತೇ ತಿರುಗಿ ಬಿದ್ದರೂ ಹೈದರಾಬಾದು ಅದನ್ನು ಎದುರಿಸಲು ಸಮರ್ಥ"ವೆಂದು ಕೊಚ್ಚಿಕೊಂಡಿದ್ದರು. ಆದರೆ ಟೊಳ್ಳು ಬೆದರಿಕೆಗಳು ಯಾವಾಗಲೂ ಟೊಳ್ಳು ಬೆದರಿಕೆಗಳೆ. ಬೆದರು ಗುಂಡುಗಳಂತೆ ಅವು ಒದ್ದೊಡನೆ ಉರುಳುವವು. ಕಾಶ್ಮೀರದಲ್ಲಿಯೂ ಜುನಾಗಢದಲ್ಲಿಯೂ ಉಗ್ರ ಕ್ರಮಗಳನ್ನು ಕೈಕೊಂಡು ಹೈದರಾಬಾದಿನ ನಿಜಾಮರಿಗೂ ಜಳ ಜಳ ಮಾತುಗಳಲ್ಲಿ ಸರದಾರ ಪಟೇಲರು ಕೊಟ್ಟ ಎಚ್ಚರಿಕೆ ಗುರಿಮುಟ್ಟದಿರಲಿಲ್ಲ. ರಿಜವಿಯವರಿಗೂ ಸಂಸ್ಥಾನದ ಜಗಜ್ಜೇತ್ರ ಸೈನ್ಯದಲ್ಲಿ ವಿಶ್ವಾಸ ಕಡಿಮೆಯಾಯಿತು. ಮೊನ್ನೆ ಮೊನ್ನೆ ಹೊರಡಿಸಿದ ಹೇಳಿಕೆಯಲ್ಲಿ ಅವರು ಕಾಯದೆ ಅಝಮರನ್ನು ಮನವಾರೆ ತೆಗಳಿ ಪಾಕಿಸ್ತಾನದ ಹೊರಗಿನ ನಾಲ್ಕುಕೋಟಿ ಮುಸ್ಲಿಮರಿಗೆ ಸುಳ್ಳೇ ಆಶೆತೋರಿಸಿ ನಡು ನೀರಿನಲ್ಲಿ ಕೈಬಿಟ್ಟರೆಂದು ಆರೋಪಿಸಿದ್ದಾರೆ. ಉತ್ತರ ಪೌರುಷದ ಹದ್ದು ಮೀರಿ ಶಕ್ತಿ ಪರೀಕ್ಷೆಗಿಳಿದರೆ ಪಾಕಿಸ್ತಾನ ಏನೂ ಸಹಾಯ ಮಾಡಲಾರದೆಂದು ಜಿನ್ನಾ ಸಾಹೇಬರು ಹೇಳಿರಬೇಕು. ಪರಿಣಾಮವಾಗಿ ನಿಜಾಮರ ಪ್ರತಿನಿಧಿಗಳು ಹೆಚ್ಚು ನಮ್ಮ ಮನೋಭೂಮಿಕೆಯಲ್ಲಿ ಸಂಧಾನದ ಕೊನೆಯ ಪ್ರಯತ್ನಕ್ಕಾಗಿ ದಿಲ್ಲಿಗೆ ಹೋದರು ಮತ್ತು ಒಂದು ವರ್ಷದ ಮಟ್ಟಿಗೆ "ಯಥಾಸ್ಥಿತಿ" ಒಪ್ಪಂದವಾಗಿದೆಯೆಂದೂ ಇಷ್ಟರಲ್ಲೆ ಅದರ ಕಲಮುಗಳು ಪ್ರಸಿದ್ಧವಾಗುವವೆಂದೂ ತಿಳಿಯುತ್ತದೆ. ಅವು ಹಿಂದೊಮ್ಮೆ ನಿಜಾಮರ ಪರವಾಗಿ ಛತ್ತಾರಿ ನವಾಬರೂ ಹಿಂದುಸ್ತಾನ ಸರಕಾರವೂ ಒಪ್ಪಿಕೊಂಡ ಮತ್ತು ಆ ಮೇಲೆ ಇತ್ತಿಹಾದುಲ್ ಸಂಸ್ಥೆಯ ಒತ್ತಾಯದಿಂದ ನಿಜಾಮರು ನಿರಾಕರಿಸಿದ ಕರಡಿಗೆ ಸಮೀಪವಾಗಿವೆಯೆಂದು ನಂಬಲಾಗಿದೆ. ಆದರೂ ಇದು ಒಂದು ವರ್ಷದ ಒಪ್ಪಂದವೆಂಬದನ್ನು ಮರೆಯಕೂಡದು. ಅಷ್ಟರಲ್ಲಿ ಇಂಗ್ಲಂಡಿನಲ್ಲಿ ಕಾನ್ಸರ್ವೇಟಿವ್ ಪಕ್ಷ ಅಧಿಕಾರಕ್ಕೆ ಬರಬಹುದೆಂದೂ "ಸ್ವತಂತ್ರ" ಹೈದರಾಬಾದಿಗೆ ಅದು ಬೆಂಬಲ ಕೊಡಬಹುದೆಂದೂ ನಿಜಾಮರು ಆಶಿಸಿರಬಹುದು. ಹಿಂದುಸ್ತಾನ ಸರಕಾರ ನಿಜಾಮರ ಈ ಗೆಳ್ತಿಗಾರಿಕೆಗಳ ಬಗ್ಗೆ ಮೈಮರೆತು ಎಂದೂ ಇರಕೂಡದು.

ವಿವಿಧ ಪ್ರಪಂಚ

ಶಿಕ್ಷಣ

ನಮ್ಮಲ್ಲಿ ಗಣ್ಯವೆಂದೆಣಿಸದಿರುವ ವಿದ್ಯಾರ್ಥಿಗಳ ಸಂಘ, ಪುಸ್ತಕ ಪತ್ರಿಕೆ ಇತ್ಯಾದಿಗಳ ಕೆಲವು ಇವುಗಳನ್ನು ಪರದೇಶಗಳಲ್ಲಿ. ಮಹಾಕಾರ್ಯಗಳೆಂದು ಗಣಿಸಲಾಗುತ್ತದೆ. ನಮ್ಮ ವಿದ್ಯಾರ್ಥಿಗಳಲ್ಲಿ ನಾಗರಿಕಭಾವ ಮೂಡಬೇಕು. ಒಳ್ಳೆಯ ಕನ್ನಡಿಗ, ಒಳ್ಳೆಯ ಭಾರತೀಯ, ಒಳ್ಳೆಯ ಅಂತರಾಷ್ಟ್ರೀಯ ಎನಿಸಿಕೊಳ್ಳಲು ಪ್ರತಿಯೊಬ್ಬ ತರುಣನೂ ಪ್ರಯತ್ನಿಸಬೇಕು. ಇದಕ್ಕೆ ಪಂಡಿತ ನೆಹರೂರವರನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈ ವಿಷಯದಲ್ಲಿ ಇರುವ ವಿಚಾರದ ಗೊಂದಲವನ್ನು ಮೇಲಿನ ಉದಾಹರಣೆಯಿಂದ ತೊಡೆದುಹಾಕಬಹುದು. ಶಕ್ತಿಯೆ ನಮ್ಮ ಆಧಾರವೆಂದರಿತು ಅದನ್ನು ನಾವು ಆರಾಧಿಸಬೇಕು. ಬೇರೆಯಿದ್ದರೂ ಒಂದೆಂಬುದನ್ನು ಬೆಳೆಸಿಕೊಳ್ಳಬೇಕು! ಶಿಕ್ಷಣವೆಂದರೆ ಕೇವಲ ವಿಷಯ ಸಂಗ್ರಹವಲ್ಲ; ಶಿಸ್ತು ಕಲಿತು ತಪ್ಪು ಪ್ರತಿಭಟನೆಬಿಟ್ಟು ಧರ್ಮಭೇದದಲ್ಲಿಗಿಂತ ಅಧ್ಯಾತ್ಮಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದರಲ್ಲಿ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿವಹಿಸಬೇಕು. ನಮ್ಮ ನಮ್ಮಲ್ಲಿ ಬಾಂಧವ್ಯ ಬೆಳೆಯಬೇಕಾದರೆ ಏಕಪಿತೃತ್ವ ಅಂದರೆ ನಾವೆಲ್ಲ ದೇವರಮಕ್ಕಳು ಎಂಬ ಭಾವನೆ ಮೂಡಬೇಕು. ನಾವು ಆತ್ಮಶಕ್ತಿಯನ್ನು ಜಾಗೃತಿ ಮಾಡಿಕೊಂಡು ಹೃದಯ ಕಮಲ ಸೌರಭವನ್ನು ಹೆಚ್ಚಿಸಿಕೊಂಡು ದೇವರು ಊದುವ ಒಳ್ಳೆಯ ಕೊಳಲಾಗಬೇಕು ಎಂದು ಪ್ರೊ. ಮಾಳವಾಡರು ಶಿಕ್ಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ವಿವರಿಸಿದರು.

ಇದೇವಿಷಯದ ಮೇಲೆ ಪ್ರೊ. ಧಾರವಾಡಕರರು ಈ ರೀತಿ ಅಭಿಪ್ರಾಯಪಟ್ಟರು: ನಾವಿಂದು ಪಡೆಯುತ್ತಿರುವ ಶಿಕ್ಷಣ ಸರಿಯಾದದ್ದಲ್ಲ. ಅದು ನಮ್ಮನ್ನು ಜನತೆಯಿಂದ ದೂರ ಒಯ್ಯುತ್ತದೆ; ಸುಶಿಕ್ಷಿತರಿಗೂ ಸಾಮಾನ್ಯರಿಗೂ ನಡುವೆ ಅದು ವಿಶಾಲಸಾಗರದಷ್ಟು ಅಂತರವನ್ನು ಕಲ್ಪಿಸುತ್ತದೆ. ಜನತೆಯೊಡನೆ ಒಂದುಗೂಡುವ ಶಿಕ್ಷಣ ನಮಗಿಂದುಬೇಕಾಗಿದೆ. ಅಭ್ಯಾಸ ಕ್ರಮದಲ್ಲಿ ಪುನರ್ವ್ಯವಸ್ಥೆಯಾಗಬೇಕು. ಉರುಹಾಕುವ ವಿದ್ಯೆಬೇಡ. ನಮ್ಮ ವಿದ್ಯಾರ್ಥಿಗಳಲ್ಲಿ ಆತ್ಮಪ್ರತ್ಯಯ ಬೆಳೆಯುವಂತಾಗಬೇಕು. ಇತಿಹಾಸ ಬರೆಯುವ ರೀತಿ ಬದಲಾಗಬೇಕು. ಈಗಿರುವ ಪ್ರಾಂತಭಾಷೆಗಳ ದುಸ್ಥಿತಿ ಬದಲಾಗಬೇಕು. ನೈತಿಕಬಲ, ಸರ್ವಜನಾದರಣೀಯ ಧರ್ಮದೃಷ್ಟಿ, ಹೊಣೆಗಾರಿಕೆ ಇವು ನಮ್ಮ ತರುಣರಲ್ಲಿಯೂ ಪ್ರಾಧ್ಯಾಪಕರಲ್ಲಿಯೂ ಬೆಳೆದು ಬರಬೇಕು.

ಜೀವನದ ಮಟ್ಟ

ಜೀವನಕ್ಕೆ ಬೇಕಾದುದು ಆಹಾರ, ಬಟ್ಟೆ ಸಂಸ್ಕೃತಿ. ಇವು ಇಂದು ಸರಿಯಾಗಿ ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತಿಲ್ಲ. ಇದರ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯೂ ವಿಚಾರಮಾಡಹತ್ತಿದರೆ ೨೫ ವರ್ಷಗಳಲ್ಲಿ ಹೊಸ ಸಮಾಜ ವ್ಯವಸ್ಥೆ ಸಾಧ್ಯ ಎಂದು ಶ್ರೀ. ಹೆಬ್ಬಳ್ಳಿ ಕೃಷ್ಣಮೂರ್ತಿಯವರು ಹೇಳಿದರು. ಜೀವನ ಮಟ್ಟಕ್ಕೆ ಭೌತಿಕ ಇಲ್ಲವೆ ಆರ್ಥಿಕ ಅರ್ಥ ಕೊಡುವುದು ಪಾಶ್ಚಾತ್ಯರ ರೀತಿ. ನಮ್ಮಲ್ಲಿ ಆರ್ಥಿಕ ಬಾರತಮ್ಯವಿದ್ದಾಗಲೂ ತೃಪ್ತ ಜೀವನ ಸಾಗಿಸಲು ಸಾಧ್ಯವಾಗುವ ಸಾಂಸ್ಕೃತಿಕ ವ್ಯವಸ್ಥೆಯಿದೆಯೆಂದು ಶ್ರೀ ಬೆಳಗಾವಿ ರಾಮಚಂದ್ರರಾಯರು ಅಭಿಪ್ರಾಯಪಟ್ಟರು. ಸಂಸ್ಕೃತಿ ಜನಸಾಮಾನ್ಯರಲ್ಲೂ ಇಳಿಯಬೇಕು ಎಂಬುದು ಜೀವನ ಮಟ್ಟದ ಇನ್ನೊಂದು ಅರ್ಥ. ಅತ್ಯವಶ್ಯಕವಾದ ಜೀವನ ಸೌಕರ್ಯಗಳನ್ನು ಕೊಡದಿದ್ದ ರಾಷ್ಟ್ರವು ರಾಷ್ಟ್ರವೇ ಅಲ್ಲ. ಆರ್ಥಿಕ ಮಟ್ಟವನ್ನೇರಿಸುವದರೊಡನೆ ಸಾಂಸ್ಕೃತಿಕ ಮಟ್ಟವನ್ನು ಏರಿಸಬೇಕು. ಬ್ರಿಟಿಶರಲ್ಲಿ ಸಾಮಾನ್ಯ ಜನತೆಯ ಸಾಂಸ್ಕೃತಿಕ ಮಟ್ಟ ಉಳಿದವರಲ್ಲಿಗಿಂತ ಹೆಚ್ಚನದಿದೆ. ಇದನ್ನು ನಾವು ಮೆಚ್ಚಿ ಕಲಿತುಕೊಳ್ಳತಕ್ಕದ್ದು ಎಂದು ಮುಂತಾಗಿ ಅವರು ಸಾಂಸ್ಕೃತಿಕ ಮುಖವನ್ನು ಒತ್ತಿ ಹೇಳಿದರು.

ಜಾತಿ, ಮತ, ಪಂಥ

ಪಾಶ್ಚಾತ್ಯರಲ್ಲಿ ಶ್ರೀಮಂತ, ಬಡವ ಎಂಬೆರಡೇ ಗಳಿವೆ. ಜಾತಿ ಇದನ್ನು ಅವರು ತಮ್ಮ ದೇಶದ ರೀತಿಯಲ್ಲಿ ಬಿಡಿಸಿಕೊಂಡಗಿದ್ದಾರೆ. ಆದರೆ ಹಿಂದುಸ್ತಾನದ ರೀತಿ ಬೇರೆ. ಇಲ್ಲಿ ಜನ್ಮದ ಮೂಲಕ ಹಿರಿಕಿರಿಯರೆಂದು ವ್ಯವಹರಿಸುವದು ಮುಖ್ಯವಾಗಿ ಬಿಟ್ಟಿದೆ. ಇದರಿಂದ ನಮ್ಮ ಸಮಾಜವಿಂದು ಅವ್ಯವಸ್ಥೆಗೀಡಾಗಿದೆ. ಇವುಗಳನ್ನು ನಿವಾರಿಸಲು ಮತ್ತು ಮುಂದೆ ಪುನಃ ಇಂಥ ಪರಿಸ್ಥಿತಿ ಬರದಂತೆ ಮಾಡಲು ತಕ್ಕ ವ್ಯವಸ್ಥೆಯನ್ನು ಕೈಕೊಳ್ಳಬೇಕು. ನಾವಿಂದು ಜಾತಿ ಅಳಿಯಬೇಕೆಂಬವರಾಗಬೇಕು. ಅದನ್ನು ಸಾಧಿಸಲು ಶಿಕ್ಷಣದ ಮೂಲಕ ಇಲ್ಲವೆ ಇನ್ನಿತರ ಸಮರ್ಥವಾದ ಸಾಧನದ ಮೂಲಕ ಜನರ ಜಾತಿ ಮತ ಪಂಥ ಭಾವನೆಗಳನ್ನು ಬದಲಾಯಿಸಬೇಕು. ಎಂದು ಶ್ರೀ ಹಳೇಪೇಟೆ ಚಿಂತಾಮಣಿರಾಯರು ಅಭಿಪ್ರಾಯಪಡುತ್ತಾರೆ.

ಇದೇ ವಿಷಯದ ಮೇಲೆ ಶ್ರೀಮಾನ್ ಕರದಿಯವರು ಹೀಗೆ ಹೇಳುತ್ತಾರೆ. ಜಾತಿ ಮತ ಪಂಥದ ವಿಚಾರವಿಂದು ಕೆರಳಲು ಅವುಗಳಿಂದಾದ ಅನಿಷ್ಟ ಪರಿಣಾಮಗಳೇ ಕಾರಣ. ೩೩ ಕೋಟಿ ದೇವರುಗಳೆಂದರೆ ಕೆಲ ಕಾಲದ ಹಿಂದಿದ್ದ ಭಾರತೀಯ ಜನ ಸಂಖ್ಯೆ. ಅಂದರೆ ಪ್ರತಿಯೊಬ್ಬನೂ ಒಬ್ಬ ದೇವರಾದ; ಪ್ರತಿಯೊಬ್ಬನದೂ ಒಂದೊಂದು ಮತ. ಮತದಿಂದ, ಜಾತಿಗಿಂತ ಧರ್ಮ ಮೊದ್ದದು- ಹೀಗಾಗಿ ಮತಭೇದದಿಂದ ಜಾತಿ ಧರ್ಮ ಭೇದಗಳುಂಟಾದವು. ಜಪಾನಿನಲ್ಲಿ ಒಂದೇ ಕುಟುಂಬದಲ್ಲಿ ಬೇರೆ ಬೇರೆ ಜಾತಿ ಮತ ಪಂಥಕ್ಕೆ ಸೇರಿದ ಸದಸ್ಯರಿರಬಹುದು- ಇದು ನಾಗರಿಕ ನೀತಿ, ಒಕ್ಕಟ್ಟಿನ ತಳಹದಿ. ಹೀಗೆ ಭೇದದಲ್ಲಿ ನಾವು ಐಕ್ಯವನ್ನು ಸಾಧಿಸಬೇಕು. ಇದೇ ಸತ್ಯ ಧರ್ಮದ ಸಾರ.

ಏಕೀಕರಣ

ಏಕೀಕರಣದ ಮೇಲೆ ಮಾತನಾಡುತ್ತ ಪ್ರೊ. ಬೇಂದ್ರೆಯವರು ಕರ್ನಾಟಕದಲ್ಲಿ ಇದ್ದವರೆಲ್ಲ ಪರಸ್ಪರ ಕೂಡಿಕೊಂಡಿರಬೇಕು. ಕರ್ನಾಟಕದ ಹೊರಗಿದ್ದವರ ಕೂಡ ಹೊಂದಿಕೊಂಡಿರಬೇಕು. ಅಭಯ ವಿನಯಗಳುಬೇಕು. ಅದರಿಂದ ಯಾರಿಗೂ ಹೆದರುವ ಕಾರಣವಿಲ್ಲ. ಮತ್ತೊಂದು ಮಾತೆಂದರೆ ತನ್ನ ಕೂಡ ಹೊಂದಿಕೊಳ್ಳಲಾರದವನು ಮಂದಿಯ ಕೂಡ ಹೊಂದಿಕೊಳ್ಳಲಾರನು. ಪ್ರಕೃತಿ ಪುರುಷರ ಹೊಡೆದಾಟ ತನ್ನಲ್ಲಿ ಮೊದಲು ನಿಲ್ಲಬೇಕು. ಹಾಗಾದಾಗ ಏಕೀಕರಣ ಕರತಲಾಮಲಕವಾಗದಿರದೆಂದು ಅಭಿಪ್ರಾಯಪಟ್ಟರು.

ಸ್ತ್ರೀಯರ ಪರಿಸ್ಥಿತಿ

ಡಾ. ಗೋಪಾಲಕೃಷ್ಣ ರಾಯರು ಗಂಡಸರ ಪರವಾಗಿ ನಿಂತು ಸ್ತ್ರೀಯರ ಪರಿಸ್ಥಿತಿಯನ್ನು ಈ ರೀತಿ ವಿವೇಚಿಸಿದರು.: ಮೊದಲನೆಯದಾಗಿ ಸ್ತ್ರೀಯರು ಸ್ತ್ರೀಯರಾಗಿ ಉಳಿಯಬೇಕು. ಆಫ್ರಿಕದ ಕಾಡು ಜನರ ಒಂದು ಜಾತಿಯಲ್ಲಿರುವಂತೆ ಹಡೆದ ಹೆಂಗಸಿನ ಹೊರಸಿನ ಮೇಲೆ ಗಂಡ ಹೋಗಿ ಮಲಗಿ ಶಿಸುಸಂಗೋಪನೆ ಮಾಡುವುದು ಅನೈಸರ್ಗಿಕ, ಹೆಂಗಸರಿಗಿಂದು ಗಂಡಸು ಮಾಡಲಾರದ ಒಂದೇ ಒಂದು ಕೆಲಸವಾದ ಮಕ್ಕಳನ್ನು ಹೆತ್ತುಹೊತ್ತು ಸಾಕುವುದರಲ್ಲಿ ಅಗತ್ಯವಾದ ಶಿಕ್ಷಣವನ್ನು ಕೊಡಬೇಕು.

ಇದೇ ವಿಷಯವನ್ನು ವಿವರಿಸುತ್ತ ಶ್ರೀ ರಾ. ವೆ. ಕರಗುದರಿಯವರು—ಹಳೆ ಹೊಸ ಪದ್ಧತಿಗಳ ಸಮಯನ್ವಯವಿರಬೇಕು. ಈಗ ಹೆಂಗಸರಿಗೆ ಸ್ವಾತಂತ್ರ್ಯ ಕೊಟ್ಟಿಲ್ಲ ಎಂಬುದು ಅಸತ್ಯ. ಮನೆಯಲ್ಲಿ ಅವರೇ ಇಂದು ಪ್ರಭುತ್ವ ನಡೆಸುತ್ತಿದ್ದಾನೆ. ಕೇವಲ ಒಂದೆರಡು ವಿರುದ್ಧ ಉದಾಹರಣೆಗಳಿಂದ ಅಪಪ್ರಚಾರ ಮಾಡುವುದು ಹಾನಿಕರ, ಹೆಂಗಸಿನ ಸ್ವಾತಂತ್ರ್ಯವೆಂದರೇನೆಂಬುದನ್ನೂ ಅದರ ವ್ಯಾಪ್ತಿಯನ್ನೂ ಪರಿಣಾಮವನ್ನೂ ಯಾರೂ ಸರಿಯಾಗಿ ವಿಚಾರಿಸಿಲ್ಲವೆಂಬುದು ವಿಚಾರಣೀಯ, ಕಾಂಗ್ರೆಸ್ ಸ್ವಯಂಸೇವಕ ದಲದಲ್ಲಿ ಒಂದು ವಿಶಿಷ್ಟತರದ ಗಣಿತ ಹೇಳುವ ಪ್ರಸಂಗ ಬಂದಿತು. ೧೦ ಸ್ವಯಂಸೇವಕರು ಮತ್ತು ೫ ಸ್ವಯಂಸೇವಿಕೆಯರು ಕಾರ್ಯ ನಿರ್ವಹಿಸ ಹೋದಲ್ಲಿ ಕಾರ್ಯ ನಿರ್ವಾಹ ವಾಗುವದು ಕೇವಲ ಐದೇ ಸ್ವಯಂ ಸೇವಕರಿಂದ, ಅದರಿಂದ ೧೦+೫=೫ ಎಂದಾಯಿತು. ಹೇಗಂದರೆ ೧೦ ಜನ ತರುಣರಲ್ಲಿ ಐವರು ಆ ಐದು ತರುಣಿಯರ ರಕ್ಷಣೆಗೆ ನಿಲ್ಲಬೇಕಾಯಿತು.

ಇದೊಂದು ಉದಾಹರಣೆ ಸ್ವಾತಂತ್ರ್ಯಕ್ಕೆ ಒಳ್ಳೆಯ ವ್ಯಾಖ್ಯೆಯಾಗಿದೆ. ಪಾಶ್ಚಾತ್ಯರ ಪ್ರಕಾರ ನಲವತ್ತು ವರ್ಷಗಳವರೆಗೆ ಗಂಡಹೆಂಡಿರಾಗಿದ್ದು ಕಡೆಗೆ ಅನಾಥರಾಗಿ ಎಲ್ಲೋ ಬಿದ್ದು ಸಾಯಬೇಕಾಗುತ್ತದೆ. ನಮ್ಮ ಸಮಾಜ ಪದ್ಧತಿಯಮೇರೆಗೆ ಬಾಲ್ಯ ಯೌವನ ವೃದ್ಧಾಪ್ಯ ಈ ಮೂರು ಅವಸ್ಥೆಗಳಲ್ಲಿ ಕಡೆತನಕ ಸುಖವಾಗಿರುವ ಅನುಕೂಲವನ್ನು ಒದಗಿಸಿಕೊಡಲಾಗಿದೆ. ಇದೇ "ಸ್ತ್ರೀಸ್ವಾತಂತ್ರ್ಯ ಮರ್ಹಸಿ" ಎಂಬ ಮಾತಿನ ಅರ್ಥವೆಂಬುದಕ್ಕೆ "ಯಪ್ರನಾರ್ಯಸ್ತು ಪೂಜ್ಯಂತೇ" ಇತ್ಯಾದಿ ವಾಕ್ಯಗಳು ಸಾಕ್ಷಿಗೊಡುತ್ತವೆ. ಹೆಂಡತಿ ತಾಯಿಯರನ್ನು ಸಂಬಾಳಿಸ ಬಲ್ಲವನು ಜಗತ್ತನ್ನು ಆಳಬಲ್ಲ. ಈ ಮಾತಿನ ಸತ್ಯವನ್ನರಿತರೆ ಸ್ತ್ರೀ ಸ್ವಾತಂತ್ರ್ಯದ ಇತಿಮಿತಿ ಕಾರಣ ಪರಿಣಾಮಗಳ ಅರಿವಾಗುವುದು. ಈಗಿರುವ ಸ್ಥಿತಿಯಲ್ಲೇ ನಮ್ಮ ಸಂಸಾರ ಜೀವನದ ವ್ಯವಸ್ಥೆ ಪಾಶ್ಚಾತ್ಯರದ್ದಕ್ಕಿಂತ ಹೆಚ್ಚು ನಾಗರಿಕವೂ ಹಿತಕರವೂ ಆಗಿದೆಯೆಂಬುದನ್ನು ವಿಚಾರಿಸಿದರೆ ತಿಳಿಯುವದು ಖಂಡಿತ— ಎಂದು ಅವರು ಅಭಿಪ್ರಾಯಪಟ್ಟರು.

ಜಾಣ ಹೆಂಡತಿ

ಈ ಜಗತ್ತನ್ನು Man-ridden world (ಗಂಡಸಿನರಾಜ್ಯ) ಎಂದು ಅಪಾದಿಸಲಾಗಿದೆ. ಇದಕ್ಕೆ ಕಾರಣವೇನೆಂದು ಎಷ್ಟೋ ಜನರು ಸಂಶೋಧನೆ ನಡೆಸಿದರು. ಎಷ್ಟೋ ದೇಶಗಳಲ್ಲಿ ಅಧಿಕಾರ, ಉದ್ಯೋಗ, ಅರ್ಥ ಮುಂತಾದ ಜೀವನ ಸಾಧನಗಳಲ್ಲಿ ಹೆಂಗಸಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ನೋಡಿದ್ದಾಯಿತು. ಜಗತ್ತಿನಲ್ಲಿ ಎಷ್ಟೋ ಕೃಪಾಳುಗಳಾದ ಗಂಡಸರು ಹೊಡೆದಾಡಿ ಅಲ್ಲಲ್ಲಿ ಯಥಾಶಕ್ತಿ—ಒಮ್ಮೊಮ್ಮೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಕೂಡ ಹೆಂಗಸರ ಸ್ವಾತಂತ್ರ್ಯಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ! ಕಡೆಗೂ "ಆದರೆ" ಎಂಬುದೊಂದು ಉಳಿದೇ ಹೋಯಿತು.

ರಶಿಯ ದೇಶದಲ್ಲಿ ಒಂದುಕತೆ ನಡೆಯಿತು. ಅಲ್ಲಿ ಲಾರಿಸ್ಸ ಮತ್ತು ಕೋಸ್ತ್ಯ ಎಂಬ ದಂಪತಿಗಳಿದ್ದರು; ಇಬ್ಬರೂ ಬಹಳ ಸುಖವಾಗಿದ್ದರು, ಅನೋನ್ಯವಾಗಿದ್ದರು. ರಶಿಯದಲ್ಲಿ ಜಗತ್ತಿನ ಉಳಿದ ರಾಷ್ಟ್ರಗಳಿಗಿಂತ ಹೆಚ್ಚಾಗಿ ಸ್ತ್ರೀ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯ ಕೊಟ್ಟಿರುವುದು ಎಲ್ಲರಿಗೂ ತಿಳಿದ ವಿಷಯ. ಹೀಗಿರುವಲ್ಲಿ ಮಹಾಯುದ್ಧ ಪ್ರಾರಂಭವಾಯಿತು. ಗಂಡ ಹೆಂಡಿರಿಬ್ಬರೂ ಬೇರೆ ಬೇರೆ ಮಿಲಿಟರಿ ಶಾಖೆಗಳಲ್ಲಿ ಸೇರಿ ಕೆಲಸ ಮಾಡತೊಡಗಿದರು. ಇಪ್ಪತ್ತು ತಿಂಗಳ ವರೆಗೆ ಒಬ್ಬರೊಬ್ಬರಿಗೆ ಭೆಟ್ಟಿ ಇದ್ದಿಲ್ಲ. ಯುದ್ಧ ಮುಗಿಯಿತು, ಪುನರ್ಮಿಲನವಾಯಿತು. ಕೋಸ್ತ್ಯ ದಂಪತಿಗಳಿಗೆ ಕಳೆದು ಹೋದ ಸ್ವರ್ಗ ಕರತಲಾಮಲಕವಾಯಿತು.

ಒಂದು ದಿನ ಅವರ ಮನೆಗೆ ನಾಲ್ಕುಜನ ಗೆಳೆಯರು ಬಂದಿದ್ದರು. ಆಗ ಗಂಡಹೆಂಡಿರಿಬ್ಬರು ತಾವು ಯುದ್ಧದಲ್ಲಿ ತೋರಿದ ಸಾಹಸಗಳನ್ನು ವರ್ಣಿಸತೊಡಗಿದರು. ಗಂಡನ ಸಾಹಸಗಳಿಗಿಂತ ಹೆಂಡತಿಯವೇ ಭೀಕರವಾಗಿದ್ದವು. ಇದರಿಂದ ಗಂಡನು ಅವಮಾನಿತನಾದುದು ಗೊತ್ತಾಯಿತು. ಅವನ ತಿರಸ್ಕಾರವನ್ನು ಸಹಿಸಲಾರದೆ ಅವಳು ಮಗನನ್ನು ಕರೆದುಕೊಂಡು ಹೋಗಿ ಬೇರೆಇರತೊಡಗಿದಳು;ಲೆಕ್ಕಣಿಕೆಗೆಕೈಕೊಟ್ಟಳು. ಒಂದು ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಸ್ತುತ ಪ್ರಸಂಗದಲ್ಲಿ ಗಂಡಸಾಗಲೀ ಹೆಂಗಸಾಗಲೀ ಮಾಡಬೇಕಾದ ಕರ್ತವ್ಯವೇನೆಂಬುದರ ಬಗ್ಗೆ ಓದುಗರ ಬುದ್ಧಿವಾದವನ್ನು ಅಪೇಕ್ಷಿಸಿದಳು. ಆಗ ಅವಳಿಗೆ ಬಂದ ಕಾಗದ ಒಂದೇ, ಎರಡೇ? ಆರು ಸಾವಿರ! ಅವುಗಳಲ್ಲಿ ನೂರಕ್ಕೆ ತೊಂಬತ್ತು ಹೆಂಗಸರ ಕಾಗದಗಳು. ಒಬ್ಬಳು ಬರೆಯುತ್ತಾಳೆ: ನಿನ್ನ ಪರಾಕ್ರಮಗಳ ಬಗ್ಗೆ ನೀನು ಹೆಮ್ಮೆಪಡುವದು ಸರಿ; ಆದರೆ ನಿನ್ನ ಗಂಡನೆದುರು ಅದನ್ನು ಹೇಳಿಕೊಂಡದ್ದು ಕೇವಲ ಹುಚ್ಚುತನ.: ಅವನು ಸಮೀಪದಲ್ಲಿದ್ದಾಗ ಅವನೇ ದೊಡ್ಡವನೆಂದು ಸುಮ್ಮನಿರಬೇಕು. ಮತ್ತೊಬ್ಬಳು ಬುದ್ಧಿವಾದ ಹೇಳುತ್ತಾಳೆ: ಯುದ್ಧವು ಬಹುಶಃ ನಿನ್ನ ತಲೆಯನ್ನು ಕೆಡಿಸಿಬಿಟ್ಟಿದೆ. ನೀನು ಈಗ ಗೃಹಿಣಿಯಲ್ಲ, ಸಿಪಾಯಿ; ನಿನ್ನ ಗಂಡನಿಗೆ ಶಾಂತಿ ಸಮಾಧಾನಗಳು ಬೇಕಾಗಿವೆ. ಏಕೆಂದರೆ ಅವನು ದಣಿದು ಬಂದವನು. ಆದರೆ ನೀನು ಅವನಿಗೆ ಅವುಗಳನ್ನು ಕೊಡಲು ಶಕ್ತಳಲ್ಲ. ಮಗುದೊಬ್ಬಳು ಹೇಳುತ್ತಾಳೆ: ಹೆಂಗಸರು ಗಂಡಸರ ಸಮಾನರೆಂಬುದೇನೋ ನಿಜ, ಆದರೆ ನಿನ್ನ ಗಂಡನು ಒಂದು ಸಂಗತಿ ಹೇಳಿದರೆ ಅದಕ್ಕಿತ ಉತ್ತಮವಾದುದನ್ನು ನೀನು ಹೇಳಿದ್ದು ನಿನ್ನ ಹೆಡ್ಡತನವೇ ಸರಿ.

ಬರಹಗಾರರಲ್ಲಿ ಬಹಳ ಜನರು ಆ ಗಂಡಹೆಂಡಿರು ಸ್ವಲ್ಪ ಬುದ್ಧಿವಂತರಾಗಿದ್ದರೆ ಸುಖವಾಗಿರಬಹುದಾಗಿತ್ತು ಎಂಬುದನ್ನು ಒಪ್ಪಿದರು. ಆದರೆ ಕಡೆಯಲ್ಲಿ ಹಳೆಯ ಕಾಲದ ಗರತಿಯರು ಮಾಡುವಂತೆ ಗಂಡನು ತನ್ನ ಯಜಮಾನನು ಎಂಬ ನಂಬಿಗೆಯನ್ನು ಅವನಲ್ಲಿ ಹುಟ್ಟಿಸುವ ಕಲೆಯನ್ನು ಸಾಧಿಸಿಕೊಂಡವಳೇ ಜಾಣಹೆಂಡತಿ ಎಂಬ ತೀರ್ಪಿಗೆ ಬಂದರು.

ಕುಡುಕುತನಕ್ಕೆ ರಾಮಬಾಣ

ಇಸ್ಲಾಮಿನ ಪ್ರಕಾರವೂ ಕುಡುಕತನ ನಿಷಿದ್ಧ. ಕಾಂಗ್ರೆಸಿನ ಧೋರಣೆಯಂತೆಯೂ ಅದು ತ್ಯಾಜ್ಯ. ಹಿಂದುಸ್ತಾನದ ಅನೇಕ ಪ್ರಾಂತಸರ್ಕಾರಗಳು ಆಗಲೇ ಪಾನನಿರೋಧ ಕಾಯದೆಗಳನ್ನು ಎಷ್ಟೋ ಕಡೆ ಜಾರಿಗೆ ತಂದಿವೆ. ಮದ್ರಾಸು ಸರಕಾರವಂತೂ ಕುಡಿದದ್ದು ತಿಳಿದರೆ ಕುಡುಕನನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ವಿಧಿಸುವವರೆಗೆ ಹೋಗಿದೆ. ಆದರೆ ಈ ರೀತಿ ಬಲಾತ್ಕಾರದಿಂದ ಕುಡುಕತನವನ್ನು ಇಲ್ಲದಂತೆ ಮಾಡುವದು ದುಸ್ಸಾಧ್ಯ, ಊರಿಗೊಂದು ಕಳ್ಳಂಗಡಿಯಿದ್ದರೆ ಅದನ್ನು ಮುಚ್ಚಿದಮೇಲೆ ಎಷ್ಟೋ ಹಳ್ಳಿಗಳಲ್ಲಿ ಪ್ರತಿಯೊಂದು ಮನೆಯೂ ಕಳ್ಳಂಗಡಿಯಾಗಿ ಮಾರ್ಪಟ್ಟ ಉದಾಹರಣೆಗಳಿವೆ. ಕುಡಿಯುವುದೊಂದು ಸಿದ್ಧವಾದ ರೂಢಿಯೆನಿಸಿದೆ. ಇದನ್ನು ತಪ್ಪಿಸಲು ಶಿಕ್ಷಣದ ಮೂಲಕ ಜನರಿಗೆ ಬೋಧಿಸುವುದೊಂದೇ ಇಲ್ಲಿಯವರೆಗೆ ತಿಳಿದ ಮಾರ್ಗವಾಗಿತ್ತು.

ಆದರೆ ಫ್ರಾನ್ಸಿನಿಂದ ಈಗ ಹೊಸ ಸಂಶೋಧನದ ಸುದ್ದಿಯೊಂದು ಹೊರಬಿದ್ದಿದೆ. ಅದರ ಪ್ರಕಾರ ಒಂದು ವಿಧದ ಇಂಜಕ್ಷನನ್ನು ಕೊಟ್ಟರೆ ಕುಡಕನಿಗೆ ಕುಡಿಯುವ ಇಚ್ಛೆಯೇ ಮಾಯವಾಗುವುದಂತೆ; ಸಿಡುಬನ್ನು ನಾಶಮಾಡಲು ಸಿಡುಬನ್ನೇ ಇಂಜಕ್ಷನ್ ಕೊಟ್ಟಂತೆ, ಮೈಲಿಯನ್ನು ನಾಶಮಾಡಲು ಮೈಲಿಯನ್ನೇ ಮೈಯೊಳಗೆ ಚುಚ್ಚಿದಂತೆ, ಪ್ಲೇಗು ಬರದಂತೆ ಮಾಡಲು ಪ್ಲೇಗನ್ನೆ ರಕ್ತಗತಮಾಡಿಕೊಂಡಂತೆ ವ್ಯಾಧಿಗೆ ಪ್ರತೀಕಾರ ರೂಪವಾಗಿ "ಎತಿಲ್ ಅಲ್‌ಕೋಹಾಲ್" ಎಂಬ ಹೆಂಡದ ಸತ್ವವನು ಈ ವಿಧಾನದಲ್ಲಿ ಇಂಜೆಕ್ಷನ್ ಕೊಡಲಾಗುವದು. ಇದರಿಂದ ಹುಟ್ಟು ಕುಡುಕನು ಕೂಡ ನೆಟ್ಟಗಾಗುವನೆಂದು ಏಳು ವರ್ಷದ ಅನುಭವದಿಂದ ಹೇಳಲಾಗುತ್ತದೆ. ಇದು ಅಗ್ಗಕ್ಕೆ ದೊರೆಯುವ ಮದ್ದೆಂದು ಇದನ್ನು ಹಿಂದುಸ್ತಾನದ ಸರಕಾರಗಳೆ ತಳ್ಳಿ ಕುಡುಕರನ್ನು ಉದ್ಧರಿಸಲು ಪ್ರಯತ್ನ ಮಾಡುವುದು ಅತ್ಯಗತ್ಯವೆಂದೂ ಒತ್ತಿ ಹೇಳಲಾಗಿದೆ. ಏಳೇ ದಿನಗಳಲ್ಲಿ ಏನೂ ಶ್ರಮವಿಲ್ಲದೆ ಅತ್ಯಲ್ಪ ವೆಚ್ಚದಿಂದ ಕುಡುಕತನದಿಂದ ಮುಕ್ತವಾಗುವ ಸುಯೋಗವು ಬಡಭಾರತೀಯ ಕುಡುಕರಿಗೆ ಉಂಟಾಗಿ ಎಷ್ಟೋ ಸಂಸಾರಗಳು ಸುಗಮವಾಗಿ ಸಾಗುವಂತಾಗುವದು ಅಪೇಕ್ಷಣೀಯವಲ್ಲವೆ?

ಮೊದಲಿನ ಐದು ವಿಷಯಗಳು ಹುಬ್ಬಳ್ಳಿಯಲ್ಲಿ ಮೊನ್ನೆ ನಡೆದ ವಿಶೇಷ ಸಾಹಿತ್ಯೋತ್ಸವದ ವಿಚಾರ ಸಂಕಿರಣದ ಸಾರರೂಪವಾಗಿವೆ.

೭೪, ಪ್ರಪಂಚದಲ್ಲಿ ದುಡಿಯುತ್ತಿರುವಳು. ...ಯರು. ಸ್ತ್ರೀಯರು.....

ಲಂಡನ್ನಿನಲ್ಲಿ ನೆಹರೂ ಜಯಂತಿ

ತಾ. ೧೪ ರ ಬೆಳಿಗ್ಗೆ ಲಂಡನ್ನಿನಲ್ಲಿರುವ ಭಾರತ ಭವನದಲ್ಲಿ ಮಹಾಪ್ರಧಾನ ಪಂಡಿತ ಜವಾಹರರ ವರ್ಧಂತಿಯು ಆಚರಿಸಲ್ಪಟ್ಟಿತು. ಅನೇಕ ಜನಾಂಗಗಳಿಗೆ ಸೇರಿದ ಐನೂರು ಜನರು ಆ ಸಮಾರಂಭಕ್ಕೆ ಹಾಜರಿದ್ದರು. ಅವರಲ್ಲಿ ಅರ್ಜಂಟೀನ, ಬಲ್ಗೇರಿಯ, ಚೈಲ್, ಚೀನ, ಜೆಕೊಸ್ಲೋವೇಕಿಯ ಇಟಲಿ, ಇರಾಕ್ ಹಾಗೂ ನೇಪಾಳ, ಇರಾನ್, ಪೋರ್ತುಗಲ್, ಮತ್ತು ರುಮೇನಿಯದ ರಾಯಭಾರಿಗಳಿದ್ದರು. ಮಂತ್ರಿಗಳಲ್ಲಿ ಬಲ್ಗೇರಿಯ, ಡೊಮಿನಿಕನ್ ಪ್ರಜಾರಾಜ್ಯ, ಇಜಿಪ್ತ, ಐಸಲಂಡ, ಲೆಬನಾನ್, ಲುಕ್ಸೆಂಬರ್ಗ, ಸೌದಿಅರೇಬಿಯ, ಸ್ವಿಜರ್‌ಲಂಡ್, ಸಿರಿಯ, ಟ್ರಾನ್ಸ್‌ಜೋರ್ಡನ್ ಮತ್ತು ಫಿನ್ಲೆಂಡಿನವರಿದ್ದರು. ಕೊಲಂಬಿಯ ಮತ್ತು ಸ್ಪೇನಿನ ಚಾರ್ಜಡಿ ಅಫೇರ್ಸರೂ ನ್ಯೂಜಿಲೆಂಡ, ಕೆನಡ, ದ. ಆಫ್ರಿಕ, ದ. ರೊಡೇಶಿಯ, ಆಸ್ಟ್ರೇಲಿಯ, ಐರ್ಲೆಂಡ್ ಮತ್ತು ಸಿಂಹಳಗಳ ಹೈಕಮಿಶನರರೂ ನ್ಯೂಫೌಂಡ್ಲೆಂಡ್, ತಿರುವಾಂಕೊರು, ಮೈಸೂರು ಪಾಕಿಸ್ತಾನಗಳ ವ್ಯಾಪಾರ ಕಮಿಶನರರೂ ಪ್ರಸಿದ್ಧ ಪುರುಷರಾದ ಲಾರ್ಡ ನಾಥನ್, ಅರ್ಲ ಲಿಸ್ಟೋವೆಲ್, ಗೌ. ಪಿ. ಜೆ. ನೊಯೆಲ್‌ಬೇಕರ್, ಮಿ. ಜಾರ್ಜಬಚನನ್, ಜಾನ್‌ಮೀಟ್ಲ ಲಾರ್ಡಪೆಥಿಕ್ ಲಾರೆನ್ಸ್ ಮತ್ತು ಜನರಲ್ ಸರ್ ರಾಬರ್ಟ ಲಾಕ್‌ಹಾರ್ಟ ಇವರೂ ಹಾಜರಿದ್ದರು.

ಹೈಕಮಿಶನರರು ಲಾರ್ಡ ಮತ್ತು ಲೇಡಿ ಮೌಂಟ್‌ಬ್ಯಾಟನರನ್ನು ಸ್ವಾಗತಿಸಿದರು

ಜಗತ್ತಿನ ವೃತ್ತಪತ್ರಿಕೆಗಳ ೬೦ ಪ್ರತಿನಿಧಿಗಳು ಅಲ್ಲಿಗೆ ಆಗಮಿಸಿದ್ದರು. ಬ್ರಿಟಿಶ್ ಆಕಾಶವಾಣಿಯಲ್ಲಿ ಅದರ ವಿವರ ಹೊರಬಿತ್ತು. ದೃಶ್ಯವನ್ನು ಅನೇಕ ಛಾಯಾಚಿತ್ರ ಗ್ರಾಹಕರು ಚಿತ್ರ ತೆಗೆದರು.

ಸಮಾರಂಭದ ಪ್ರಾರಂಭ ಶ್ರೀಮತಿ ಮಿಸ್ತ್ರಿಯು ಭಾಷಣದಿಂದ ಮಾಡಲ್ಪಟ್ಟಿತು. ಅನಂತರ ಭಾರತದ ಹೈಕಮಿಶನರರು ಲಾರ್ಡ ಮೌಂಟ ಬ್ಯಾಟನ್ನರನ್ನು ಪಂಡಿತರ ಚಿತ್ರವನ್ನು ಅನಾವರಣ ಮಾಡಲು ಕೇಳಿಕೊಂಡರು. ಈ ತೈಲ ಚಿತ್ರವು ನೆಹರೂರಷ್ಟೇ ದೊಡ್ಡದಿದ್ದು ಮುಂಬಯಿಯ ಸುಪ್ರಸಿದ್ಧ ಕಲೆಗಾರರಾದ ಶ್ರೀ. ವಿ. ಆರ್. ರಾವ್ ಇವರಿಂದ ತಯಾರಿಸಲ್ಪಟ್ಟಿದ್ದು.

ಸಮಾರಂಭವನ್ನು ಕೊನೆಗೊಳಿಸುತ್ತ ಭಾರತದ ಹೈಕಮಿಶನರರು—'ಭಾರತೀಯರ ಪ್ರೀತಿಗೆ ಪಾತ್ರರಾದುದು ಲಾರ್ಡ ಮತ್ತು ಲೇಡಿ ಮೌಂಟ್‌ಬ್ಯಾಟನ್ನರಿಗೆ ಹೆಚ್ಚಿನದು. ಅವರ ಪ್ರಾಮಾಣಿಕ ನಡತೆಯೇ ಅದಕ್ಕೆ ಕಾರಣವಲ್ಲದೆ ಕಪಟನಾಟಕವಲ್ಲ. ಅವರು ಕಡಬನ್ನು ಹಂಚಲಿಲ್ಲ, ಮಕ್ಕಳಿಗೆ ಮುತ್ತು ಕೊಡಲಿಲ್ಲ. ಕೆಲ ಮಟ್ಟಿಗೆ 'ಹಳೆಯದನ್ನು ಮರೆತು ಭವಿಷ್ಯದತ್ತ ಗಮನವಿತ್ತ ನಮ್ಮ ಜನರೂ ಕಾರಣರು ಆ ಭವಿಷ್ಯದಲ್ಲಿ ಅಕ್ಷತವಾಗಿ ನಿಮ್ಮಿಬ್ಬರ ಹೆಸರುಗಳೂ ಬರೆಯಲ್ಪಟ್ಟಿವೆ'- ಎಂದರು. ಭಾಷಣಕಿವಿಗೆಡಚಿಕ್ಕುವ ಚಪ್ಪಾಳೆಯಿಂದ ಮುಕ್ತಾಯವಾಯಿತು. ಅನಂತರ ವಂದೇಮಾತರಂ ಗೀತೆಯೊಡನೆ ಸಮಾರಂಭ ಕೊನೆಗಂಡಿತು.

ಜಿನೀವಾದಲ್ಲಿಯ ಸುಂಕದ ಸಭೆ

೨೩ ರಾಷ್ಟ್ರಗಳು ಕಡೆಗೊಮ್ಮೆ ಜಿನೀವಾದಲ್ಲಿ ಸೇರಿದ ಸುಂಕದ ಸಭೆಯಲ್ಲಿ ಒಂದು ನಿರ್ಣಯಕ್ಕೆ ಬಂದು ಸಹಿ ಮಾಡಿದವೆಂದು ತಿಳಿಯುತ್ತದೆ. ಆ ಒಪ್ಪಂದದ ಪ್ರಕಾರ ಒಪ್ಪಿಗೆಯಿತ್ತ ರಾಷ್ಟ್ರಗಳು ದ್ವಿದಲ ಪದ್ಧತಿಯ ಮತ್ತು ಬಹುದಲ ಪದ್ಧತಿಯ ಹಳೆಯ ಒಡಂಬಡಿಕೆಗಳೊಳಗಾದ ಹಲವು ಪ್ರದೇಶಗಳನ್ನು ಮುಕ್ತಗೊಳಿಸಲು ಶಕ್ತವಾದವು ಅಮೇರಿಕದ ಸಂಯುಕ್ತ ಸಂಸ್ಥಾನವು ಪರದೇಶಗಳ ಅನೇಕ ಸಾಮಾನುಗಳ ಮೇಲಿನ ಸುಂಕವನ್ನು ಇಳಿಸಿ ಅವುಗಳಿಗೆ ಡಾಲರನ್ನು ಸಂಪಾದಿಸಲು ಅವಕಾಶವನ್ನು ಕಲ್ಪಿಸಿ ಕೊಡುವದಾಗಿ ಒಪ್ಪಿಕೊಂಡಿತು. ಮತ್ತು ಯುದ್ಧದಿಂದ ನಷ್ಟ ಹೊಂದಿನ ಯುರೋಪ್ಯ ರಾಷ್ಟ್ರಗಳು ಆಯಾತದ ಮೇಲೆ ೧೯೫೦ ರ ವರೆಗೆ ನಿರ್ಬಂಧ ಹೇರಲು ಅನುಗೊಡಲಾಯಿತು. ಅದರಿಂದ ಅವಕ್ಕೆ ಅಮುಖ್ಯ ಪದಾರ್ಥಗಳ ಆಯಾತವನ್ನು ತಡೆಗಟ್ಟಲು ಅನುಕೂಲ ದೊರೆವಂತಾಯಿತು. ಇದಲ್ಲದೆ ಡಾಲರಿಲ್ಲದ ದೇಶಗಳಿಗೆ ಕೂಡಲೆ ಸಾಮಾನುಗಳನ್ನು ಅಮೇರಿಕಕ್ಕೆ ನಿರ್ಯಾತ ಮಾಡಲು ಸಂದರ್ಭವೊದಗುವಂತಾಯಿತು.

ಇದರ ಜೊತೆಗೆ ಸಂಯುಕ್ತ ರಾಷ್ಟ್ರಸಂಘದ ವ್ಯಾಪಾರ ಮತ್ತು ಉದ್ಯೋಗ ಪರಿಷತ್ತಿನಲ್ಲಿ ಭಾರತಕ್ಕೆ ದೊರೆತ ಸವಲತ್ತುಗಳನ್ನೂ ಹೇಳಬಹುದಾಗಿದೆ. ೧೯೪೪—೪೫ ರ ಅಂಕೆ ಸಂಖ್ಯೆಗಳ ಮೇರೆಗೆ ಭಾರತದ ವಾರ್ಷಿಕ ನಿರ್ಯಾತ ವ್ಯಾಪಾರವು ೪೪ ಕೋಟಿಗಳಷ್ಟಾಗುವುದು. ಇದರ ಮೇಲೆ ದೊರೆತ ಸವಲತ್ತಿಗೆ ಬದಲಾಗಿ ಭಾರತವು

ಅಂತರರಾಷ್ಟ್ರೀಯ

೩೧ ಕೋಟಿ ರೂಪಾಯಿಗಳ ಆಯಾತ ವ್ಯಾಪಾರದ ಮೇಲೆ ಉಳಿದ ರಾಷ್ಟ್ರಗಳಿಗೆ ಸವಲತ್ತನ್ನು ಕೊಡುವದಾಗಿ ಒಪ್ಪಿದೆ. ಭಾರತ ಪಡೆದ ಸವಲತ್ತುಗಳು—ಸಣಬು, ಸಣಬಿನ ಸಾಮಾನುಗಳು, ಹತ್ತಿಯ ಸಾಮಾನುಗಳು, ಗೋಡಂಬೆ, ಕಾಗೆ ಬಂಗಾರ, ಚಿಪ್ಪು, ನಾರು, ಚಾಪೆ, ಆಟದ ಸಾಮಾನುಗಳು, ಜಮಖಾನಗಳು, ಸಂಬಾರದ ದಿನಸುಗಳು, ಮುಖ್ಯವಾದ ಎಣ್ಣೆಗಳು, ಚಹ ಮತ್ತು ಹೊಗೆಸೊಪ್ಪು—ಇವುಗಳ ಮೇಲೆ. ಇದಕ್ಕೆ ಬದಲಾಗಿ ಅನ್ಯದೇಶಗಳಿಗೆ ಹಾಲು ಮತ್ತು ಹಾಲಿನ ಪದಾರ್ಥಗಳು, ಸಂಗ್ರಹಿಸಿದ ಆಹಾರ ವಸ್ತು, ಹಣ್ಣು ಮತ್ತು ತರಕಾರಿಗಳು, ರಸಾಯನಿಕ ದ್ರವ್ಯಗಳು, ಔಷಧ ಸಾಮಗ್ರಿಗಳು, ಕಲ್ಲಿದ್ದಲಿನ ಡಾಮರು, ಬಣ್ಣ, ವಿಶಿಷ್ಟ ಯಂತ್ರೋಪಕರಣಗಳು, ಮೋಟಾರುಕಾರು, ರೇಡಿಯೋ, ಟೈಪ್‌ರೈಟರ್, ಕಚ್ಚಾ ಉಣ್ಣೆ, ಕನ್ನಡಕ, ಗೊಬ್ಬರ, ಶೈತ್ಯೀಕರಣ ಯಂತ್ರಗಳು ಇವುಗಳ ಮೇಲೆ ಹೆಚ್ಚಿನ ಸವಲತ್ತುಗಳನ್ನು ಕೊಡುವುದಾಗಿ ಭಾರತ ತಿಳಿಸಿದೆ.

ಅಮೇರಿಕೆಯಲ್ಲಿ ಬೆಲೆಯ ಏರಿಕೆ

ಅಮೇರಿಕವಿಂದು ಸರ್ವಸಮೃದ್ಧದೇಶವೆಂದು ಹೆಸರಾಗಿದೆ. ಅಂದಮೇಲೆ ಅಲ್ಲಿ ಸರ್ವರೂ ಸುಖಿಗಳಾಗಿರಬೇಕೆಂದು ಊಹಿಸುವುದು ಸಹಜ. ಅಲ್ಲಿ ಸೀದಾಪದ್ಧತಿ ಇಲ್ಲವೆಂಬುದು ಸತ್ಯ. ಆದರೆ ಅಲ್ಲಿಯೂ ಬಡವರು, ಸಂತ್ರಸ್ತರು ಇದ್ದೇ ಇದ್ದಾರೆಂದರೆ ಆಶ್ಚರ್ಯವಲ್ಲವೆ? ಅದಕ್ಕೆ ಕಾರಣವಿದೆ. ಅದೆಂದರೆ, ಬೆಲೆಯ ಏರಿಕೆ. ಇದರ ದೆಸೆಯಿಂದ ವಸ್ತುಸಂಗ್ರಹವಿದ್ದರೂ ಅಲ್ಲಿ ಎಷ್ಟೋ ಜನರು ತಮ್ಮ ಸಂಪಾದನೆ ಸಾಲದೆ ಪರಿಸ್ಥಿತಿಯ ಒತ್ತಾಯದಿಂದ ತಮ್ಮ ತಮ್ಮ ಕುಟುಂಬದಲ್ಲಿ ಸೀದಾಪದ್ಧತಿಯ ಮೇರೆಗೆ ಜೀವನ ನಡೆಸಬೇಕಾಗಿದೆ.

ಕಳೆದ ಕಾಂಗ್ರೆಸಿನ ಪರಿಷತ್ತಿನಲ್ಲಿ ಅಧ್ಯಕ್ಷ ಟ್ರೂಮನ್ನರು ಈ ಬೆಲೆಯ ಏರಿಕೆಯನ್ನು ತಡೆಗಟ್ಟಲು ೧೦ ಮುದ್ದೆಗಳ ಕಾರ್ಯ ಯೋಜನೆಯೊಂದನ್ನು ಮುಂದಿಟ್ಟರು. ಇದಕ್ಕೆ ಕಳೆದ ೧೨ ತಿಂಗಳಲ್ಲಿ ಆಹಾರ ಧಾನ್ಯಗಳ ಬೆಲೆ ನೂರಕ್ಕೆ ೪೦ ರಷ್ಟು ಏರಿದ್ದೇ ಕಾರಣ. ಬಟ್ಟೆಯ ಬೆಲೆಯು ೧೦೦ ಕ್ಕೆ ೧೪ರಷ್ಟು ಏರಿದೆ. ಈ ಕಾರಣದಿಂದಲೂ ಮಾರ್ಶಲ್ಲರ ಯುರೋಪಿಗೆ ಸಹಾಯ ಕೊಡುವ ಯೋಜನೆಯ ದೆಸೆಯಿಂದಲೂ ಟ್ರೂಮನ್ನರು ತಮಗೆ ಹೆಚ್ಚಿಗೆ ಅಧಿಕಾರ ಬೇಕೆಂದು ಕೇಳಿದುದಾಗಿ ತಿಳಿಯುತ್ತದೆ. ಆ ಹೆಚ್ಚಿನ ಅಧಿಕಾರವನ್ನು ಅವರು ಅವಶ್ಯ ಬಿದ್ದರೆ ಮಾತ್ರ ಬಳಸುವದಾಗಿ ಆಶ್ವಾಸನವಿತ್ತಿದ್ದರೂ ಅದನ್ನು ಬಳಕೆಯ ವಸ್ತುಗಳ ವಿತರಣದ ಬಗ್ಗೆ ಉಪಯೋಗಿಸಿದರೆ ಭಿನ್ನಾಭಿಪ್ರಾಯಕ್ಕೆ ಎಡೆಗೊಟ್ಟಂತಾಗಬಹುದೆಂದು ಹೇಳಲಾಗುತ್ತದೆ. ಇಷ್ಟು ಮಾತ್ರ ನಿಜ. ಇನ್ನು ಬೆಲೆ ಏರುತ್ತ ಹೋದರೆ ಅಮೇರಿಕನ್ನರ ಜೀವನದಲ್ಲಿ ಆರ್ಥಿಕ ಉತ್ಪಾತವುಂಟಾಗಿ ಇಡೀ ದೇಶವೇ ಅಲ್ಲೋಲ ಕಲ್ಲೋಲವಾಗದಿರದು. ಇಷ್ಟಾದರೂ ನಿಯಂತ್ರಣವೆಂದರೆ ಅಮೇರಿಕನ್ನರಿಗೆ ಪರಮ ದ್ವೇಷ. ಅದರಿಂದಲೇ ಅವರು ಮೊದಲಿನಿಂದಲೂ ಪ್ರತಿಭಟಿಸಿ ಅದು ಬರದಂತೆ ನೋಡಿಕೊಂಡಿದ್ದಾರೆ. ಭಾರತದಲ್ಲೂ ಇಂದು ಅದೇ ಭಾವನೆ ಯೇಳಹತ್ತಿದೆ. ಗಾಂಧೀಜಿಯೇ ಸ್ವತಃ ನಿಯಂತ್ರಣವನ್ನು ಹೀಗಳೆಯಹತ್ತಿದ್ದಾರೆ. ರಾಷ್ಟ್ರೀಯ ಚರಿತ್ರಕ್ಕೆ ಭಂಗತರುವ ಈ ನಿಯಂತ್ರಣ ವ್ಯವಹಾರ ಇಲ್ಲಿಯೂ ಕೊನೆಗೊಳ್ಳುವುದೆಂದೆಣಿಸಲಾಗಿದೆ. ಬೆಲೆಯೇರದಂತೆ ನೋಟ್ಟ ಮೊದಲು ಸರಕಾರಗಳು ಮಾತ್ರ ಬಹುಜಾಗ್ರತೆ ವಹಿಸಬೇಕಾಗುತ್ತದೆ.

ಅಂತರ್ರಾಷ್ಟ್ರೀಯ ಶ್ರಮ ಸಂಘ

ಮೊನ್ನೆ ಮೊನ್ನೆ ಹೊಸ ದಿಲ್ಲಿಯಲ್ಲಿ ಅಂತರ್ರಾಷ್ಟ್ರೀಯ ಶ್ರಮಸಂಘದ ಏಶಿಯ ಪ್ರಾದೇಶಿಕ ಸಮಿತಿಯು ಸೇರಿದ್ದು ಸುವಿದಿತವಿದೆ. ವಿದ್ವೇಷವಿಲ್ಲದ ಜಗತ್ತನ್ನು ನಿರ್ಮಿಸುವುದೇ ಸದ್ಯದ ಗುರಿಯೆಂದೂ ಹಾಗೆ ಮಾಡಲು ಕೂಲಿಕಾರರ ಪರಿಸ್ಥಿತಿಯನ್ನು ಸುಧಾರಿಸುವುದು ಅಗತ್ಯವೆಂದೂ ಆ ಸಂದರ್ಭದಲ್ಲಿ ಹಿಂದುಸ್ತಾನ ಸರಕಾರದ ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮರು ಸಾರಿದರು. ಅದರೊಡನೆ ಅವರು, ಅಂತರ್ರಾಷ್ಟ್ರೀಯ ಮಟ್ಟಗಳು ಸಂಘದ ನಿರ್ಣಯದಲ್ಲಿ ಹೇಳಲ್ಪಟ್ಟಿದ್ದರೂ ಅವನ್ನು ಒಮ್ಮಿಂದೊಮ್ಮೆ ಅಮಲಿನಲ್ಲಿ ತರಲು ಸಾಧ್ಯವಾಗದೆಂಬ ಮಾತನ್ನೂ ನುಡಿದರು. ಏಶಿಯದ ದೇಶಗಳಲ್ಲಿ ಕ್ರಮೇಣ ಒಂದಾದ ಮೇಲೊಂದರಂತೆ ಉಕ್ತ ನಿಯಮಗಳನ್ನು ಜಾರಿಗೆ ತರಲು ಯತ್ನಿಸಬೇಕೆಂದು ಅವರು ಸಲಹೆಯಿತ್ತರು.

ಠರಾವುಗಳಲ್ಲಿಮುಖ್ಯವಾದುದೆಂದರೆ, ಸಂಘಟನೆಯ ಮತ್ತು ಪರಸ್ಪರ ಸಂಪರ್ಕದ ಸ್ವಾತಂತ್ರ್ಯ ಕೂಲಿಕಾರರಿಗೆ ಇರುವಂತೆ ನೋಡಿಕೊಳ್ಳುವುದು. ಆ ಸ್ವಾತಂತ್ರ್ಯವನ್ನು ಅವರು ತಮ್ಮ ಜೀವನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಬಳಸುವಂತೆ ಅವರಿಗೆ ಹಕ್ಕು ಇರುವುದು ಎಂಬ ತತ್ವವನ್ನು ಅದರೊಟ್ಟಿಗೆ ಏಶಿಯದ ದೇಶಗಳೆಲ್ಲವೂ ಒಪ್ಪಿಕೊಳ್ಳಬೇಕೆಂದೂ ಆ ಠರಾವಿನಲ್ಲಿದೆ. ಉಳಿದ ಠರಾವುಗಳು ಶ್ರಮದ ಮೇಲ್ವಿಚಾರಣೆ, ರಾಷ್ಟ್ರೀಯ ಶ್ರಮಯೋಜನೆ, ಕೂಲಿಯ ಮಟ್ಟಗಳು, ಕೂಲಿಕಾರರಿಗೆ ಸಂಬಂಧಿಸಿದ ಕಾಯದೆಗಳ ತಿದ್ದುಪಡಿ ಮುಂತಾದವುಗಳಿಗೆ ಸಂಬಂಧಿಸಿದವು.

ರಾಷ್ಟ್ರೀಯ ಶ್ರಮಯೋಜನೆಯ ಠರಾವಿನ ಪ್ರಕಾರ ಏಶಿಯದ ಪ್ರತಿಯೊಂದು ರಾಷ್ಟ್ರವೂ ತನ್ನತನ್ನ ಯೋಜನೆಯನ್ನು ಸಿದ್ಧಗೊಳಿಸಬೇಕು. ಅದರನ್ವಯ ಸದ್ಯದ ಅಂತರ್ರಾಷ್ಟ್ರೀಯ ಶ್ರಮ ಮಟ್ಟಗಳನ್ನು ಒಂದಾದಮೇಲೊಂದರಂತೆ ಜಾರಿಗೆ ತರಲು ಮುಂಬರಬೇಕು. ಅವುಗಳನ್ನು ೧೯೪೯ ರಲ್ಲಿ ಸೇರಲಿರುವ ಏಶಿಯದ ಪ್ರಾದೇಶಿಕ ಪರಿಷತ್ತಿಗೆ ಪರಿಶೀಲನೆಗಾಗಿ ಒಪ್ಪಿಸಬೇಕು. ಯೋಜನೆಗಳ ತಯಾರಿಕೆಯಲ್ಲಿ ಇಂದಿನ ೪೮ ಗಂಟೆಗಳ ವಾರದತ್ತ ಲಕ್ಷ್ಯ ಕೊಡಬೇಕು. ಅದು ಎಲ್ಲೆಲ್ಲಿ ಯೋಗ್ಯ ಮತ್ತು ಎಲ್ಲಿ ಅಯೋಗ್ಯ ಎಂಬುದನ್ನು ವಿಚಾರಿಸಬೇಕು. ಹೀಗೆ ಏಶಿಯದ ಶ್ರಮಜೀವಿಗಳ ಪರಿಸ್ಥಿತಿಯ ಸುಧಾರಣೆಗಳ ಬಗ್ಗೆ ಹಲವು ಸಲಹೆ, ಸೂಚನೆಗಳನ್ನೊಳಗೊಂಡ ಠರಾವುಗಳು ಪಾಸಾಗಿ ಪರಿಷತ್ತು ಯಶಸ್ವಿಯಾಗಿ ಕೊನೆಗಂಡಿತು.

ಈ ಅಂತರ್ರಾಷ್ಟ್ರೀಯ ಶ್ರಮಸಂಘದ ಮುಂದಿನ ಪ್ರಾದೇಶಿಕ ಪರಿಷತ್ತು ೧೯೪೯ ರಲ್ಲಿ ಚೀನದಲ್ಲಿ ಕೂಡಬೇಕೆಂದು ಚೀನದ ಸಾಮಾಜಿಕ ಶಾಖೆಯ ಮಂತ್ರಿಗಳು ತಮ್ಮ ಸರಕಾರದ ಪರವಾಗಿ ನಿಮಂತ್ರಣವಿತ್ತರೆಂದು ತಿಳಿಯುತ್ತದೆ.

ಲಂಡನ್ನಿನಲ್ಲಿ ವಿವಾಹ ಸಮಾರಂಭ

ರಾಜಕುಮಾರಿ ಎಲಿಜಬೆತ್ತಳಿಗೂ ಲೆಫ್ಟಿನೆಂಟ್ ಫಿಲಿಪ್ ಮೌಂಟ ಬ್ಯಾಟನ್ನರಿಗೂ ಮೊನ್ನೆ ಲಂಡನ್ನಿನಲ್ಲಿ ಮದುವೆಯಾಯಿತು.

ರಾಜಕುಮಾರಿಯು ಇಂಗ್ಲೆಂಡಿನ ರಾಜ್ಯದ ಉತ್ತರಾಧಿಕಾರಿ. ಅವಳ ಗಂಡನನ್ನೀಗ 'ಡ್ಯೂಕ್ ಆಫ್ ಎಡಿನ್‌ಬರ್ಗ' ಪದವಿಗೇರಿಸಲಾಗಿದೆ. ಬಕಿಂಗ್‌ಹ್ಯಾಂ ಅರಮನೆಯಲ್ಲಿ ವಿವಾಹದ ಮೆರವಣಿಗೆ ಪ್ರಾರಂಭಿಸಿತು. ಕಿಂಗ್‌ಸಿಂಗ ಟನ್ ಅರಮನೆಯಿಂದ ವರನ ಹೊರಟನು. ವಧೂವರರು ಅನಂತರ ವೆಸ್ಟ್‌ಮಿನಿಸ್ಟರ್ ಚರ್ಚಿನಲ್ಲಿ ಸೇರಿದರು. ನವಂಬರ ೨೦ ರ ಬೆಳಗಿನ ೧೧—೩೦ ಗಂಟೆಗೆ ಸರಿಯಾಗಿ ಚರ್ಚಿನ ಪಾದ್ರಿಗಳು ಅವರಿಬ್ಬರೂ ಗಂಡಹೆಂಡರಾದರೆಂದು ಘೋಷಿಸಿದರು.

ಎಲ್ಲೆಲ್ಲಿ ನೋಡಿದರೂ ಜನಸಂದಣಿ! ಜಗತ್ತಿನ ನಾನಾ ರಾಷ್ಟ್ರಗಳಿಂದ ಅಧಿಕಾರಿಗಳು, ಅಧಿಕಾರೀತರರು, ಸಂದರ್ಶಕರು ನೆರೆದಿದ್ದರು. ಅವರ ಸಂಖ್ಯೆ ೩೦ ಲಕ್ಷಕ್ಕೆ ಮೀರಿತ್ತೆಂದು ಅಂದಾಜು ಮಾಡಲಾಗಿದೆ. ಮದುಮಗಳು ಮುಸುಕನ್ನು ತೆರೆದೊಡನೆ ಲಕ್ಷಗಟ್ಟಲೆ ಹೆಂಗಸರು ಅವಳಿಗೆ ಶುಭವಾಗಲೆಂದು ಹಾಡಿ ಗಗನಾಂಗಣದಲ್ಲಿ ಸಂತೋಷ ನಾದವನ್ನು ತುಂಬಿದರು.

ನಾನಾ ದೇಶದಿಂದ ಉಡುಗರೆಗಳು ಬಂದಿದ್ದವು. ಭಾರತ ಪಾಕಿಸ್ತಾನಗಳು ಕಾಶಿಯಲ್ಲಿ ತಯಾರಾದ ಪಾಟು ಸೀರೆಗಳನ್ನು ಕಳುಹಿದ್ದವು. ಉಳಿದ ರಾಷ್ಟ್ರಗಳೂ ಅನೇಕ ಬೆಲೆ ಬಾಳುವ ಒಡವೆ, ವಸ್ತು, ವಸ್ತ್ರ, ಬಟ್ಟೆಗಳನ್ನು ಒಪ್ಪಿಸಿದ್ದವು. ಆದರೆ ಅವೆಲ್ಲವುಗಳಲ್ಲಿ ಮಹತ್ವದ್ದೆನಿಸಿ ಎಲ್ಲರ ಕಣ್ಣನ್ನು ಸೆಳೆದದ್ದೆಂದರೆ ಮಹಾತ್ಮಾ ಗಾಂಧಿಯವರು ಕಳುಹಿದ ೨೨ ತೊಲೆ ತೂಕದ ಶುಭ್ರವಾದ ಕೈನೂಲಿನ ವಸ್ತ್ರ. ಅದನ್ನು ಅವರೇ ನೂತು ನೆಯ್ದಿದ್ದರು. ಅದರ ಬೆಲೆ ಕೇವಲ ೧೯ ರೂ.ಗಳು! ಹಿಂದುಸ್ತಾನದ ಹೃದಯ ಪೀಠದಲ್ಲಿ ಆರಾಧ್ಯದೇವತೆಯಾಗಿ ನಿಂತ ಮಹಾತ್ಮರ ಮನೋನೈರ್ಮಲ್ಯವನ್ನು ಕಂಡು ಅನೇಕರು ತಲೆ ದೂಗಿದರು!

ಶುಭಸಂದೇಶಗಳಿಗಂತೂ ಲೆಕ್ಕ ಸಂಖ್ಯೆಯಿಲ್ಲ. ಪಂಡಿತನೆಹರೂರವರೂ ಮಹಾತ್ಮಾ ಗಾಂಧಿಯವರೂ ಇನ್ನಿತರರೂ ಭಾರತದ ಪರವಾಗಿ ಶುಭ ಸಂದೇಶಗಳನ್ನು ಕಳುಹಿದ್ದರು. ಒಟ್ಟಿನಲ್ಲಿ ಈ ವಿವಾಹ ಸಮಾರಂಭವು ಇಡೀ ಜಗತ್ತನ್ನೇ ಆನಂದಸಾಗರದಲ್ಲಿ ತೇಲಿಸಿತೆಂದರೆ ಅತಿಶಯೋಕ್ತಿಯಾಗಲಾರದು.

x x x

ನವೆಂಬರ ೧೪ ರಿಂದ ಸಾಗರೋತ್ತರ ರೇಡಿಯೊ ಟೆಲಿಫೋನ್ ಸಂಬಂಧವನ್ನು ಕೆನಡಕ್ಕೆ ಹಚ್ಚಲಾಗುತ್ತದೆ. ಪ್ರತಿದಿನ ೧-೩೦ ರಿಂದ ೧೦-೧೫ ಗಂಟೆಗಳ ವರೆಗೆ ತೆರೆದಿರುತ್ತದೆ. ಮೊದಲ ೩ ನಿಮಿಷಗಳಿಗೆ ೫೦ ರೂಪಾಯಿ. ಅನಂತರ ಪ್ರತಿಯೊಂದು ನಿಮಿಷಕ್ಕೂ ೧೬-೧೧ ಆಣೆಗಳನ್ನು ತುಂಬಬೇಕಾಗುತ್ತದೆ. ರಿಪೋರ್ಟಗಾಗಿ ೩ ರೂ. ೧೧ ಆಣೆಗಳನ್ನು ಸಲ್ಲಿಸಬೇಕು.

x x x

ಲಂಡನ್ನಿನಲ್ಲಿ ಹೊಸದೊಂದು ಕಾಲೇಜನ್ನು ಸ್ಥಾಪಿಸಲಾಗುವುದು. ಅದಕ್ಕೆ ೩೦ ಲಕ್ಷ ಪೌಂಡುಗಳು ಖರ್ಚಿದೆ. ಈಗಲೇ ಅದರ ನಕ್ಷೆ ತಯಾರಾಗಿದೆ. ಅದರ ಅಂಗಳದೊಳಗೆ ಪ್ರದರ್ಶನಾಲಯಗಳು, ಪುಸ್ತಕ ಭಾಂಡಾರಗಳು ಮುಂತಾದವುಗಳಿಗೆ ಅವಕಾಶ ಕಲ್ಪಿಸಿ ಕೊಡಲಾಗುವದು. ೭ ವರ್ಷಗಳಿಂದ ಇದರ ನಕ್ಷೆಯನ್ನು ತಯಾರಿಸಲು ಶಿಲ್ಪಶಾಸ್ತ್ರದ ಪ್ರಾಧ್ಯಾಪಕರಾದ ಎ. ಈ. ರಿಚರ್ಡಸನ್ನರು ಪ್ರಯತ್ನಿಸುತ್ತಿದ್ದಾರೆ.



ಅಂತರ್ರಾಷ್ಟ್ರೀಯ ಶ್ರಮಸಂಘದ ಪ್ರತಿನಿಧಿಗಳನ್ನು ಬ್ರಿಟನ್ನಿನ ಹೈಕಮಿಶನ್ನರು ಸ್ವಾಗತಿಸುತ್ತಿರುವುದು—
ಸರ್ ಜಿ. ಎಂ. ಇವ್ಯಾನ್ಸ್ (ನಡುವೆ) ಅಂ. ರಾ. ಶ್ರ. ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರು, ಭಾರತದಲ್ಲಿ ಬ್ರಿಟನ್ನಿನ ಹೈಕಮಿಶನರ ದಂಪತಿಗಳಾಗಿರುವ ಸರ್ ಮತ್ತು ಶ್ರೀಮತಿ ಟೆರೆನ್ಸ್ ಶಾನರವರೊಡನೆ. ಸಂಘದ ಏಶಿಯಾ ಪ್ರಾದೇಶಿಕ ಪರಿಷತ್ತಿನಲ್ಲಿ.

ಮಕ್ಕಳ ಓದು

ಲೇ:— ಭಗವಂತ

ಘುಟಿಕೆ ೪

ಅಸಂತುಷ್ಟರಾದ ಶಿಕ್ಷಕರು ರಾಷ್ಟ್ರಕ್ಕೆ ದೊಡ್ಡ ಗಂಡಾಂತರಪ್ರಾಯರೆಂದು ಹೇಳಲಾಯುಂಟು. ಇದು ಅಕ್ಷರಶಃ ನಿಜ. ಆದರೂ ಸಮಾಜವಾಗಲಿ, ಸರಕಾರವಾಗಲಿ ಶಿಕ್ಷಕರನ್ನು ಸಂತುಷ್ಟರನ್ನಾಗಿ ಡಲು ಪ್ರಯತ್ನ ಮಾಡದೇ ಇರುವದು ದೇಶದ ದೌರ್ಭಾಗ್ಯ. ಪ್ರಯತ್ನದ ಮಾತಂತೂ ಇರಲಿ; ಜನರು ಉದಾಸೀನವೃತ್ತಿಯುಳ್ಳವರಾಗಿರುವರು. ಕೆಲವರಂತೂ "ಮಾಸ್ತರರಿಗೇಕೆ ಹೆಚ್ಚು ಸಂಬಳ" ಎನ್ನುವ ವರೆಗೂ ಮುಂದೆ ಹೋಗಿರುವರು. ಇವರ ಕಾರಣವಿಷ್ಟೇ: ಮಾಸ್ತರಜನರ ಗಂಡಾಂತರವು ಒಮ್ಮೆಲೆ ಒಡೆದು ಕಾಣುವಂತಹದಲ್ಲ. ಜಾತೀಯ ಗಲಭೆ, ಯುದ್ಧಗಳಂತೆ ಸದ್ಯಃಕಾಲಕ್ಕೆ ಗಾಬರಿಗೊಳಿಸುವದಿಲ್ಲ. ಆದರೆ ಪರಿಣಾಮದಲ್ಲಿ ವಿತುಷ್ಟರಾದ ಶಿಕ್ಷಕರು ಎಲ್ಲ ಸಿಡುಗುಗಳಿಗಿಂತ ಮಿಗಿಲಾದ ಸಿಡುಗಾಗಿ ಪರಿಣಮಿಸುವರು.

"ಗಂಡಹೆಂಡಿರ ಕಾದಾಟದಲ್ಲಿ ಕೂಸು ಸಣ್ಣಾಯ್ತು" ಎಂಬ ಗಾದೆಯಂತೆ "ಮಕ್ಕಳ ಓದಿನ" ಪಾಡಾಗಿದೆ. ಸರ್ಕಾರ, ಶಾಲೆಗಳ ಸಂಚಾಲಕರು ಒಂದು ಕಡೆ, ಶಿಕ್ಷಕರು ಮತ್ತೊಂದು ಕಡೆ. ಉಭಯತರಲ್ಲಿ ತಿಕ್ಕಾಟ ನಡೆದಿದೆ. ಶಿಕ್ಷಕರು ಸಂಘಟಿತರಾಗಿ ಹೆಚ್ಚಿನ ಸಂಬಳ ಕೇಳಹತ್ತಿದ್ದಾರೆ ಸಂಪು ಹೂಡುವ ವರೆಗೂ ಸರತಿಯು ಬಂತು. ಮಾಸ್ತರರಿಗೆ ಕೊಡುವ ಸಂಬಳ ಕಡಿಮೆಯೆಂಬುದು ಎಲ್ಲರಿಗೂ ಗೊತ್ತು. ಇಂಥ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಅವರು ಸೈರಣೆಯಿಂದ ದುಡಿಯುತ್ತಿರುವರು. ಆದರೆ ಹೆಚ್ಚಿನ ಸಂಬಳ ಕೊಡಲು ಸರ್ಕಾರಕ್ಕೆ ಮನಸ್ಸಿಲ್ಲ. ಸಂಚಾಲಕರಿಗೂ ಆ ದಿಸೆಯಲ್ಲಿ ಪ್ರಯತ್ನ ಮಾಡಲು ಇಷ್ಟವಿಲ್ಲ. ಸರ್ಕಾರವು. ದುಡ್ಡಿಲ್ಲವೆಂಬ ನೆವವನ್ನು ಮುಂದೆ ಮಾಡುವದು. ದುಡ್ಡಿಲ್ಲವೆಂದು ಆಡಳಿತದ ಯಾವ ಅಂಗಕ್ಕೆ ಕೊರತೆಯಾಗಿದೆ? ಎಲ್ಲ ಅಡಚಣೆಗಳೂ ಶಿಕ್ಷಕರ ಸಲುವಾಗಿ ಮಾತ್ರ ಕಾದುಕೊಂಡು ಕುಳಿತಿರುತ್ತವೆ. ಹೆಚ್ಚು ಒತ್ತಡವಾದರೆ "ಶಿಕ್ಷಕರು ವ್ಯಾಪಾರಿ ಸಂಘಗಳಂತೆ ವರ್ತಿಸಬಾರದು ಅದು ಅವರ ಉದಾತ್ತ ಉದ್ಯೋಗಕ್ಕೆ ಒಪ್ಪದು" ಎಂದು ಪರೋಪದೇಶಪಾಂಡಿತ್ಯ ಸುರುವು. ತಾವು ಮಾತ್ರ ಭಂಡವಲಶಾಹಿ ಕಾರಖಾನೆ ಒಡೆಯರಂತೆ ಶಿಕ್ಷಕರ ವಿಷಯವಾಗಿ ವರ್ತಿಸಬಾರದೆಂಬ ಮಾತು ಅವರಿಗೆ ಎಳ್ಳಷ್ಟೂ ಹೊಳೆಯದು. ಶಿಕ್ಷಕರು ಸೈರಣೆಯ ಮೂರ್ತಿಗಳು. ಇಂಥವರ ಸೈರಣೆ ಸಹ ಕುಸಿದು ಬೀಳಬೇಕಾದರೆ ಸರಕಾರ ಸಮಾಜಗಳ ಉದಾಸೀನತೆಯು ಯಾವ ಮಟ್ಟಕ್ಕೆ ಹೋಗಿದೆಯೆಂಬುದನ್ನು ಊಹಿಸಿಯೇ ತಿಳಿಯಬೇಕಲ್ಲದೆ ವರ್ಣಿಸಲು ಬಾರದು, ಇನ್ನು ಶಾಲೆಗಳ ಸಂಚಾಲಕರ ವಿಷಯವಾಗಿ ಹೇಳುವದೆಂದರೆ— ಅವರು ಶಾಲೆಗಳನ್ನು ಶಿಕ್ಷಕರ ಉಪಕಾರಕ್ಕಾಗಿ ನಡೆಸುತ್ತಿರುವರೆಂಬ ಭಾವನೆಯುಳ್ಳವರಾಗಿದ್ದಾರೆ. ಬೇಕಾದರೆ ಶಿಕ್ಷಕರೇ ಪ್ರಯತ್ನ ಮಾಡಿ ತಮಗೆ ಹೆಚ್ಚು ಸಂಬಳ ದೊರಕುವಂತೆ ಸರಕಾರಕ್ಕೆ ಒತ್ತಾಯಪಡಿಸಿ ಸಂಸ್ಥೆಗಳಿಗೆ ಗ್ರ್ಯಾಂಟು ಕೊಡಿಸಬೇಕು. ಆ ಹಣವನ್ನು ಶಿಕ್ಷಕರಿಗೆ ಹಂಚಿಕೊಡುವ ದೊಡ್ಡಸ್ತನದ ಕೆಲಸವನ್ನು ಮಾತ್ರ ಅವರು ಮಾಡುವರು! ಇದೂ ಒಂದು ಉಪಕಾರವೆಂದೇ ಭಾವಿಸಬೇಕು. ಯಾಕಂದರೆ ನರಿ-ಕೊಕ್ಕರೆಯ ಕಥೆಯಂತೆ ಗ್ರ್ಯಾಂಟು ಬಂದ ಮೇಲೂ ಕೊಡುವಷ್ಟು ಕೊಡದಿದ್ದರೆ ಶಿಕ್ಷಕರೇನು ಮಾಡುವರು?

ಇದೀಗಿನ ಶಿಕ್ಷಕರ ಬಾಳು: ಅವರು ಅಧ್ಯಯನ, ಅಧ್ಯಾಪನ, ಯಿಯಾಚನ, ಗ್ರಹ, ನಿಗ್ರಹ, ಸಮರ, ಸಂಧಾನ ಎಲ್ಲವನ್ನೂ ಮಾಡಬೇಕು. ಹೊಟ್ಟೆ ಹೊರಕೊಳ್ಳಬೇಕು. ಇಂಥ ಶಿಕ್ಷಕರು ಕಲಿಸುವದೇನು? ಮಕ್ಕಳು ಕಲಿಯುವದೇನು? ರಾಷ್ಟ್ರವು ಮುಂದೆ ಬರುವದೇನು? ಮುಂದಾಳುಗಳಾದವರು ಮೇಜು ಮುರಿಯುವಂತೆ ಗುದ್ದಿ ಮಾತಾಡುವದನ್ನು ಬಿಟ್ಟು ಶಿಕ್ಷಕಕುಲವು ಅಸಂತುಷ್ಟವಾಗದಂತೆ, ವಿತುಷ್ಟರಾಗದಂತೆ ಎಷ್ಟು ತಡಮಾಡದೆ ಈ ಸಮಸ್ಯೆಯನ್ನು ಬಿಡಿಸಬೇಕು.

ಎರಡು ಕಾಲಿನ ಹೆಗ್ಗಣಗಳು!

ಲೇ:— ಶ್ರೀ. ಬಿ. ಎಚ್. ಶ್ರೀಧರ, ಎಂ. ಎ.

ಕಂಟ್ರೋಲನ್ನು ತೆಗೆಯಬೇಕು ಅನ್ನುವವರದೊಂದು ಬಣ; ಅದರ ವಿರುದ್ಧವಾಗಿ, ತೆಗೆದರೆ ಭಯಂಕರ ಕಳ್ಳಪೇಟೆ ಉದಯಿಸಿ ಲಕ್ಷಾಂತರ ಜನರು ಉಪವಾಸ ಬೀಳಬೇಕಾದೀತೆಂಬವರ ದಿನ್ನೊಂದು ಬಣ. ಆದರೆ ಒಂದು ಮಾತ್ರ ನಿಶ್ಚಿತ: ಇಬ್ಬಣದವರೂ ಇಂದಿನ ನಿಯಂತ್ರಣ ಪದ್ಧತಿ ನೆಟ್ಟಗಿಲ್ಲವೆಂಬುದನ್ನು ಒಪ್ಪುತ್ತಾರೆ.

ನಮ್ಮ ಅಧಿಕಾರಿಗಳೆಂದು ನಿಯಂತ್ರಣ ರಹಸ್ಯವೆಂಬ ಶಾಸ್ತ್ರವನ್ನು ಕರತಲಾಮಲಕ ಮಾಡಿಕೊಂಡಿದ್ದಾರೆ. ನೀರಿನಲ್ಲಿ ಮೊಸಳೆಯ ದರ್ಬಾರು ನಡೆದಂತೆ ಅವರ ರಾಜ್ಯಭಾರವಿಂದು ನಿಯಂತ್ರಣ ರಾಜ್ಯದಲ್ಲಿ ನಿರ್ವಿಘ್ನವಾಗಿ ನಡೆದಿದೆ ಅಥವಾ ಹಳೆಯ ನೆಲಗಟ್ಟಿನಲ್ಲಿ ಗುಹಾರಾಜ್ಯ ಸ್ಥಾಪಿಸುವ ಹೆಗ್ಗಣಗಳೆನಿಸಿ ಅವರಿಂದು ಸರಕಾರದ ಯಾವ ಬೋನುಗಾರನಿಗೂ ಅಂಜದೆ ತಮ್ಮ ಆಡಳಿತವನ್ನು ಸಾಗಿಸಿದ್ದಾರೆಂದರೂ ಸರಿಯೆ! ಹೆಗ್ಗಣಗಳ 'ಫಲಾಹಾರ ವಿಜ್ಞಾನ'ದ ಪ್ರಕಾರ 'ಸಮಾಜಕ್ಕೆ ನಷ್ಟ, ವ್ಯಕ್ತಿಗೆ ಲಾಭ' ಎಂಬ ಒಂದು ಸೂತ್ರವಿದೆ. ಆ ಸೂತ್ರಾನುಸಾರವಾಗಿ ನ್ಯಾಯದೃಷ್ಟಿಗೆ ಬಣ್ಣ ಬಳಿಯಲು ಕೆಲವು ಅಪದ್ಧವರ್ಗ ಭಾಷ್ಯಗಳಿವೆ. ಅವೆಂದರೆ, Measurement losses— ಅಳತೆಯಲ್ಲಿ ಉಂಟಾಗುವ ನಷ್ಟ, Transit losses-ಸಾರಿಗೆಯಲ್ಲಿ ಸಂಭವಿಸುವ ನಷ್ಟ, Dryage and Sinkages— ಒಣಗಿಸುವುದರಿಂದ ಮತ್ತು ಒದ್ದೆಯಾಗುವುದರಿಂದ ಕಡಿಮೆ ಬರುವ ಅಂಶ; ಇದಲ್ಲದೆ Other umforeseen damages- ಇತರ ಅದೃಷ್ಟ ನಷ್ಟಗಳು. ಇವುಗಳಲ್ಲಿ ಕ್ರಮವಾಗಿ ನೂರಕ್ಕೆ ೨-೩ ಅಂಶ, ೨—೫ ಅಂಶ, ೨—೩ ಅಂಶ ಮತ್ತು ಎಷ್ಟಾಗುವುದೋ ಅಷ್ಟು ಅಂಶ ನಷ್ಟವನ್ನು 'ಪ್ರಧ್ವಂಸಾಭಾವ'ವೆಂದು ತರ್ಕಶುದ್ಧವಾಗಿ ಬರೆದಿಡಲಾಗುತ್ತದೆ. ಮಾನವನಿಗೆ ಮೀರಿದ ಕಾರಣಗಳಿಂದ ಹೀಗೆ ಪ್ರಧ್ವಂಸ ಸಂಭವಿಸುವುದೆಂದು ಹೇಳಲಾಗುತ್ತದೆ.

ಮೇಲಿನ ಲಯಃಲೀಲೆ ಪ್ರಾರಂಭಿಸುವ ಬಗೆ ಹೀಗೆ: ಸಾಂದರ್ಭಿಕ ಅವಶ್ಯಕತೆಯ ವಾದದ ಆಧಾರದ ಮೇಲೆ ನಿಯಂತ್ರಣಾಧಿಕಾರಿಗಳು ಒಂದು ಬಗೆಯ ಧಾನ್ಯವನ್ನು ಪದೇಪದೇ ಸ್ಥಳಾಂತರಿಸತೊಡಗುತ್ತಾರೆ. ಧಾರವಾಡದ ಗೋದಿಯನ್ನು ಪೂನಾ ಪಟ್ಟಣಕ್ಕೆ ಕಳುಹಿ ಅಲ್ಲಿಗೆ ಅಗತ್ಯವಾದ ಆ ಧಾನ್ಯಾಂಶವನ್ನು ಅಹಮದಾಬಾದಿನಿಂದ ತರಿಸುವುದು. ಕೇಳಿದರೆ, ಆಯಾ ಸ್ಥಳಗಳಲ್ಲಿ ಆಯಾ ಕಾಲಗಳಲ್ಲಿ ಆಯಾ ಪ್ರಮಾಣದ ಧಾನ್ಯ ಆವಶ್ಯವಿತ್ತೆಂದು ಸಮರ್ಥಿಸಿ ಖಾಸಗಿ ಕಂತ್ರಾಟುದಾರರ ಮೂಲಕ ದವಸವನ್ನು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಕೆಲವೊಮ್ಮೆ ನಿಜವಾಗಿಯೂ ಮತ್ತೆ ಕೆಲವೊಮ್ಮೆ ಕೇವಲ ಕಾಗದಪತ್ರಗಳ ಮೇಲೆಯೂ ಓಡಾಡಿಸಲಾಗುತ್ತದೆ. ಈ ಓಡಾಟದ ದೆಸೆಯಿಂದ ನಷ್ಟವುಂಟಾಗುತ್ತದೆ, ಅಲ್ಲಿಂದಿಲ್ಲಿಗೊಯ್ಯುವಾಗ ಪುನಃ ಪುನಃ ಅಳೆಯುವುದರಿಂದ ನಷ್ಟಬರುತ್ತದೆ, ರಕ್ಷಣೆಯ ಅಸಂಪೂರ್ಣತೆಯಿಂದ ನಷ್ಟಬರುತ್ತದೆ, ಕಾಲವಿಲಂಬದಿಂದ ಕೆಟ್ಟು ನಷ್ಟಉಂಟಾಗುತ್ತದೆ- ಹೀಗೆ ನಿಜವಾಗಿ ಐಂ ರಷ್ಟು ತರ್ಕದಲ್ಲಿ ಐಂರಷ್ಟು ಕಾರ್ಯದಲ್ಲಿಹೀಗೆ ವಿವಿಧವಾದ ವಿಶ್ವರೂಪದ ನಷ್ಟಗಳು ಸಂಭವಿಸುವುದರಿಂದ ಕಣಜ ಬರಿದಾಗಿ ಕಂತ್ರಾಟುದಾರರ ಜೇಬು ತುಂಬಿ, ತನ್ಮೂಲಕ ಅಧಿಕಾರಿಗಳಲ್ಲಿ ಕೆಲವು ಹೆಗ್ಗಣಗಳ ಕೈ ಬಿಸಿಯಾಗಿ, ಕಳ್ಳಪೇಟೆಯಲ್ಲಿ ಆ ನಷ್ಟವೆಂದು ಹೇಳಲಾದ ಪರಿಮಾಣದ ದವಸಗಳು ಅವತರಿಸಿ, ವ್ಯಾಪಾರಿಗಳನ್ನು ಕೊಬ್ಬಿಸಿ, ಗಿರಾಕಿಗಳನ್ನು ಕುಗ್ಗಿಸಿ ದೇಶದ ಎಲ್ಲೆಡೆಯಲ್ಲೂ ಬೆಳೆಯಿದ್ದೂ ಊಟಕ್ಕಿಲ್ಲದಂತಾಗುವ ಕೃತಕಕ್ಷಾಮಗಳು ತಲೆದೋರುತ್ತವೆ. ದೇವರು ಕೊಟ್ಟರೂ ಪೂಜಾರಿ ಬಿಡನೆಂಬ ಗಾದೆಯಂತೆ ಭೂಮಿತಾಯಿ ಕೊಟ್ಟರೂ ಅಧಿಕಾರಿ ತಂದೆಗಳು ಕೊಡದಾಗಿದ್ದಾರೆ. ಇಲ್ಲಿಯ ವರೆಗೆ ಸಪ್ತನರಕ ಅಥವಾ ಸಪ್ತ ಪಾತಾಳಗಳು ಮಾತ್ರವಿದ್ದರೆ ಇಂದು ಈ ಎರಡು ಕಾಲಿನ ಹೆಗ್ಗಣಗಳು ಅಷ್ಟಮ ನರಕವಾದ 'ಲಂಚ ಪ್ರಪಂಚ' ಅಥವಾ ಅಷ್ಟಮ ಅಧೋಲೋಕವಾದ 'ಲಂಚಾತಲ'ವೊಂದನ್ನು ನಿರ್ಮಿಸಿಬಿಟ್ಟಿದ್ದಾರೆ. National Character ರಾಷ್ಟ್ರಗುಣವೊಂದು ಒಂದು ರಾಷ್ಟ್ರಕ್ಕಿರುವಂತೆ ಈ ಲಂಚದ ಹಸಿವಿಂದು ನಿಯಂತ್ರಣಾಧಿಕಾರಿಗಳ ಕುಲಗುಣವೆನಿಸಿಬಿಟ್ಟಿದೆ. ಅದೊಂದು ಸ್ವತಃಸಿದ್ಧ, ಪರಂಪರಾಗತ, ಜ್ಞಾತವಾದರೂ ಅನಭಿಜ್ಞಾತವಾದ, ಧರ್ಮಾಚರಣೆಯಾಗಿಬಿಟ್ಟಿದೆ. Test cases- ಪ್ರಾಯೋಗಿಕ ಸಂದರ್ಭಗಳು, Departmental Enquires— ಸರಕಾರೀ ತನಿಖೆಗಳು ಮತ್ತು ತತ್ಪರಿಣಾಮವಾದ ಅಪರಾಧಿ ಅಧಿಕಾರಿಗಳ ವರ್ಗೀಕರಣ— ಇವು ಕೇವಲ ಜನವಂಚನೆಯ ನಾಟಕಗಳಾಗಿ ಪರಿಣಮಿಸಿರುವ ಸಂದರ್ಭಗಳೇ ಬಹಳ ಹೆಚ್ಚು. ಇದನ್ನು ನೋಡಿ ನೋಡಿ ಜನತೆಗೆ ತಲೆಬೇಸರ ಉಂಟಾಗಿದೆ.

ಬಾಜರಿಯನ್ನು ರತ್ನಾಗಿರಿಯ ನಾಗರಿಕರು ತಿನ್ನಲಾರರೆಂಬುದನ್ನು ಅರಿಯದೆ ಅಥವಾ ಅರಿತೂ ಮರೆತು, ೧೯೪೩ ರಲ್ಲಿ ಸುಮಾರು ೧ ಲಕ್ಷ ಚೀಲ ಬಾಜರಿಯನ್ನು ಅಲ್ಲಿಗೆ ಕಳುಹಿ ೩೦—೪೦ ಚೀಲಗಳಷ್ಟನ್ನು ಒತ್ತಾಯದಿಂದ ಹಂಚಿ, ಉಳಿದ ಚೀಲಗಳನ್ನು ಆಕಾಶದ ಮರೆಯಲ್ಲಿ ಸುರಕ್ಷಿತವಾಗಿಟ್ಟು, ಕೊನೆಯಲ್ಲಿ ಅಪ್ರಯೋಜಕವೆಂದು ತಿಳಿದೂ ಸುಮಾರು ೬೦ ಸಾವಿರ ಚೀಲಗಳನ್ನು ಕ್ಷಾಮಕ್ಕೆ ತುತ್ತಾದ ಬಿಜಾಪುರ ಜಿಲ್ಹೆಗೆ ಕಳುಹಿ, ಅಲ್ಲಿ ಅದು ಅಗ್ರಾಹ್ಯವೆಂದು ಸಿದ್ಧವಾಗಿ ಪೂನಾ ನಗರದ ಕೋಳಿ ಸಾಕುವ ಕ್ಷೇತ್ರಕ್ಕೆ ಒಯ್ಯಲಾಯಿತು. ಒಣಗಿಸಲು ಜಾಗ ಸಾಲದೆಂಬ ನೆವದಿಂದ ಒಮ್ಮೆ ಚಿಕ್ಕೋಡಿಯಿಂದ ನಿಪ್ಪಾಣಿಗೆ ಅತ್ತಿಂದಿತ್ತ ಹಪ್ತೇ ದಿನಗಳಲ್ಲಿ ೨೫ ಚೀಲಗಳಷ್ಟು ದವಸವನ್ನು ಓಡಾಡಿಸಿ ಅಧಿಕಾರಿ ಕಂತ್ರಾಟುದಾರರ ಒಳಒಪ್ಪಂದದ ಪ್ರಕಾರ ನಷ್ಟದ ಪಟ್ಟಿಯಲ್ಲಿ ಬಹಳ ಅಂಶವನ್ನು ದಾಖಲೆ ಮಾಡಿದ್ದಾಯಿತು. ಬೆಳಗಾವಿ ಜಿಲ್ಹೆಯ ಚಂದಗೋಡ ಮಹಾಲಿನಲ್ಲಿ ೧೯೪೫ ರಲ್ಲಿ ಐದು ಸಾವಿರ ಚೀಲ ಗೋದಿಯು ಗೆದ್ದಲಿನಿಂದ, ಗೋಡೆ ಬಿದ್ದುದರಿಂದ ಮತ್ತು ಇತರ ಕಾರಣಗಳಿಂದ ಹಾಳಾಯಿತೆಂದು ರಿಕಾರ್ಡು ಮಾಡಲಾಯಿತು. ೧೯೪೩-೪೪ ರಲ್ಲಿ ಲೆಕ್ಕಪತ್ರವಿಲ್ಲದೆ ಬೆಳಗಾವಿಯ ರೈತರಿಂದ ದವಸ ಕೊಳ್ಳಲು ಮುಂಗಡ ಹಣ ಕೊಡಲಾಯಿತು. ಈ ಎಲ್ಲ ಸುದ್ದಿಗಳಿಂದ ತಿಳಿದುಬರುವ ಅಂಶ ಸ್ಪಷ್ಟವಿದೆ.

ಅಧಿಕಾರಿಗಳು ತಮ್ಮ ತಮ್ಮ ಕೆಲಸಕ್ಕೆ ಅನಧಿಕಾರಿಗಳೆನಿಸಿರುವುದೇ ಮೇಲೆ ಹೇಳಿದ ಅನಾಯಕತ್ವ ಅರಾಜಕತೆಗಳಿಗೆ ಕಾರಣ. 'ಹುಟ್ಟಿದಾದಿನದಿಂದ ಕುದುರೆಯ ಹತ್ತಿ ಓಡಿಸಿ ಸೆಟ್ಟಿ ಕಾಣಸು' ಎಂಬಂತಿರುವ ತಮ್ಮ ಪೂರ್ವಾಶ್ರಮದಲ್ಲಿ ಸ್ಕೂಲ್ ಮಾಸ್ತರರೂ, ವಕೀಲರೂ, ಕಾರಕೂನರೂ ಆಗಿದ್ದ ಇಂದಿನ ನಿಯಂತ್ರಣಾಧಿಕಾರಿಗಳಿಗೆ ದವಸ ಧಾನ್ಯಗಳ ಉತ್ಪಾದನ, ಸಂಗ್ರಹಣ, ರಕ್ಷಣ, ವಿತರಣ ಮುಂತಾದವುಗಳ ಜ್ಞಾನ ಒಮ್ಮೆಲೇ ಬರುವುದೆಂತು? ಒಂದು ವೇಳೆ ಜ್ಞಾನವಿದ್ದವರಿದ್ದರೂ ಹೊಣೆಯರಿತು ಪ್ರಾಮಾಣಿಕತೆಯಿಂದ ನಡೆದುಕೊಳ್ಳಬೇಕೆಂಬ ಬಗ್ಗೆ ಅವರ ಮೇಲೆಲ್ಲಿಯ ನಿಯಂತ್ರಣವಿದೆ? ಅವರೇ ಅಡಳಿತಗಾರರು. 'ಬೇಲಿ ಹೊಲನೆಲ್ಲಂಮೇದೊಡಂ' ಎಂಬಂತೆ ಅವರೇ ಮಾಡುವವರು ಮತ್ತು ಮಾಡಿದ್ದರ ನ್ಯಾಯ ನಿರ್ಣಯ ಮಾಡುವವರಾದುದರಿಂದ ತಮ್ಮ ಕಳ್ಳತನವನ್ನು ಮುಚ್ಚಿಕೊಂಡು ಜನರೆದುರೂ ತಮ್ಮ ಮೇಲಧಿಕಾರಿಗಳೆದುರೂ ಕಾಗದಪತ್ರದ ಮೇಲೆ ನ್ಯಾಯ ನಾಟಕವಾಡುವರು. ಹೀಗೆ ಅಧಿಕಾರಿಗಳ 'ಮರ್ಜಿ'ಯಂತೆ ನಡೆಯುತ್ತಿರುವ ಈ ನಿಯಂತ್ರಣ ನಿಂತರೆ ಒಂದೆರಡು ತಿಂಗಳು ಬಹಳ ತೊಂದರೆಯೆನಿಸಿದರೂ ಅನಂತರವಾದರೂ ಸ್ವಲ್ಪ ಉತ್ತಮ ಪರಿಸ್ಥಿತಿಯುಂಟಾಗಬಹುದೆಂಬುದೇ ಹಲವರ ಆಸೆ. ಈ ಎರಡು ಕಾಲಿನ ಹೆಗ್ಗಣಗಳ ರಾಜ್ಯವೆಂದು ಮುಗಿಯುವುದೋ ಅಂದು ನಮ್ಮ ಸರಕಾರ ಅಕಲಂಕ ಚಂದ್ರ ನೆನಿಸೀತು.

ಸಾದರ ಸ್ವೀಕಾರ

೧ ಯೋಧನ ಪುನರಾಗಮನ

ಲೇಖಕ. ಎ. ಎನ್. ಮೂರ್ತಿರಾವ ಪ್ರಕಾಶಕರು—ವಿಶ್ವಸಾಹಿತ್ಯ ಮೈಸೂರು.

ಪುಟಗಳು ೧೦೦ ಬೆಲೆ ೦—೧೨—೦

೨ ಮುಂಬಯಿ ಸರ್ಕಾರದ ಒಕ್ಕಲಿಗರ ಸಾಲ ಪರಿಹಾರ ಕಾಯದೆ

ಬರೆದವರು-ಶ್ರೀ ಗುಡ್ಡಪ್ಪ ಮೈಲಾರ ಪ್ರಕಾಶಕರು—ಮಹಾದೇವ ಮೈಲಾರ ಗ್ರಾಮಸೇವಾ ಸಂಘ ಮೋಟೆಬಿನ್ನೂರು.

ಪುಟ ೮ ಬೆಲೆ ೧—೧—೦

ಈ ಚಿಕ್ಕ ಹೊತ್ತಿಗೆಯು ಕಾಯದೆಯ ತಿಳುವಳಿಕೆಯನ್ನು ಚೆನ್ನಾಗಿ ಮಾಡಿಕೊಡುತ್ತದೆ. ಪ್ರತಿಯೊಬ್ಬ ಒಕ್ಕಲಿಗನೂ ಅರಿಯಲವಶ್ಯ ಅಲ್ಲದೆ ಕಿಮ್ಮತ್ತು ಭಾರವಾಗಿಲ್ಲ.

೩. ಕ್ರಾಂತಿ ಪಥದಲ್ಲಿ

ಲೇಖಕರು— ಜಯಪ್ರಕಾಶನಾರಾಯಣ ಪ್ರಕಾಶಕರು—ಸಾಹಿತ್ಯ ಭಾಂಡಾರ ಹುಬ್ಬಳ್ಳಿ.

ಪುಟಗಳು ೨೪೦ ಬೆಲೆ ೩—೦—೦

೪. ಸಾವಿತ್ರಿ

ಲೇಖಕರು—ಶ್ರೀ ಬಿ. ಶಂಕರಭಟ್ಟ ಮತ್ತು ಬಿ. ಎಂ. ಶರ್ಮಾ. ಪ್ರಕಾಶಕರು—ರಾಷ್ಟ್ರಬಂಧು ಪ್ರೆಸ್ ಮಂಗಳೂರು.

ಪುಟಗಳು ೩೬ ಬೆಲೆ ೦—೬—೦

The Depressed classes.

By Mohinder Singh
Pnb. By. Hind Kitabs.
Pages 280. Price 7-8-0.

ಕರ್ಮವೀರ ಹರಿಜನ ಪುರವಣಿ

ಭಾಷಾನ್ವಯ ಪುನರ್ಘಟನೆ

(ಮೋ. ಕ. ಗಾಂಧಿ)

ಪ್ರಿನ್ಸಿಪಾಲ ಆಚಾರ್ಯ ಶ್ರೀಮನ್ನಾರಾಯಣ ಅಗ್ರವಾಲರು ನನಗೊಂದು ಪತ್ರ ಬರೆದಿದ್ದಾರೆ. ಅದು "ಹರಿಜನ ಸೇವಕದಲ್ಲಿ ಪ್ರಕಟವಾಗಿದೆ. ಈಗ ಸಂಕಲ್ಪಿತವಾಗಿರುವ ಭಾಷಾನ್ವಯ ಪ್ರಾಂತ ಪುನರ್ನಿರ್ಮಾಣ ಪೂರ್ತಿಯಾಗಲ್ಲದೆ ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬಾರದೆಂದು ಆ ಪತ್ರದ ಮುಖ್ಯ ಸಾರಾಂಶ. ಅವರ ವಾದ ಸರಣಿಯು ಅನುವಾದವಿಂತಿದೆ.

'ಹರಿಜನ'ದಲ್ಲಿ ನೀವು 'ಹೊಸ ವಿಶ್ವವಿದ್ಯಾಲಯ'ಗಳ ಬಗೆಗೆ ಬರೆದ ಟಿಪ್ಪಣಿಗಳನ್ನು ಓದಿದ್ದೇನೆ. ಆದರೆ ಆ ಯೋಜನೆ ಭಾಷಾನ್ವಯ ಪ್ರಾಂತ ಪುನರ್ಘಟನೆಯಾಗುವ ಮೊದಲು ಕಾರ್ಯರೂಪಕ್ಕೆ ಬಂದರೆ ಅನೇಕ ತೊಡಕುಗಳು ಮೂಡಬಹುದೆಂದು ನನ್ನ ನಂಬಿಕೆ. ಈ ಭಾಷಾನ್ವಯ ಪುನರ್ನಿರ್ಮಾಣವನ್ನು ಕೈಕೊಳ್ಳಲು ಕಾಂಗ್ರೆಸ್ಸು ಏಕೆ ವಿಲಂಬ ಮಾಡಬೇಕೋ ನನಗೆ ಬಗೆಹರಿಯದಾಗಿದೆ. ಕಾಂಗ್ರೆಸ್ಸು ೧೯೨೦ರಿಂದಲೂ ಉತ್ತಮ ಆಡಳಿತೆಗೆ ಇದು ಅವಶ್ಯವೆಂದು ಸಾರುತ್ತ ಬಂದಿದೆ. ಈಗ ಇಂಥ ಪುನರ್ನಿರ್ಮಾಣ ಮಾಡುವ ಸ್ವಾತಂತ್ರ್ಯ ನಮಗೆ ಕೈಗೂಡಿರುವಾಗ ಅದನ್ನು ಸೋಲಿಸಲು ಕೆಲವೆಡೆ ಪ್ರಯತ್ನಗಳಾಗುತ್ತವೆ. ಘಟನಾ ಸಮಿತಿಯಲ್ಲಿಯೂ ಈ ಪ್ರಶ್ನೆಯನ್ನು ಮೂಲೆಗೆ ತಳ್ಳಲಾಗಿದೆಯೆಂದು ತೋರುತ್ತದೆ. ಪುನರ್ಘಟನೆಯಾಗದಿದ್ದರೆ ನಮ್ಮ ಶಾಲೆ ಕಾಲೇಜುಗಳಲ್ಲಿ ಎಲ್ಲ ಶಿಕ್ಷಣವೂ ಪ್ರಾಂತಿಕ ಭಾಷೆಯಲ್ಲಾಗುವಂತೆ ನಿರ್ಬಂಧಿಸುವದಾಗಲಿ, ಇಂಗ್ಲೀಷು ಇಂದು ಅನ್ಯಾಯವಾಗಿ ಆಕ್ರಮಿಸಿದ ಪದವಿಯಿಂದ ಅದನ್ನು ತಳ್ಳಿ ಹಾಕುವದಾಗಲಿ ಬಹಳ ಕಠಿನವೇ ಸರಿ. ಮುಂಬಯಿ ಮದ್ರಾಸ, ಮತ್ತು ಮಧ್ಯಪ್ರಾಂತ ನನ್ನೀವಾದಕ್ಕೆ ಸಾಕ್ಷಿಸ್ವರೂಪವಾಗಿವೆ. ತಡ ಮಾಡಿದಂತೆ ಪ್ರಾಂತ ಪ್ರಾಂತಗಳಲ್ಲಿಯ ವೈಷಮ್ಯಕ್ಕೆ ಪುಟವೇರುವದು ನಿಶ್ಚಯ. ಮೀನ ಮೇಷ ಎಣಿಸುವದರ ಪರಿಣಾಮವನ್ನು ಹಿಂದು ಮುಸ್ಲಿಂ ಜಗಳಕ್ಕೆ ಇಂದು ಬಂದ ಭಯಾನಕ ಸ್ವರೂಪದಿಂದ ನಾವು ಕಂಡುಕೊಳ್ಳಬಹುದು. ಹೇಗೇ ಆದರೂ ನಾವು ವಿಭಜನೆಯನ್ನೊಪ್ಪಿಕೊಳ್ಳುವದೇ ಆಗಿದ್ದರೆ ಮೊದಲೇ ಅದಕ್ಕೆ ಒಪ್ಪಿಗೆ ಕೊಟ್ಟುಬಿಟ್ಟಿದ್ದರೆ ಎಷ್ಟು ಚೆನ್ನಾಗಿರುತಿತ್ತು. ಈ ಗಲಭೆಗಳಿಂದ ಪಾಠಕಲಿತು, ಭಾಷಾನ್ವಯ ಪ್ರಾಂತರಚನೆ ಒಳ್ಳೆಯದೆಂದಾದ್ದ ಮೇಲೆ ಅದನ್ನು ರಚಿಸುವಲ್ಲಿ ವಿಲಂಬ ಮಾಡಿದರೆ ಗಂಡಾಂತರಕ್ಕೆ ಕಾರಣವಾದೀತೆಂದು ನೀವು ಇನ್ನಾದರೂ ಮನಗಾಣಬಾರದೆ ?"

ಮೇಲಿನ ಪತ್ರದಲ್ಲಿ ಸೂಚಿತವಾದ ಅರ್ಥವನ್ನು ಅಂದರೆ ಮಾಡಬೇಕಾದ ಕಾರ್ಯದಲ್ಲಿ ನ್ಯಾಯವಾದ ಕಾರಣವಿಲ್ಲದೆ ತಡಮಾಡುವದು ಸರಿಯಲ್ಲ ಮತ್ತು ಅಯೋಗ್ಯವಾದುದನ್ನು ರಾಜಕೀಯ ಸಂಘರ್ಷದಲ್ಲಿ ಒಪ್ಪಬಾರದೆಂಬ ನೀತಿಯನ್ನು ನಾನು ಪೂರ್ಣವಾಗಿ ಅಂಗೀಕರಿಸುತ್ತೇನೆ. ದುಷ್ಪ್ರವಾದದೊಡನೆ ಎಂದೆಂದೂ ಒಡಂಬಡಿಕೆಯಿಲ್ಲದು ಮತ್ತು ಹೆಚ್ಚು ಕಡಿಮೆ ಎಲ್ಲ ದೃಷ್ಟಿಕೋನಗಳಿಂದಲೂ ಭಾಷಾನ್ವಯ ಪ್ರಾಂತರಚನೆ ಅಪೇಕ್ಷಣೀಯವಾಗಿರುವದರಿಂದ ಅದನ್ನು ಕಾರ್ಯರೂಪಕ್ಕೆ ತರುವ ಯೋಜನೆಯಲ್ಲಿ ತಡವಾಗದಂತೆ ಎಲ್ಲ ಪ್ರಯತ್ನಗಳನ್ನು ಮಾಡತಕ್ಕದ್ದು.

ಆದರೆ ಭಾಷಾನ್ವಯ ಪುನರ್ಘಟನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ತೋರಿಬರುತ್ತಿರುವ ವಿರಕ್ತಿ ಸದ್ಯದ ವಾತಾವರಣದಲ್ಲಿ ಅನ್ಯಾಯ್ಯವಾದುದಲ್ಲವೆಂದು ತೋರುತ್ತದೆ. ಪ್ರತ್ಯೇಕತಾ ಭಾವನೆ ಎಲ್ಲೆಲ್ಲೂ ತಾನೇ ತಾನಾಗಿದೆ. ಎಲ್ಲರೂ ತಮ್ಮನ್ನು ಹಾಗು ತಂತಮ್ಮ ಕುಟುಂಬಗಳ ವಿಚಾರದಲ್ಲಿಯೇ ಮಗ್ನರು. ಅಖಿಲ ಭಾರತದ ವಿಚಾರವನ್ನು ಚಿಂತಿಸುವವರೇ ಇಲ್ಲ. ಕೂಡಿ ನಡೆಯುವ ಸೋಗವೇನೋ ಇದ್ದೇ ಇದೆ. ಆದರೆ ಅದು ಪಾತಾಳ ಶಕ್ತಿಯಲ್ಲ, ಗದಿಬಿಡಿ ಎಬ್ಬಿಸುವಂಥದಂತೂ ಅಲ್ಲೇ ಅಲ್ಲ. ಇತ್ತ ಒಡೆದು ಹೋಗುವ ಪ್ರವೃತ್ತಿ ಮಾತ್ರ ಕಣ್ಣಿಗೆ ಕಾಣಸುವಂತಿದೆ. ಸ್ವಭಾವಸಿದ್ಧವಾಗಿ ಅದು ಬೊಬ್ಬಿರಿಯುತ್ತ ಎಲ್ಲರ ಲಕ್ಷ್ಯವನ್ನು ಸೆಳೆಯುತ್ತದೆ. ಜಾತೀಯ ವಿಷಯಗಳಲ್ಲಿ ಅದರ ಆವಿರ್ಭಾವ ಎಲ್ಲಕ್ಕೂ ಹೆಚ್ಚಾಗಿ ಕಾಣುತ್ತದೆ. ಅದರಿಂದ ಇತರ ಕ್ಷೇತ್ರಗಳಲ್ಲಿಯೂ ಭೀತಿಯುಂಟಾಗಿದೆ. ಓಡಿಸಾ–ಆಂಧ್ರ, ಓಡ್ರಿಸಾ–ಬಿಹಾರ, ಓಡ್ರಿಸಾ–ಬಂಗಾಲಗಳ ನಡುವಣ ಜಗಳದ ಇತಿಹಾಸ ನಮ್ಮ ಮನಸುಗಳಲ್ಲಿ ಅಚ್ಚಳಿಯದಂತಿದೆ. ಅದಿನ್ನೂ ಪೂರ್ತಿಯಾಗಿ ನಿಃಶೇಷವಾಗಿಲ್ಲ. ಇದು ಈಗಾಗಲೆ ಸಾಧಿಸಲ್ಪಟ್ಟ ನಿಶ್ಚಿತಾರ್ಥದ ಒಂದು ಉದಾಹರಣೆಯಾಯಿತು. ಉಳಿದ ಪ್ರಾಂತಗಳ ಪುನರ್ಘಟನೆ ಎಂದೂ ಕಾಯದೆ ಪ್ರಕಾರ ಆಗಿಲ್ಲ. ಕಾಂಗ್ರೆಸ್ಸು ಮಾತ್ರ ೧೯೨೦ರಲ್ಲಿ ಜಗತ್ತಿನ ಅತಿಪ್ರಬಲ ಸಾಮ್ರಾಜ್ಯದೊಡನೆ ಹೂಡಿದ ಜೀವನ ಮರಣದ ಹೋರಾಟಕ್ಕೆ ಒಪ್ಪುವ ಹೊಸ ಘಟನೆಯನ್ನು ಮಾಡಿಕೊಂಡು ಭಾಷಾನ್ವಯ ಪುನರ್ಘಟನೆ ಮಾಡಿಕೊಂಡಿತು. ಕಾಂಗ್ರೆಸ್ಸು ವಿಭಜಿಸಿದ್ದರೂ ಕಾಯದೆ ಬದ್ಧವಾಗಿ ಈಗ ಮದ್ರಾಸ ಪ್ರಾಂತ ತನ್ನನ್ನು ನಾಲ್ಕು ಪ್ರಾಂತಗಳಾಗಿ ಹೇಗೆ ವಿಭಜಿಸಿಕೊಳ್ಳಬಲ್ಲದು ? ಮುಂಬಯಿ ಪ್ರಾಂತದ ಸ್ಥಿತಿಯೂ ಹೀಗೆಯೆ ಇದೆ. ಇನ್ನೂ ಅನೇಕರು ಬೇರೆ ಬೇಡಿಕೆಗಳನ್ನು ಮುಂದೊಡ್ಡಿದ್ದಾರೆ. ಅವುಗಳನ್ನು ಕಾಂಗ್ರೆಸ್ಸು ಅಂಗೀಕರಿಸಿಲ್ಲವಾದರೂ ಅವರೇನು ಕಡಿಮೆ ಬೊಬ್ಬಾಟ ನಡೆಸಿಲ್ಲ, ಅವರ ಒತ್ತಾಯವೇನು ಕಡಿಮೆಯಿಲ್ಲ. ೧೯೨೦ರಲ್ಲಿ ತನಗಿದ್ದಷ್ಟು ಪ್ರಭಾವ ಗೌರವಗಳು ಇಂದಿಲ್ಲವೆಂದು ಕಾಂಗ್ರೆಸ್ಸು ಕಂಡುಕೊಂಡಿದೆ. ಇಂದು ಆಶೆಯ ಸ್ಥಾನದಲ್ಲಿ ನಿರಾಶೆ ಹಬ್ಬಿದೆ. ನಮ್ಮ ಕೈಗೆ ಸ್ವಾತಂತ್ರ್ಯ ಬಂದಿದೆ. ಆದರೆ ಅದನ್ನು ಏನು ಮಾಡಬೇಕೆಂದೇ ನಮಗೆ ತೋಚದಾಗಿದೆ. ಇದು ಆತ್ಮಘಾತಕ ಅರಾಜಕತೆಯೋ ಎಂದು ತಪ್ಪು ತಿಳಿದುಕೊಳ್ಳುವಂತಿದೆ. ಹುರುಪಿನ ಸುಧಾರಣಾವಾದಿಗಳು ಕೂಡ ವಾದಗ್ರಸ್ತ ಪ್ರಶ್ನೆಗಳನ್ನು ಹೆಚ್ಚು ಆಶಾವಹವಾದ ದಿನಗಳು ಬರುವ ವರೆಗೆ ಮುಂದೆ ತಳ್ಳುವರು. ದೇಶದ ಹಿತದೃಷ್ಟಿಯಿಂದ, 'ಕೊಟ್ಟು ತೆಗೆದುಕೊಳ್ಳುವ' ಉದಾರ ಧೋರಣೆಯನ್ನು ಎಲ್ಲ ಪ್ರಾದೇಶಿಕ ಹಿತಚಿಂತಕರೂ ಒಪ್ಪಿಕೊಂಡು ಸರ್ವಹಿತವನ್ನು ಒಳಗೊಂಡ ಹಿಂದುಸ್ತಾನದ ಹಿತಕ್ಕೆ ಬಾಗಿ ಇತರ ಹಿತಗಳನ್ನು ಗೌಣವಾಗಿಡಲೊಪ್ಪುವ ದಿನ ಬಂದೀತು ಅದುದರಿಂದ ನನ್ನಂತೆ ರಚನಾತ್ಮಕ ಸೂಚನೆಗಳೇ ಒಡನೆ ಆಚರಣೆಗೆ ಬರಬೇಕೆಂದು ಬಯಸುವವರೆಲ್ಲರೂ ವೈಷಮ್ಯದ ಸ್ಥಾನದಲ್ಲಿ ಸಾಮರಸ್ಯವೂ ತಿಕ್ಕಾಟದ ಸ್ಥಾನದಲ್ಲಿ ಶಾಂತಿಯೂ ಅಧೋಗತಿಯ ಸ್ಥಾನದಲ್ಲಿ ಪ್ರಗತಿಯೂ ಸಾವಿನ ಸ್ಥಾನದಲ್ಲಿ ಬಾಳುವೆಯೂ ಮೆರೆಯುವಂತೆ ವಾತಾವರಣವನ್ನುಂಟು ಮಾಡಲು ದುಡಿಯಬೇಕಾಗಿದೆ. ಜಾತೀಯ ಕಲಹ ಅಳಿದ ದಿನವೇ ಆ ಸುದಿನ ತಲೆದೋರುವದು. ಅವರಿಗೆ ದಾಕ್ಷಿಣಾತ್ಯ ಭಾಷಾತ್ಮಕ ಗುಂಪುಗಳು ತಂತಮ್ಮ ವಿವಾದಗಳನ್ನೂ ಗಡಿಗಳನ್ನೂ ತಮ್ಮೊಳಗೆ ಬಗೆಹರಿಸಲೊಪ್ಪುವವೆ ? ಮುಂಬಯಿ ಪ್ರಾಂತ ಭಾಷಾನ್ವಯ ಪುನರ್ಘಟನೆಯ ಸರ್ವಮಾನ್ಯ ಯೋಜನೆಯನ್ನು ಸಾಧ್ಯಗೊಳಿಸಬಹುದೆ? ಹೊಸ ಬೇಡಿಕೆಗಳ ಪುರಸ್ಕರ್ತರು ಸ್ವೇಚ್ಛೆಯಿಂದಲೂ ತಮ್ಮ ಬೇಡಿಕೆಗಳನ್ನು ಹಿಂತೆಗೆದುಕೊಳ್ಳುವರೆ ? ಹಾಗಾದರೆ ಭಾಷಾನ್ವಯ ಪುನರ್ಘಟನೆ ಇಂದೇ ಲೇಶ ಮಾತ್ರ ಗೊಂದಲವಿಲ್ಲದೆ ಅಸ್ತಿತ್ವಕ್ಕೆ ಬರಬಲ್ಲದು.

ಕಾಂಗ್ರೆಸ್ಸಿನ ತಳಹದಿಯೇ ಇಂದು ಜರ್ಜರಿತವಾಗಿದೆ. ಅದರ ಮೇಲೆ ಅತಿರೇಕ ಭಾರ ಬೀಳದಿರಲಿ. ಪ್ರತಿಸ್ಪರ್ಧಿ ಗುಂಪುಗಳ ನಡುವೆ ಮಧ್ಯಸ್ಥಿಕೆ ನಡೆಸುವದಕ್ಕಾಗಲಿ, ಕೈಮೀರಿ ಹೋಗುವವರ ಮೇಲೆ ತನ್ನ ಇಚ್ಛೆಯನ್ನು ಹೇರುವದಕ್ಕಾಗಲಿ ಕಾಂಗ್ರೆಸ್ಸಿಗೆ ಇಂದು ಶಕ್ತಿ ಸಾಲದು.

ಹೊಸದಿಲ್ಲಿ ೨೩—೧೧—೪೭

ಸಾವು ಸಾಹಸವೇ ಹೇಡಿತನವೇ?

(ಮೋ. ಕ. ಗಾಂಧಿ)

ಪೂರ್ವ ಪಾಕಿಸ್ತಾನದಿಂದ ಗುಳೆಹೊರಟವರ ಬಗ್ಗೆ ಓರ್ವ ಬಂಗಾಲಿ ಮಿತ್ರರು ಬಂಗಾಲಿಯಲ್ಲಿ ಒಂದು ಉದ್ದ ಓಲೆಯನ್ನು ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ:— ಸಾಹಸ ಪೂರ್ಣ ಸಾವು ಮತ್ತು ಹೇಡಿತನದ ಸಾವು ಇವುಗಳಲ್ಲಿರುವ ಸೂಕ್ಷ್ಮ ಭೇದ ಮತ್ತು ಈ ಬಗ್ಗೆ ನನ್ನ ವಾದಸರಣಿ ಅವರಿಗೆ ಅರ್ಥವಾದರೂ ಸಾಮಾನ್ಯರಿಗೆ ಇದರ ಅರ್ಥವಾಗುವದು ಕಠಿಣ ಮತ್ತು ಸಾಮಾನ್ಯರು ನನ್ನ ಹೇಳಿಕೆಯಲ್ಲಿ ಗುಳೇ ಹೋಗುವದನ್ನು ನಾನು ಸಮರ್ಥಿಸುತ್ತೇನೆಂದೇ ಗ್ರಹಿಸುವರಂತೆ. "ನನ್ನ ದೈವದಲ್ಲಿ ಮರಣವೇ ಕಟ್ಟಿಟ್ಟಿದ್ದರೆ ಸಾಹಸಕ್ಕೆ ಬೆಲೆಯಿಲ್ಲ; ಯಾಕೆಂದರೆ ಮನುಷ್ಯನು ಸಾವು ತಪ್ಪಿಸಲೆಂದೇ ಬದುಕಿರುತ್ತಾನೆ." ಎನ್ನುತ್ತಾರೆ ಅವರು.

ಈ ಬಗೆಯ ವಾದಸರಣಿಯು ತಪ್ಪೆಂದು ಹೇಳಬೇಕಾಗುತ್ತದೆ. ಮನುಷ್ಯನು ಸಾವು ತಪ್ಪಿಸಲೆಂದೇ ಬದುಕಿರುವದಿಲ್ಲ. ಹೀಗೆ ಮಾಡುತ್ತಿದ್ದರೆ ಅವರಿಗೆ ಇದು ಉಚಿತವಲ್ಲವೆಂದು ನಾನು ಸೂಚಿಸುತ್ತೇನೆ. ಜೀವನದಷ್ಟೇ ಮರಣವನ್ನೂ ಪ್ರೀತಿಸಲು ಕಲಿಯಬೇಕೆಂದು ನಾನು ಹೇಳುವೆ. ಇದು ಕಠಿಣ ಉಪದೇಶವೇ. ಇದರಂತೆ ಆಚರಿಸುವದಂತೂ ಇನ್ನೂ ಕಠಿಣ ಎಂದು ಅನ್ನಬಹುದು ಯೋಗ್ಯವಾದುದೆಲ್ಲ ಆಚರಿಸಲು ಕಠಿಣವೇ. ಹೌದೆನ್ನುವದು ಯಾವಾಗಲೂ ಕಠಿಣವೇ; ಅಲ್ಲವೆಂಬುದು ಬಹುಸುಲಭ ಮತ್ತು ಅಡಿಗಡಿಗೆ ವಿಚಾರಿಸುವಂತಹದು. ಮರಣವನ್ನು ನಾವು ಶತ್ರುವೆಂದು ತಿಳಿಯದೆ ಸ್ನೇಹವಾಗಿ ಕಂಡಷ್ಟೂ ಜೀವನವೆಂಬುದು ಬಾಳಲು ತಕ್ಕುದಾಗುವದು. ಜೀವನದ ಲೋಲುಪತೆಗಳನ್ನೂ ಉದ್ರೇಕಗಳನ್ನೂ ಗೆಲ್ಲಲು ಸಾವಿನ ಸಲಹೆ ಕೋರಬೇಕು. ಸಾವನ್ನು ಮುಂದೂಕಲು ಹೇಡಿಯಾದವನು ತನ್ನ ಮಾನವನ್ನೂ ಹೆಂಡರು ಮಕ್ಕಳನ್ನೂ ಆದೇಕೆ ಎಲ್ಲವನ್ನೂ ತೊರೆಯಲು ಸಿದ್ಧನಾಗುತ್ತಾನೆ. ಸ್ವಮಾನ ಸಂರಕ್ಷಣೆಗೆ ವೀರ ಸಾಹಸಿಯು ಸಾವನ್ನೂ ಸ್ವಾಗತಿಸುತ್ತಾನೆ. ತಕ್ಕ ಸಮಯ ಬಂದಾಗ, ಅದು ಬರಬಹುದು, ನನ್ನ ಉಪದೇಶಗಳನ್ನು ಸೂಚ್ಯವಾಗಿ ಕೊಡದೆ ವಾಚ್ಯವಾಗಿಯೇ ಕೊಡಲಾಗುವದು. ನನ್ನ ಉಪದೇಶವನ್ನು ಇಂದು ಸ್ವಲ್ಪ ಜನ ಅನುಸರಿಸಿದರೂ ಅಥವಾ ಯಾರೂ ಅನುಸರಿಸದಿದ್ದರೂ ಅದರ ಬೆಲೆಯೇನು ಕಡಿಮೆಯಾಗಬೇಕಿಲ್ಲ. ಹಲವರಿಂದ ಮಾತ್ರ ಅದೇಕ ಒಬ್ಬನಿಂದೇ ಸಾಮಾನ್ಯವಾಗಿ ಕಾರ್ಯಾರಂಭವಾಗುವದುಂಟು.

ರಾಷ್ಟ್ರ ರಕ್ಷಕ ದಳ

(ಮೋ. ಕ. ಗಾಂಧಿ)

"ರಾಷ್ಟ್ರ ರಕ್ಷಕ ದಳ (ನ್ಯಾಶನಲ್ ಗಾರ್ಡ್) ಎಂಬ [illegible] ಆಕ್ಷೇಪ [illegible] ಹೀಗೆ ಒಂದೆಡೆ ಪಾಕಿಸ್ತಾನ ಸರಕಾರವು ಸ್ವಯಂಸೇವಕ ಸೈನ್ಯವನ್ನು ಕಟ್ಟುವದು ಖಚಿತ. ಹಾಗೂ ಈ ಸೈನ್ಯದಲ್ಲಿ ಸೇರಬೇಕೆಂದರೆ ಹಿಂದುಗಳಾದವರು ಏನು ಮಾಡಬೇಕು ? ಈ ಸೈನ್ಯದಲ್ಲಿ ಮುಸಲ್ಮಾನರಿಗಷ್ಟೇ ಸ್ಥಾನವಿದ್ದರೆ ಆಗ ಹಿಂದುಗಳೇನು ಮಾಡಬೇಕು" ಎಂಬುದಾಗಿ ಒಬ್ಬರು ಪೂರ್ವ ಬಂಗಾಲದಿಂದ ಪತ್ರ ಬರೆದು ಕೇಳಿದ್ದಾರೆ.

ಇಂದಿನ ಪರಿಸ್ಥಿತಿಯಲ್ಲಿ ಈ ಪ್ರಶ್ನೆಗೆ ಉತ್ತರ ಹೇಳುವದು ದುಸ್ತರವಾಗಿದೆ. ಹಿಂದುಸ್ತಾನದಲ್ಲಿಯ ಪ್ರತಿಯೊಬ್ಬ ಮುಸಲ್ಮಾನನೂ ರಾಜನಿಷ್ಠ ವ್ಯಕ್ತಿ; ಅದರಂತೆ ಪಶ್ಚಿಮ ಪೂರ್ವ ಪಾಕಿಸ್ತಾನಗಳಲ್ಲಿ ಪ್ರತಿಯೊಬ್ಬ ಹಿಂದು ಮತ್ತು ಸಿಖ ರಾಜನಿಷ್ಠ ವ್ಯಕ್ತಿಯೇ. ಅತ್ಯಂತ ಕಳಕಳಿಯಿಂದ ಕರೆದುದಾದಲ್ಲಿ ಆ ಸೈನ್ಯದಲ್ಲಿ ಸೇರಲು ನಾನು ಸೂಚಿಸುತ್ತೇನೆ. ಆದರೆ ಸಮಾನವೃತ್ತಿ ಮತ್ತು ಪ್ರೋತ್ಸಾಹಕ ಕಂಡುಬಂದರೆ ಮಾತ್ರ ನನ್ನ ಆ ಸೂಚನೆ. ಈ ಬಗೆಯ ಕರೆ ಇದ್ದಲ್ಲಿ ಯಾವ ಸಿಡುಕಿಗೂ ಒಳಗಾಗದೆ ತೀರ್ಮಾನಕ್ಕೆ ಬಾಗಬೇಕು ಅಷ್ಟೇ.

ಅಖಂಡ ಬಂಗಾಲ

(ಮೋ. ಕ. ಗಾಂಧಿ)

ಅಖಂಡ ಬಂಗಾಲದ ತತ್ವವನ್ನು ಪ್ರಚಾರ ಮಾಡುವವರಿಗೆ ಮರಣದಂಡನೆ ವಿಧಿಸುವದಾಗಿ ಪೂರ್ವಬಂಗಾಲ ಸರಕಾರದ (ಗ್ಯಾಝೆಟೆಡ್ ಆರ್ಡರ) ಅಧಿಕೃತ ಆಜ್ಞೆ ಇರುವದಾಗಿ ಒಬ್ಬರು ಪತ್ರಬರೆದಿದ್ದಾರೆ. ಇದನ್ನು ನಂಬುವ ಮೊದಲು ನಾನು ಆ ಮೂಲ ಆಜ್ಞೆಯನ್ನು ನೋಡಬಯಸುತ್ತೇನೆ. ಈ ಆಶಯದ ಒಂದು ಆಜ್ಞೆ ಇದ್ದರೂ ಅದರಲ್ಲಿಯ ಶಬ್ದಗಳು ಬೇರೆ ಅರ್ಥವನ್ನೇ ಸೂಚಿಸುವ ಸಂಭವವಿದೆ. ಈ ಬಗೆಯ ಕೃತಿಯ ಅಪರಾಧಗುರುತ್ವವನ್ನು ನಾನು ಊಹಿಸಬಲ್ಲೆ. ಈ ಬಗೆಯ ಕ್ರಮ ಕೈಕೊಳ್ಳುವದು ಸರಿಯೆಂದಾಗಲೀ ನ್ಯಾಯವೆಂದಾಗಲೀ ತಿಳಿಯುವ ಹಿಂದುಗಳಾಗಲೀ ಮುಸಲ್ಮಾನರಾಗಲೀ ತೀರ ವಿರಲ. ಕೃತಿಗಿಳಿದ ತತ್ವವನ್ನು ಹಲ್ಲಿಟಿಸಲು ತಲೆಕೆಟ್ಟ ಹುಚ್ಚನು ಮಾತ್ರ ಮುಂದರಿದು ಪ್ರಬಲಪ್ರಚಾರ ಕೈಕೊಳ್ಳುವನು. ಉಭಯ ಪಕ್ಷಗಳ ಒಪ್ಪಿಗೆಯಿಂದ ಮಾತ್ರ ಖಂಡ ಬಂಗಾಲವು ಅಖಂಡವಾಗಬಲ್ಲದು. ಸಾರ್ವಜನಿಕ ಮತವನ್ನು ಏಕ್ಯದತ್ತ ಹೊರಳಿಸಲು ಯಾರಿಗೂ ಅನುಮತಿ ಸಿಗದಿದ್ದರೆ ಈ ಒಪ್ಪಿಗೆ ಕೂಡ ಅಸಾಧ್ಯವೇ.

ಕುರುಕ್ಷೇತ್ರ ಶಿಬಿರಕ್ಕೆ ಗಾಂಧಿಯವರ ಆಕಾಶವಾಣಿ

ಕೇವಲ ನೀವೋ ಅಥವಾ ಇನ್ನಿತರರೂ ಕೂಡ ಇಂದಿನ ನನ್ನ ಮಾತನ್ನು ಕೇಳುತ್ತಿದ್ದಾರೋ ಹೇಗೆಂಬುದು ನನಗರಿಯದು. ನಾನು ಆಕಾಶವಾಣಿಯಿಂದ ಮಾತಾಡುತ್ತಿದ್ದರೂ ನನಗೆ ಅಂಥದರಲ್ಲಿ ಇಷ್ಟವಿಲ್ಲ. ಆರ್ತರೊಡನೆ ಆರ್ತನಾಗಿ ಅವರ ಆರ್ತತೆಯನ್ನು ಹೋಗಲಾಡಿಸಲು ಪ್ರಯತ್ನಿಸುವದೇ ನನ್ನ ಬಾಳಿನ ಕೆಲಸವಾಗಿದೆ. ಆದುದರಿಂದ ಆ ದೃಷ್ಟಿಯಿಂದ ನೀವು ನನ್ನ ಈ ಮಾತನ್ನು ತೆಗೆದುಕೊಳ್ಳುವಿರಾಗಿ ನಂಬುತ್ತೇನೆ.

ನಿರಾಶ್ರಿತರ ಕಷ್ಟನಷ್ಟಗಳು

೨ ಲಕ್ಷಕ್ಕಿಂತ ಹೆಚ್ಚು ನಿರಾಶ್ರಿತರು ಕುರುಕ್ಷೇತ್ರಕ್ಕೆ ಬಂದಿದ್ದಾರೆಂದೂ ಮತ್ತೂ ಬರುವವರಿದ್ದಾರೆಂದೂ ಕೇಳಿ ನನಗೆ ಬಹಳ ವ್ಯಥೆಯಾಯಿತು. ಸುದ್ದಿ ಕೇಳಿದೊಡನೆಯೇ ನಿಮ್ಮೊಡನೆ ಬಂದಿರಬೇಕೆಂದು ನನಗೆ ಬಹಳ ಆಸೆಯಾಯಿತು, ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ನಡೆಯುತ್ತಿದ್ದು ಅಲ್ಲಿ ನನ್ನ ಹಾಜರಿ ಅಗತ್ಯವಿದ್ದುದರಿಂದ ದಿಲ್ಲಿಯನ್ನು ಬಿಟ್ಟು ಬರಲಾರದಾದೆ. ಶೇಠ್ ಘನಶ್ಯಾಮದಾಸರು ನಾನು ಆಕಾಶವಾಣಿಯಲ್ಲಿ ಮಾತಾಡಬೇಕೆಂಬ ಸಲಹೆಯಿತ್ತರು. ಅದಕ್ಕಾಗಿ ಈ ಆಕಾಶವಾಣಿ ಶುರುಮಾಡಿದ್ದೇನೆ.

ಕುರುಕ್ಷೇತ್ರ ಶಿಬಿರವನ್ನು ಸಂಘಟಿಸಿದ ಜನರಲ್ ನಾಥುಸಿಂಗರು ೨ ದಿನಗಳ ಹಿಂದೆ ಆಕಸ್ಮಾತ್ತಾಗಿ ನನ್ನನ್ನು ನೋಡಬಂದರು. ಅವರು ತಮ್ಮ ಸಂಕಟಗಳನ್ನು ನನಗೆ ವಿಶದಪಡಿಸಿದರು ಚೆನ್ನಾಗಿ ಆಡಳಿತ ನಡೆಸಿ ಬರುವುದೆಂಬ ಕಾರಣದಿಂದಲ್ಲದೆ ನಿಮ್ಮನ್ನು ಬಲಾತ್ಕರಿಸಲೆಂದು ಕೇಂದ್ರ ಸರಕಾರವು ಆ ಶಿಬಿರಕ್ಕೆ ಮಿಲಿಟರಿಯನ್ನು ಕಳುಹಿದ್ದಲ್ಲ.

ಕಷ್ಟಪಡುತ್ತಿರುವವರಿಗೆ ಅವರ ಕಷ್ಟ ಎಲ್ಲರಿಗಿಂತ ಹೆಚ್ಚಾಗಿ ತಿಳಿದಿರುತ್ತದೆ. ನಿಮ್ಮದು ಸಾಧಾರಣವಾದ ಶಿಬಿರವಲ್ಲ; ಪ್ರತಿಯೊಬ್ಬನಿಗೂ ಒಬ್ಬನೊಬ್ಬನನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ನಿಮ್ಮದು ನಿಜವಾಗಿಯೂ ಒಂದು ನಗರ; ನಿಮ್ಮ ಜೊತೆಯ ನಿರಾಶ್ರಿತರೊಡನೆ ನಿಮಗಿರುವ ಒಂದೇ ಒಂದು ಸಂಬಂಧ ಕಷ್ಟಪಡುತ್ತಿರುವುದು.

ಅಧಿಕಾರಿಗಳೊಡನೆ ಸಹಕಾರ

ಶಿಬಿರವನ್ನು ಯಶಸ್ವಿಯಾಗಿ ನಡೆಸಲು ಅಗತ್ಯವಾದ ನಿಮ್ಮ ಸಹಕಾರವು ಅಧಿಕಾರಿಗಳೊಡನಾಗಲಿ ಇಲ್ಲವೆ ನಿಮ್ಮ ನೆರೆಹೊರೆಯವರೊಡನಾಗಲಿ ದೊರಕುತ್ತಿಲ್ಲವೆಂಬುದನ್ನು ಕೇಳಿ ನನಗೆ ಬಹಳ ವ್ಯಥೆಯಾಯಿತು. ನಿಮ್ಮ ಲೋಪದೋಷಗಳನ್ನು ತೋರಿಸಿ ಕೊಡುವುದರಿಂದ ನಾನು ನಿಮ್ಮ ಸೇವೆಯನ್ನು ಅತ್ಯುತ್ತಮ ರೀತಿಯಿಂದ ಮಾಡಬಲ್ಲೆ. ಅದೇ ನನ್ನ ಜೀವನದ ಧ್ಯೇಯ; ಏಕೆಂದರೆ ಅದರಲ್ಲೇ ನಿಜವಾದ ಗೆಳೆತನವಿದೆ ಮತ್ತು ನನ್ನ ಸೇವೆ ಕೇವಲ ನಿಮಗೆ ಅಥವಾ ಭಾರತಕ್ಕಾಗಿ ಅಲ್ಲ; ಅದು ಇಡೀ ಜಗತ್ತಿಗೆಲ್ಲ ಸೇರುತ್ತದೆ.

—ಜನ ಪ್ರಗತಿ

ಕುರುಕ್ಷೇತ್ರ ಶಿಬಿರಕ್ಕೆ ಗಾಂಧಿಯವರ ಆಕಾಶವಾಣಿ

(೭ನೇ ಪುಟದಿಂದ)

ಏಕೆಂದರೆ, ನನಗೆ ಕುಲಧರ್ಮಗಳ ಅರ್ಥಗೋಚರಿಸುವುದಿಲ್ಲ. ನೀವು ನಿಮ್ಮ ಲೋಪದೋಷಗಳನ್ನು ನಿವಾರಿಸಿಕೊಳ್ಳಲು ಶಕ್ತರಾಗುವಿರಾದರೆ ನೀವು ನಿಮಗಷ್ಟೇ ಅಲ್ಲ— ಇಡೀ ಹಿಂದುಸ್ತಾನಕ್ಕೆ ಉಪಕಾರಿಗಳಾಗಬಲ್ಲಿರಿ.

ನಿಮ್ಮಲ್ಲಿ ಅನೇಕರಿಗೆ ನಿಲ್ಲಲು ನೆರಳಿಲ್ಲವೆಂಬುದನ್ನು ತಿಳಿದು ನನಗೆ ಬಹಳ ಸಂಕಟವಾಗುತ್ತದೆ. ಇದು ನಿಜವಾದ ಕಷ್ಟ— ಅದರಲ್ಲೂ ಪಂಜಾಬಿನ ಈ ಚಳಿಗಾಲದಲ್ಲಿ— ಚಳಿಯೋ ದಿನದಿನಕ್ಕೂ ಹೆಚ್ಚಾಗುತ್ತಿದೆ. ನಿಮ್ಮ ಸರಕಾರವು ಕೈಯಲ್ಲಿ ದಷ್ಟು ನಿಮಗೆ ನೆರವಾಗಲು ಹೆಣಗುತ್ತಿದೆ. ನಿಮ್ಮ ಮುಖ್ಯ ಮಂತ್ರಿಯ ಹೆಗಲ ಮೇಲಿನ ಭಾರ ಬಹಳ ಹೆಚ್ಚಿನದಿದೆ. ನಿಮ್ಮ ಕಷ್ಟಗಳನ್ನು ಕಡಿಮೆ ಮಾಡಲು ರಾಜಕುಮಾರಿ ಡಾ. ಜೀವನರಾಜ ಮೇಧಾವರಿರುವ ಆರೋಗ್ಯ ಶಾಖೆಯು ಬಹಳವಾಗಿ ದುಡಿಯುತ್ತಿದೆ. ಈ ಬಿಕ್ಕಟ್ಟಿನಲ್ಲಿ ಇನ್ನಾವ ಸರಕಾರವಾದರೂ ಇದ ಕ್ಕಿಂತ ಹೆಚ್ಚಿಗೆ ಮಾಡಲು ಶಕ್ತವಾಗುತ್ತಿದ್ದಿಲ್ಲ. ದುಃಖವು ಅಪಾರವಾದುದುದು ಮತ್ತು ಸರಕಾರದ ಶಕ್ತಿಗೂ ಮಿತಿಯಿದೆ. ಆದರೆ ನಿಮಗೆ ಎಷ್ಟು ಸಾಧ್ಯವೋ ಅಷ್ಟು ಸಹನೆ, ಸ್ಥೈರ್ಯ ಮತ್ತು ಪ್ರಸನ್ನತೆಯಿಂದ ನಿಮ್ಮ ಕಷ್ಟಗಳನ್ನು ಎದುರಿಸುವುದು ನಿಮಗೆ ಸೇರಿದ್ದು.

ಇಂದು ದಿವಾಳಿ. ಆದರೆ ನಿಮಗಾಗಲಿ ಇತರರಿಗಾಗಿಯಾಗಲಿ ಹಣತೆ ಹಚ್ಚಲು ಸಾಧ್ಯವಿಲ್ಲ. ನಿಮ್ಮ ಸೇವೆ ಮಾಡುವುದರಿಂದಲೇ ದಿವಾಳಿಯು ಅತ್ಯುತ್ತಮವಾಗಿ ಜರುಗಿಸಲ್ಪಡುತ್ತದೆ ಮತ್ತು ನೀವು ನಿಮ್ಮ ಶಿಬಿರದಲ್ಲಿ ಅಣ್ಣತಮ್ಮಂದಿರಂತಿರುವುದರಿಂದಲೂ ಪ್ರತಿಯೊಬ್ಬನೂ ನಿಮ್ಮವನೆಂಬ ಭಾವ ತಾಳುವುದರಿಂದಲೂ ಅದನ್ನು ಆಚರಿಸುವಿರಿ. ಅದನ್ನು ಮಾಡಿದರೆ ನಿಮಗೆ ಜಯಸಿದ್ಧ.

ಕುರುಕ್ಷೇತ್ರದಲ್ಲಿ ಇನ್ನೂ ಏನೇನು ಮಾಡಬೇಕಾಗಿದೆಯೆಂಬುದನ್ನು ಜನರಲ್ ನಾಥುಸಿಂಗ್ ಸಾಹೇಬರು ನನಗೆ ಹೇಳಿದರು. ಇನ್ನು ಅಲ್ಲಿಗೆ ಹೆಚ್ಚಿಗೆ ನಿರಾಶ್ರಿತರನ್ನು ಕಳುಹತಕ್ಕದ್ದಲ್ಲವೆಂದು ಅವರು ತಿಳಿಸಿದರು. ನಿರಾಶ್ರಿತರನ್ನು ಇಡಲು ಮರೆಯು ಇಲ್ಲದಾಗಿಹೋಗುತ್ತದೆ. ಅವರೇಕೆ ಹಾಗೆ ಬರುತ್ತಾರೋ, ಅವರನ್ನೇಕೆ ಹಾಗೆ ಸ್ಥಳೀಯ ಅಧಿಕಾರಿಗಳಿಗೆ ತಿಳಿಸದೆ ತಂದು ತಂದು ಸುರಿಯಲಾಗುವದೋ ಅರ್ಥವಾಗದಾಗಿದೆ. ಕಳೆದ ಸಂಜೆ ನನ್ನ ಪ್ರಾರ್ಥನೋತ್ತರ ಭಾಷಣದಲ್ಲಿ ಇದಕ್ಕಾಗಿ ನಾನು ಪೂರ್ವ ಪಂಜಾಬ ಸರಕಾರವನ್ನು ಟೀಕಿಸಿದೆನು. ಈಗತಾನೆ ಅಲ್ಲಿಯ ಮಂತ್ರಿಯೊಬ್ಬರಿಂದ ಕಾಗದಬಂದಿದೆ. ಅದರಲ್ಲಿ ಅವರು ತಪ್ಪು ತಮ್ಮದಲ್ಲವೆಂದೂ ಕೇಂದ್ರ ಸರಕಾರವೇ ಅದಕ್ಕೆ ಹೊಣೆಯೆಂದೂ ತಿಳಿಸಿದ್ದಾರೆ.

ಈಗ ಕೇಂದ್ರದ್ದಿರಲಿ ಪ್ರಾಂತೀಯವಿರಲಿ, ಎಲ್ಲ ಸರಕಾರಗಳೂ ಜನರಿಗೇ ಸೇರಿದವಾದ್ದರಿಂದ ಒಂದರಮೇಲೆ ಇನ್ನೊಂದು ತಪ್ಪುಹೊರಿಸುವುದು ಯೋಗ್ಯವಲ್ಲ. “ಮಾರ್ಶಲ್‌ಲಾ”ದ ಕಾಲದಿಂದ ನಾನು ಪಂಜಾಬವನ್ನು ಬಲ್ಲೆ. ಪಂಜಾಬಿಗಳ ಗುಣದೋಷಗಳನ್ನು ನಾನು ಅರಿತಿದ್ದೇನೆ; ಕೇವಲ ಪಂಜಾಬಿಗಳಲ್ಲಿ ಮಾತ್ರ ಎನ್ನಲಾಗದಿದ್ದರೂ ಸಾಮಾಜಿಕ ಆರೋಗ್ಯ ಮತ್ತು ನಗರ ನೈರ್ಮಲ್ಯಗಳ ಜ್ಞಾನದ ಅಭಾವವು ಅವರ ದೋಷಗಳಲ್ಲೊಂದು ಆದುದರಿಂದಲೇ ನಾವು ಹರಿಜನರಾಗಬೇಕೆಂದು ಅನೇಕ ವೇಳೆ ನಾನು ಹೇಳಿದ್ದು. ಹಾಗೆ ಮಾಡಿದರೆ ನಾವು ಇನ್ನೂ ಗೌರವ ಸಂಪನ್ನರಾಗುತ್ತೇವೆ. ಆದುದರಿಂದ ನಿಮ್ಮಲ್ಲಿಯ ಪ್ರತಿಯೊಬ್ಬ ಹೆಣ್ಣು, ಗಂಡು, ಹಿರಿ, ಕಿರಿಯನೂ ಕುರುಕ್ಷೇತ್ರವನ್ನು ಸ್ವಚ್ಛವಾಗಿಡುವುದರಲ್ಲಿ ವೈದ್ಯರಿಗೆ ನೆರವಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಸೀದಾ ಹಂಚಿಕೊಳ್ಳಿರಿ

ಇನ್ನೊಂದು ಕೆಲಸವನ್ನು ನೀವು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಅದೇನೆಂದರೆ ನೀವು ನಿಮ್ಮ ಸೀದಾ ಹಂಚಿಕೊಳ್ಳಬೇಕು. ನಿಮಗೆ ಸಿಕ್ಕಿದ್ದರಲ್ಲೇ ನೀವು ತೃಪ್ತರಾಗಿರಿ. ನಿಮ್ಮ ಭಾಗಕ್ಕಿಂತ ಹೆಚ್ಚಿಗೆ ಎಂದೂ ಕೇಳಬೇಡಿರಿ. ಸಾರ್ವಜನಿಕ ಅಡಿಗೆ ವ್ಯವಸ್ಥೆಯು ಕಲಿಯುತಕ್ಕದ್ದಿದೆ. ಹೀಗೆ ನಸ ನೀವು ಪರಸ್ಪರ ಸೇವೆಯನ್ನು ಮಾಡಬಲ್ಲಿರಿ.

ಸೋಮಾರಿತನವನ್ನು ಬಿಡಿರಿ

ನಿರಾಶ್ರಿತರು ಸೋಮಾರಿಗಳಾಗಿ ಉಂಡು ಮಲಗುವುದರಿಂದಾಗುವ ಅಪಾಯವನ್ನು ನಾನು ನಿಮ್ಮ ಗಮನಕ್ಕೆ ತರಬೇಕಾಗಿದೆ. ಎಲ್ಲವನ್ನೂ ತಮಗಾಗಿ ಮಾಡುವುದು ಸರಕಾರದ ಕರ್ತವ್ಯವೆಂದು ಅವರು ತಿಳಿದುಕೊಳ್ಳಲು ಅವಕಾಶವಿದೆ. ಸರಕಾರದ ಕರ್ತವ್ಯವೇನೋ ಅಲ್ಲಿ ಇದ್ದೇ ಇದೆ; ಆದರೆ ಅದರಿಂದ ನಮ್ಮ ಕರ್ತವ್ಯ ಇಲ್ಲದಂತಾಗಲಾರದು. ನೀವು ಕೇವಲ ನಿಮಗಾಗಿ ಅಲ್ಲದೆ ಅನ್ಯರಿಗಾಗಿ ಬದುಕಬೇಕು. ಸೋಮಾರಿತನವೆಂಬುದು ಎಲ್ಲರನ್ನೂ ನೀತಿಗೆಡಿಸತಕ್ಕದ್ದು. ಆದುದರಿಂದ ಅದು ಎಂದೂ ಈ ಬಿಕ್ಕಟ್ಟಿನಿಂದ ಪಾರಾಗಲು ನಮಗೆ ಸಹಾಯ ನೀಡದು.

ಜುನಾಗಡ

ತಾ. ೧೧—೧೧—೪೭ ರಲ್ಲಿ ಹೊಸದಿಲ್ಲಿಯಲ್ಲಿ ಪ್ರಾರ್ಥನೋತ್ತರ ಭಾಷಣ ಮಾಡುತ್ತ ಗಾಂಧಿಯವರೆಂದರು:—

ಜುನಾಗಡದ ಮುಖ್ಯ ಮಂತ್ರಿ ಮತ್ತು ಉಪಮುಖ್ಯ ಮಂತ್ರಿಗಳ ಬೇಡಿಕೆಯ ಮೇರೆಗೆ ತಾತ್ಕಾಲಿಕ ಸರಕಾರವು ಸಂಸ್ಥಾನವನ್ನು ಪ್ರವೇಶಿಸಿದ ಸುದ್ದಿಯನ್ನು ನಾನು ನಿಮಗೆ ನಿನ್ನೆ ಹೇಳಿದೆ. ನಾನು ಹಾಗೆ ಮಾಡಿದ್ದು ಅಂಶತಃ ಸಂತೋಷದಿಂದಲೂ ಅಂಶತಃ ಆಶ್ಚರ್ಯದಿಂದಲೂ ಆಗಿದೆ. ಅಷ್ಟು ಸುಖಕರವಾಗಿ ಆ ಹೋರಾಟವು ಕೊನೆಗೊಳ್ಳುವದೆಂದು ಎಣಿಸಿಲ್ಲವಾ। ಅದಕ್ಕೆ ನಾನು ಸಿದ್ಧನಾಗಿರಲಿಲ್ಲ. ಆದರೆ ಆ ಸಂತೋಷ ಅಪಕ್ವವಾದದ್ದೆನಿಸಿತು. ಏಕೆಂದರೆ ಅದಕ್ಕೆ ಕಾಯದೆ ಅಜಂ ಜಿನ್ನಾರ ಅನುಮತಿ ಬೇಕು. ಆದುದರಿಂದ ನೀವು ದುಃಖಕರವಾದ ಕೆಳಗಿನ ಸುದ್ದಿಯನ್ನು ಕೇಳಿ ಆಶ್ಚರ್ಯಪಡಬಹುದು. ಪಾಕಿಸ್ತಾನದ ಅಧಿಕಾರಿಗಳು ಹಿಂದೀ ಸೈನ್ಯ ಅಲ್ಲಿಯ ರೈತರ ಬೇಡಿಕೆಯಂತೆ ಜುನಾಗಡವನ್ನು ಪ್ರವೇಶಿಸಿದ್ದನ್ನು ವಿರೋಧಿಸಿದರು ಮತ್ತು ಹಿಂದೀ ಸೈನ್ಯವನ್ನು ವಾಪಸು ಕರೆಸಿಕೊಳ್ಳಬೇಕು, ಆಡಳಿತವನ್ನು ಹಕ್ಕುದಾರ ಸರಕಾರಕ್ಕೆ ಬಿಟ್ಟುಕೊಡಬೇಕು, ಹಿಂಸೆ ಮತ್ತು ಆಕ್ರಮಣವನ್ನು ಒಕ್ಕೂಟದವರು ನಿಲ್ಲಿಸಬೇಕು ಎಂದು ಕೇಳಿದರು. ಇಷ್ಟಲ್ಲದೆ ದಿವಾನರಾಗಲಿ ನವಾಬರಾಗಲಿ ಕಾಯಿದೆಶೀರ ಒಕ್ಕೂಟದೊಡನೆ ಸ್ಥಾಯಿ ಅಥವಾ ತಾತ್ಕಾಲಿಕ ಸಂಧಾನ ನಡೆಸಲು ಸಮರ್ಥರಲ್ಲವೆಂದು ವಾದಿಸಿದರು. ಅಲ್ಲದೆ ಹಿಂದುಸ್ತಾನ ಸರಕಾರದ ಕೃತ್ಯವು ಪಾಕಿಸ್ತಾನ ಪ್ರದೇಶದ ಆಕ್ರಮಣರೂಪದ್ದೂ ಅಂತರ್‍ರಾಷ್ಟ್ರೀಯ ಕಾಯದೆಗೆ ಭಂಗ ತರುವಂಥದೂ ಎಂದು ಸಾಧಿಸಿದರು.

ಒಕ್ಕೂಟಕ್ಕೆ ಸೇರಿಕೆ

ಮೊನ್ನೆ ಪತ್ರಿಕೆಗಳಲ್ಲಿ ಬಂದ ಸುದ್ದಿಗಳ ಪ್ರಕಾರ ಆಕ್ರಮಣವನ್ನಾಗಲಿ ಅಂತರ್‍ರಾಷ್ಟ್ರೀಯ ಕಾಯದೆಯ ಭಂಗವನ್ನಾಗಲಿ ಹಿಂದೀ ಸರಕಾರ ಮಾಡಿತೆಂಬುದನ್ನು ನಾನು ತಿಳಿಯಲಾರೆ. ಪ್ರಾಂತ ಸರಕಾರವು ಜುನಾಗಡದ ಜನರ ಸಲುವಾಗಿ ಅತ್ತ ಸಾಗಿದ್ದ ಕಾಯದೆಗೆ ವಿರುದ್ಧವೆಂದು ನಾನು ಹೇಳಲಾರೆ. ಇಡೀ ಕಾಠೇವಾಡದ ಸುರಕ್ಷಿತವಾಗಿ ಅಲ್ಲಿಯ ಅರಸರ ಬೇಡಿಕೆಯ ಮೇರೆಗೆ ಹಿಂದುಸ್ತಾನ ಸರಕಾರವು ಅಲ್ಲಿಗೆ ತನ್ನ ಸೈನ್ಯವನ್ನು ಕಳುಹಿತು. ಈ ಎಲ್ಲ ವ್ಯವಹಾರದಲ್ಲಿ ಕಾಯದೆಗೆ ವಿರುದ್ಧವಾದುದೇನೂ ಇಲ್ಲ.

ಜುನಾಗಡದ ಮುಖ್ಯ ಮಂತ್ರಿ ಮಾಡಿದ ಅಧಿಕಾರಪ್ರಸಂಗಕ್ಕೆ ಯಾವ ನ್ಯಾಯವಾದ ಆಧಾರವೂ ಇಲ್ಲ. ನಾನು ಆ ಎಲ್ಲ ಪರಿಸ್ಥಿತಿಯನ್ನು ನೋಡುವಬಗೆ ಹೀಗೆ— ಸುಮಾರು ; ನೂರಕ್ಕೆ ೮೫ ರಷ್ಟು ಹಿಂದುಗಳಿರುವ ತನ್ನ ರಾಜ್ಯದಲ್ಲಿ ಅವರ ಒಪ್ಪಿಗೆಯಿಲ್ಲದೆ ಜುನಾಗಡದ ನವಾಬನು ಪಾಕಿಸ್ತಾನಕ್ಕೆ ಸೇರಹೋದುದು ಅವನ ಅಧಿಕಾರಕ್ಕೆ ಮೀರಿದ್ದಾಯಿತು. ಜುನಾಗಡಕ್ಕೆ ಸೇರಿದ ಗಿರ್ನಾರ ಗುಡ್ಡದ ಮೇಲಿರುವ ಪವಿತ್ರ ದೇವಾಲಯಗಳ ಬಗ್ಗೆ ಹಿಂದುಗಳು ಹೇರಳಹಣವನ್ನು ಖರ್ಚುಮಾಡಿದರೆ ಅಲ್ಲದೆ ಸಾವಿರಾರು ಯಾತ್ರಿಕರು ಬರುತ್ತಾರೆ. ಸ್ವತಂತ್ರ ಹಿಂದುಸ್ತಾನದಲ್ಲಿ ಅಲ್ಲದೆ ಜನರಿಗೆ ಸೇರಿದವುಗಳೆನಿಸುತ್ತವೆ. ವ್ಯಕ್ತಿಶಃ ಅವುಗಳಲ್ಲೊಂದೂ ಅರಸರಿಗೆ ಸೇರತಕ್ಕದ್ದಲ್ಲ.

ಅವರ ಹಕ್ಕು ತಮ್ಮ ಜನತೆಯ ವಿಶ್ವಾಸ ಮಂಡಲದವರಾಗಿನಿಂತರೆ ಮಾತ್ರ ಸಮರ್ಥನೀಯವಾಗುವುದು. ಆದುದರಿಂದ ಅವರಪ್ರತಿಯೊಂದು ಕಾರ್ಯದಲ್ಲೂ ತಮ್ಮ ಪ್ರಜೆಗಳ ಅಧಿಕಾರವನ್ನು ಮನ್ನಿಸಬೇಕು. ಅವರು ತಮ್ಮ ಪ್ರತಿನಿಧಿತ್ವವನ್ನು ಅರಿಯದಿರುವುದೂ ಕೆಲವೇ ಅಪವಾದವನ್ನುಳಿದರೆ ಹೆಚ್ಚಿನ ರೈತರು ತಮ್ಮ ನಿಜವಾದ ಸಾಮೂಹಿಕ ಒಡೆಯತನವನ್ನು ತಿಳಿದುಕೊಳ್ಳದಿರುವುದೂ ನಾನು ಹೇಳಿದ ತತ್ವಕ್ಕೆ ಬಾಧಕವೆನಿಸುವದಿಲ್ಲ ಆದುದರಿಂದ ಯಾರಿಗಾದರೂ ಕಾಯದೆಶೀರ ಅಧಿರಾಜ್ಯಕ್ಕೆ ಸೇರುವ ಹಕ್ಕಿದ್ದರೆ ಅದು ಆ ನಿರ್ದಿಷ್ಟ ಸಂಸ್ಥಾನದ ರೈತರಿಗೆ ಮಾತ್ರ. ಅಲ್ಲಿಯ ತಾತ್ಕಾಲಿಕಸರಕಾರವು ಎಂದಾದರೂ ಪ್ರಜೆಗಳನ್ನು ಪ್ರತಿನಿಧಿಸದಿದ್ದಲ್ಲಿ ಎರಡೂ ಅಧಿರಾಜ್ಯಗಳು ಅದನ್ನು ತಿರಸ್ಕರಿಸಬೇಕು, ಏಕೆಂದರೆ ಅಂತಹ ಅಪ್ರಾತಿನಿಧಿಕ ಸರಕಾರದವರು ದರೋಡೆಗಾರರೆನಿಸುತ್ತಾರೆ. ಮತ್ತು ಯಾವ ಅರಸನೇಆಗಲಿ ತನ್ನ ಖಾಸಗಿ ಅಧಿಕಾರದಿಂದ ಯಾವುದಾದರೊಂದು ಅಧಿರಾಜ್ಯವನ್ನು ಸೇರಿದರೆ ಯಾವ ಅಧಿರಾಜ್ಯವೂ ಜಗತ್ತಿಗೆದುರಾಗಿ ಅದನ್ನು ಸಮರ್ಥಿಸಿಕೊಳ್ಳಲಾರದು. ಈ ದೃಷ್ಟಿಯಿಂದ ಜುನಾಗಡದ ನವಾಬನು ಪಾಕಿಸ್ತಾನಕ್ಕೆ ಸೇರಿದ್ದಕ್ಕೆ ಮೊದಲಿನಿಂದ ಅರ್ಥವಿಲ್ಲ. ಅದಕ್ಕೆ ಮನ್ನಣೆಯಿಲ್ಲ. ಏಕೆಂದರೆ ಅದಕ್ಕೆ ಅಲ್ಲಿಯ ರೈತರ ಒಪ್ಪಿಗೆಯ ಮುದ್ರೆ ಬಿದ್ದಿಲ್ಲ

ಕೊನೆಯದಾಗಿ ಜುನಾಗಡವು ಯಾವ ಅಧಿರಾಜ್ಯಕ್ಕೆ ಸೇರಬೇಕೆಂಬುದರಲ್ಲಿ ಕಲಹವೆದ್ದರೆ ಅದನ್ನು ನ್ಯಾಯವಾದ ಜನತಮತಗಣನೆಯಿಂದ ತೀರ್ಮಾನಿಸಬೇಕು—ಅದರಲ್ಲಿ ಹಿಂಸೆ ಅಥವಾ ಅದರ ಪ್ರದರ್ಶನ ಎಳ್ಳಷ್ಟೂ ಇರಕೂಡದು. ಪಾಕಿಸ್ತಾನ ಸರಕಾರ ತಳೆದ ಸದ್ಯದ ಮನೋಭಾವ ಮತ್ತು ಸದ್ಯದಲ್ಲಿ ಜುನಾಗಡದ ಮುಖ್ಯ ಮಂತ್ರಿಯ ವಿಚಾರ ಇವೆರಡೂ ವಿಚಿತ್ರವಾದ ಪರಿಸ್ಥಿತಿಯನ್ನೇ ಉಂಟುಮಾಡಿವೆ. ಪಾಕಿಸ್ತಾನ ಹಿಂದುಸ್ತಾನಗಳಲ್ಲಿ ಯಾರದು ನ್ಯಾಯವೆಂಬುದನ್ನು ಯಾರದು ನಿರ್ಣಯಿಸಬೇಕು? ಕತ್ತಿಗೆ ಕೈಹಚ್ಚುವದನ್ನಂತೂ ಯೋಚಿಸಲೇಬಾರದು. ಮರ್ಯಾದೆಯಿಂದ ನಡೆಯಬೇಕಾದರೆ ಹಿಂದಿನ ಕುಲದಂತೆ ಮಧ್ಯಸ್ಥಿಕೆಯಿಂದ ಬಗೆಹರಿಸಿಕೊಳ್ಳುವುದು. ಆ ಭಾರವನ್ನು ಹೊರಲು ಹಿಂದುಸ್ತಾನದಲ್ಲಿ ಅನೇಕ ಸ್ತ್ರೀಪುರುಷರಿದ್ದಾರೆ. ಒಂದು ವೇಳೆ ಎರಡೂ ಪಕ್ಷಗಳು ಹಿಂದೀಯರ ಮಧ್ಯಸ್ಥಿಕೆಗೆ ಒಪ್ಪದಿದ್ದರೆ, ನನ್ನನ್ನು ಕೇಳಿದರೆ ಜಗತ್ತಿನ ಯಾವ ಭಾಗದ ಯಾವ ವ್ಯಕ್ತಿ ಮಧ್ಯಸ್ಥಿಕೆ ಮಾಡಿದರೂ ಅಡ್ಡಿಯಿಲ್ಲವೆನ್ನುತ್ತೇನೆ.

ಸ್ವಾವಲಂಬನ

ಮೊನ್ನೆ ಗೋವೆಯಿಂದ ತಂಗಿಯೊಬ್ಬಳು ನನ್ನನ್ನು ನೋಡಬಂದಳು. ನಿಮ್ಮ ಶಿಬಿರದಲ್ಲಿ ಅನೇಕ ಹೆಂಗಸರು ನೂಲಬೇಕೆಂದು ಬಯಸುವರೆಂಬಯಸುವರೆಂಬ ಮಾತನ್ನು ಅವಳಿಂದ ಕೇಳಿ ನನಗೆ ಬಹಳ ಸಂತೋಷವಾಯಿತು.

ನಿಮಗೆ ಸಹಾಯಕವಾದ ಉತ್ಪಾದಕ ಕಾರ್ಯ ಮಾಡುವುದು ಬಹಳ ಒಳ್ಳೆಯದು. ರಾಜ್ಯಕ್ಕೆ ಹೊರೆಯಾಗಿ ಬದುಕಲು ನೀವೆಲ್ಲರೂ ಒಲ್ಲೆವೆನ್ನಬೇಕು. ನೀವು ಹಾಲಿಗೆ ಸಕ್ಕರೆ ಹೋಗೋ ಹಾಗಿರಬೇಕು. ನಿಮ್ಮ ವಾತಾವರಣದೊಳಗೆ ನೀವು ಒಂದಾಗಿ ಸರಕಾರದಮೇಲೆ ಬಿದ್ದ ಭಾರವನ್ನು ಅವರೊಡನೆ ನೀವು ಹಂಚಿಕೊಳ್ಳಬೇಕು. ಎಲ್ಲ ಶಿಬಿರಗಳೂ ಸ್ವಾವಲಂಬಿಗಳಾಗಬೇಕು. ಆದರೆ ಅದೊಂದು ಅತ್ಯುಚ್ಚ ಧ್ಯೇಯ, ಅದನ್ನು ನಿಮ್ಮೆದುರಿಂದು ಇಡಲು ಬಹುಶಃ ಸಾಧ್ಯವಿಲ್ಲ. ಹಾಗಿದ್ದರೂ ಯಾವ ಕೆಲಸವನ್ನೂ ನೀವು ತಿರಸ್ಕರಿಸಕೂಡದೆಂದು ನಾನು ನಿಮ್ಮನ್ನು ಬಿನ್ನವಿಸಿಕೊಳ್ಳುತ್ತೇನೆ. ಕೈಗೆಸಿಕ್ಕಿದ್ದನ್ನು ಮಾಡುವದರಲ್ಲಿ ಸಂತೋಷ ತೆಗೆದುಕೊಳ್ಳಬೇಕು. ಹಾಗೆ ದುಡಿದು ನೀವು ಕುರುಕ್ಷೇತ್ರವನ್ನೊಂದು ಆದರ್ಶನಗರವನ್ನಾಗಿ ಮಾಡಬೇಕು.

ಬೆಚ್ಚನೆಯ ಬಟ್ಟೆ ಮತ್ತು ಹೊಂದಿಕೆಗಳಿಗಾ ನಾನು ಬಿನ್ನವಿಸಿಕೊಂಡುದು ಸಫಲವಾಯಿತು. ಸರದಾರರ ಬಿನ್ನಹಕ್ಕೂ ಕೂಡ ಜನರು ಸರಿಯಾಗಿ ಮನ್ನಣೆಯಿತ್ತರು. ಇದರಲ್ಲಿ ನಿಮ್ಮ ಭಾಗವು ಇದೆ. ಆದರೆ ನಿಮ್ಮೊಳಗೇ ನೀವು ಜಗಳಾಡಿದರೆ ಮತ್ತು ಕೆಲವರು ಅವರ ಪಾಲಿಗಿಂತ ಹೆಚ್ಚು ತೆಗೆದುಕೊಂಡರೆ, ನಿಮ್ಮಲ್ಲಿ ಎಲ್ಲ ಚೆನ್ನಾಗಿ ಸಾಗಲಾರದು. ಈಗಲೇ ನಿಮ್ಮ ಕಷ್ಟಬಹಳ ಹೆಚ್ಚಿನದಾದೆ, ಆದರೆ ತಪ್ಪುನಡೆಯಿಂದ ಅದು ಇನ್ನೂ ಹೆಚ್ಚಾಗಬಹುದು.

ನಿರಾಶ್ರಿತರ ಪುನರ್ನಿವೇಶನ

ಕಡೆಗೆ, ಪಾಕಿಸ್ತಾನದಲ್ಲಿ ಹೊಲಮನೆಗಳನ್ನು ಬಿಟ್ಟುಬಂದ ನೀವು ಎಲ್ಲ ಕಾಲಕ್ಕೂ ಅಲ್ಲಿಂದ ಬೇರಾಗಿ ಹೋದಿರೆಂದು ನಂಬುವವರಲ್ಲಿ ನಾನೊಬ್ಬನಲ್ಲ. ಅದೇಪ್ರಕಾರ ಹಿಂದುಸ್ತಾನವನ್ನು ನಿರ್ವಾಹವಿಲ್ಲದೆ ಬಿಟ್ಟುಹೋದ ಸಾವಿರಾರು ಮುಸಲ್ಮಾನರಾದರೂ ಹಾಗೆ ಎಂದಂದಿಗೂ ಹಿಂದಿರುಗದಂತಾದರೆಂದೂ ನಾನು ಹೇಳಲಾರೆ ನಾನಾದರೋ ಎಂದಿಗೂ ಸುಮ್ಮನೆ ಕುಳಿತುಕೊಳ್ಳುವದಿಲ್ಲ; ಎಲ್ಲರನ್ನೂ ಪುನರ್ನಿವೇಶನ ಮಾಡಲು, ಮರ್ಯಾದೆಯಿಂದ ಮತ್ತು ಸುರಕ್ಷಿತವಾಗಿ ಎಲ್ಲರೂ ಹೊರತಳ್ಳಲ್ಪಟ್ಟ ಸ್ಥಳದಿಂದ ಬರಲು ಅನುಕೂಲವಾಗುವಂತೆ ಮಾಡಲು ಹೆಣಗುತ್ತೇನೆ.

ಈ ಉದ್ದೇಶ ಕೈಗೂಡಿಸಲು ನಾನು ಬದುಕಿರುವವರೆಗೆ ಪ್ರಯತ್ನಿಸುತ್ತೇನೆ. ಸತ್ತವರನ್ನು ಬದುಕಿಸಲಾಗದು. ಆದರೆ ಬದುಕಿರುವವರಿಗಾಗಿ ನಾವು ದುಡಿಯಬಲ್ಲೆವು. ನಾವು ಹಾಗೆ ಮಾಡದಿದ್ದರೆ ಹಿಂದುಸ್ತಾನ ಪಾಕಿಸ್ತಾನಗಳೆರಡಕ್ಕೂ ಅದೊಂದು ಎಂದೂ ಅಳಿಯದಕಳಂಕವಾದೀತು. ಅದರಲ್ಲೇ ಇಬ್ಬರಿಗೂ ನಾಶ ಅಡಗಿದೆ.

೧೨—೧೧—೪೭

ಆಶಾಕಿರಣಗಳು

(ಮೋ. ಕ. ಗಾಂಧಿ)

ನಾಲ್ಕೂಸುತ್ತಲೂ ಆಶೆಯ ಭಗ್ನಾವಶೇಷಗಳೇ ರಾಶಿಬಿದ್ದಿದ್ದರೂ ಆ ರಾಶಿಯೊಳಗಿಂದ ತೂರಿಕೊಂಡು ಆಗೊಮ್ಮೆ ಈಗೊಮ್ಮೆ ಕೆಲ ಕೆಲವು ಆಶಾಕಿರಣಗಳು ದೃಷ್ಟಿಗೆ ಬೀಳುತ್ತಿವೆ. ಈ ವಿಚಾರಕ್ಕೆ ಆಧಾರವೆಂದರೆ ವಿರಾಮದ ನಿಮಿಷಗಳಲ್ಲಿ ಅಭ್ಯಸಿಸುವದಕ್ಕಾಗಿ ಎಚ್ಚರಿಕೆಯಿಂದ ಕಾಯ್ದಿಟ್ಟ ಹರಿಜನ ಪತ್ರಿಕೆಗೆ ಬಂದ ಪತ್ರವ್ಯವಹಾರದ ಪರಿಶೀಲನೆ.

ಅಂಥವುಗಳಲ್ಲಿ ಬೋಚಾಸನ್ ಗುರುಕುಲ ಶಾಲೆಯ ಶ್ರೀ ಶಿವಭಾಯಿ ಪಟೇಲರ ಪತ್ರವೂ ಒಂದು. ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾಡಿದ ಕೆಲಸಗಳ ಬಗೆಗೆ ಕೆಲವು ತಲೆಕೂಡಿಲ್ಲದ ಅಂಕೆ ಸಂಖ್ಯೆಗಳನ್ನು ಅವರು ಕಳಿಸಿದ್ದಾರೆ. ಅವರಿಗೆ (ಈಗ ಹರಿಜನ ಆಶ್ರಮವೆಂದು ಕರೆಯಲ್ಪಡುವ) ಹಿಂದಿನ ಸಾಬರಮತಿ ಸತ್ಯಾಗ್ರಹಾಶ್ರಮದ ಶ್ರೀಮತಿ ಗಂಗಾ ಬೆನ್ನರ ಹಾಗು ಆಜಯ್ಯ ಶ್ರೀ ರವಿಶಂಕರ ಮಹಾರಾಜರ ಮತ್ತು ತಂದೆಯನ್ನು ತೊರೆಯದ ಅವರ ಇಬ್ಬರು ಮಕ್ಕಳ ಸಮರ್ಥ ಸಹಕಾರವೂ ಇದೆ. ಮೊನ್ನೆಯ ಸಮಾರಂಭದ ಒಂದು ವೈಶಿಷ್ಟ್ಯವೆಂದರೆ ಹಿಂಜುವದಕ್ಕಾಗಿ ಯಾಂತ್ರಿಕ ಉಪಕರಣಗಳನ್ನು ಉಪಯೋಗಿಸುವ ಬದಲು “ತುನಾಯಿ” ಪದ್ಧತಿಯನ್ನು ಪ್ರಯೋಗಿಸಿದ್ದು. ಈ ಬಾಲ ಸಂಸ್ಥೆಯ ವ್ಯವಸ್ಥಾಪಕರನ್ನು ಮನಪೂರ್ವಕ ದೇಶದ ಆ ಭಾಗದಲ್ಲಿ ಹಿಂದುಳಿದ ಜನಾಂಗವೆಂದು ಪರಿಗಣಿಸಲ್ಪಡುವ ಜನರ ಮಕ್ಕಳಿಗಾಗಿ ಒಂದು ಬೋರ್ಡಿಂಗ್ ಗೃಹವನ್ನು ತೆರೆಯಲಾಯಿತು. ಪ್ರಾರಂಭಕ್ಕೆ ಅದರಲ್ಲಿ ಹತ್ತೇ ಹುಡುಗರನ್ನು ತೆಗೆದುಕೊಳ್ಳಲಾಗಿದೆ. ಸಾಮಾನ್ಯ ಶಾಲೆಗಳಲ್ಲಿ ನಾಲ್ಕು ವರ್ಷದ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೋಸ್ಕರ ನಡೆಯುತಿದ್ದ ಹಗಲು ಶಾಲೆಯನ್ನೂ ೧೦ ವರ್ಷಗಳ ನಂತರ ಪುನಃ ಪ್ರಾರಂಭಿಸಲಾಯಿತು. ಇನ್ನೂ ಆರುವರ್ಷಗಳ ಶಿಕ್ಷಣದ ಏರ್ಪಾಡು ಮಾಡುವ ನಿರೀಕ್ಷೆ ಅವರಿಗಿದೆ. ಹೀಗಾದರೆ ವಿದ್ಯಾರ್ಥಿಗಳಿಗೆ ಇಂಗ್ಲಿಷ ರಹಿತವೂ ಖಾದಿ ಕಾರ್ಯ, ಬಡಿಗತನ ಇಲ್ಲವೆ ಒಕ್ಕಲುತನದಲ್ಲಿ ಒಳ್ಳೇ ಅನುಭವ ಸಹಿತವೂ ಆದ ಮ್ಯಾಟ್ರಿಕ್ಯುಲೇಶನ್ ಮಟ್ಟದ ಜ್ಞಾನ ಪ್ರಾಪ್ತವಾಗುವದು. ವಿದ್ಯಾರ್ಥಿಗಳ ಹೆತ್ತವರು ತಮ್ಮ ಮಕ್ಕಳ ಒಳ್ಳೆಯ ನಡೆವಳಿಯನ್ನು ಕುರಿತು ಹಿಂದಿನಂತೆ ಉದಾಸೀನರಾಗಿರದೆ ಈ ವರ್ಷ ಹೆಚ್ಚು ಆಸ್ಥೆಯನ್ನು ತೋರಿಸುತ್ತಿದ್ದಾರೆ. ಪರಿಣಾಮವಾಗಿ ಮೊನ್ನೆ ಅಕ್ಟೋಬರದಲ್ಲಾದ ಸಮಾರಂಭದ ಹಿಂದಿನ ನಾಲ್ಕು ತಿಂಗಳುಗಳಲ್ಲಿ ಹೊಗೆ ಬತ್ತಿ ಸೇದುವ ಮತ್ತು ಟ್ಯಾನಿನ್ ಚಹದ ಪ್ರಬಲ ಚಟವನ್ನು ಅಂಟಿಕೊಂಡಿದ್ದ ವಿದ್ಯಾರ್ಥಿಗಳು ಆ ಸರ್ವನಾಶಕ ದುರ್ವ್ಯಸನಗಳನ್ನು ಬಿಟ್ಟುಕೊಟ್ಟರು. ತಮ್ಮ ಮಕ್ಕಳ ಕಳಕಳಿಯನ್ನು ನೋಡಿ ಹೆತ್ತವರೂ ಮನ ಕರಗಿದರು. ಅವರೂ ತಮ್ಮ ಬಾಯಿಯನ್ನು ಹೊಗೆ ನಳಿಗೆಗಳಾಗಿ ಮಾಡಿ ಜಠರಾಗ್ನಿಯನ್ನು ಆ ಸಿಡಿಸುವ ಈ ದುಷ್ಟ ಚಟವನ್ನು ತ್ಯಜಿಸಿದರು. ಹುಡುಗರು ಶಾಲೆಯಲ್ಲಿ ಪ್ರವೇಶ ಪಡೆದಾಗ ಒಂದು ನಿಮಿಷ ಕಾಲವೂ ಸುಮ್ಮನೆ ಕೂಡಲಾರದೆ ಬಾಯಿ ಮುಚ್ಚಿಕೊಳ್ಳಲಾರದವರಿದ್ದರು. ಆದರೆ ಈಗ ಒಂದು ತಾಸಿನವರೆಗೆ ಪರಿಪೂರ್ಣ ನಿಶ್ಶಬ್ದತೆಯೊಡನೆ ಕೈನೂಲು ತೆಗೆಯುವ ಆನಂದವನ್ನು ಅನುಭವಿಸಲು ಕಲಿತಿದ್ದಾರೆ. ಈ ಸಂಸ್ಥೆಯ ವಿಭಾಗದ ಪೂರ್ಣ ಆಡಳಿತವನ್ನು ವಹಿಸಿರುವ ಗಂಗಾಬೇನರು ಶುದ್ಧ ಆಕಳ ಹಾಲನ್ನು ಒದಗಿಸಲು ಒಳ್ಳೇ ಎಚ್ಚರಿಕೆ ವಹಿಸುತ್ತಾರೆ.

ಸಮಾರಂಭ ದಿನಗಳಲ್ಲಿ ವಿದ್ಯಾರ್ಥಿಗಳು ತೋರಿಸಿದ ಕಾರ್ಯಕ್ರಮಗಳು ಉಪಯುಕ್ತ ಸಂವಾದಗಳ ಅಭಿನಯದ ರೂಪದಲ್ಲಿದ್ದವು ಅವನು ನೋಡಲು ತುಂಬ ಜನರೂ ನೆರೆದಿದ್ದರು. ಇದಲ್ಲದೆ ಖಾದಿಯಾಗಿ ಹೊರಬೀಳಬೇಕಾದರೆ ಹತ್ತಿಯು ದಾಟ ಹೋಗಬೇಕಾದ ವಿವಿಧ ಅವಸ್ಥೆಗಳ ಆಡಂಬರ ರಹಿತ ಪ್ರಯೋಗಗಳನ್ನು ತೋರಿಸಲಾಯ್ತು. ಸುಂದರ ಕೈಬರಹದ ಮೇಲಾಟದಲ್ಲಿ ೨೩ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈಗೀಗ ಸುಂದರ ಕೈಬರಹಕ್ಕೂ ಒಳ್ಳೆಯ ಶಿಕ್ಷಣಕ್ಕೂ ಏನೂ ಸಂಬಂಧವೇ ಇಲ್ಲವೇನೋ ಎಂಬಷ್ಟು ಈ ವಿಷಯದ ಬಗ್ಗೆ ಔದಾಸೀನ್ಯ ಹಬ್ಬಿದೆಯಲ್ಲವೆ?

ಹೊಸದಿಲ್ಲಿ
೨೨—೧೧—೪೭

ಜಮ್ಮುವನ್ನು ಹಿಂದುಗಳಿಗೂ ಕಾಶ್ಮೀರವನ್ನು ಮುಸಲ್ಮಾನರಿಗೂ ಹಂಚಿಕೊಡುವ ಸುದ್ದಿ ದ್ದಿದೆಯೆಂದು ನಾನು ಕೇಳಿದ್ದೇನೆ. ಅಂಥ ವಿಭಜಿಸಿಕೆಯನ್ನು ನಾನು ಎಣಿಸಲಾರೆ. ಮುಸ್ಲಿಂ ಹಿಂದೀ ಸಂಸ್ಥಾನಗಳನ್ನು ಹಾಗೆ ಚೂರುಚೂರಾಗಿ ಒಡೆಯುವದನ್ನು ನಾನು ಮೆಚ್ಚಲಾರೆ.

—ಗಾಂಧೀಜಿ

ಹಳ್ಳಿಗಳ ಏಳಿಗೆ

ಬ್ರಿಟಿಶರು ಭಾರತ ಬಿಟ್ಟರು. ಅವರಿಗೆ ಸಂಬಂಧಿಸಿದ ರಾಜಕೀಯ ಉದ್ವೇಗವೂ ಈಗ ಕಡಿಮೆಯಾಗುತ್ತ ನಡೆದಿದೆ. ಎಂದೇ ಭಾರತದ ಪ್ರಾಂತೀಯ ಸರಕಾರಗಳೆಲ್ಲ ಮತ್ತೆ ಹಳ್ಳಿಗಳ ಏಳಿಗೆಯ ಬಗ್ಗೆ ಆಲೋಚಿಸ ಹತ್ತಿವೆ. ಅದ್ದರಿಂದ ಈ ಏಳಿಗೆ ಹೇಗೆ ಸಾಗಿದರೆ ಸಮ ಎಂಬ ಬಗ್ಗೆ ಒಂದು ನಿರ್ಧಾರಕ್ಕೆ ಬರುವದು ಅಗತ್ಯ. ಈ ಏಳಿಗೆಯ ಕಾರ್ಯಕ್ರಮವನ್ನು ಮುಖ್ಯವಾಗಿ ಮೂರು ಬಗೆಯಾಗಿ ಸಾಧಿಸಬಹುದು.

೧. ಪಟ್ಟಣಗಳಲ್ಲಿ ನೆಲಸಿದ ಗಿರಣಿಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸಲು ಹಳ್ಳಿಗಳೇ ತಕ್ಕವುಗಳೆಂದು ಗ್ರಹಿಸಿ ಹೊರಡುವದು.

೨. ಪಟ್ಟಣಗಳ ಸಿದ್ಧವಸ್ತುಗಳಿಗೆ ಹಳ್ಳಿಗರೇ ಪ್ರಮುಖ ಗಿರಾಕಿಗಳೆಂದು ತಿಳಿಯುವದು.

೩. ಹಳ್ಳಿಗರ ಸರ್ವಾಂಗೀಣ ಉನ್ನತಿಗೆ ಹಳ್ಳಿಗಳೇ ಸರ್ವ ಸನ್ನಾಹ ಸಜ್ಜಿತವೆಂದು ತಿಳಿದು ಹೊರಡುವದು.

ಹಳ್ಳಿಗಳು ಕಚ್ಚಾ ಪದಾರ್ಥಗಳ ತವರಾದರೆ

ಹಳ್ಳಿಗಳು ಪಟ್ಟಣಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗನನ್ನು ಒದಗಿಸುವ ತವರೆಂದು ತಿಳಿದರೆ, ಪಟ್ಟಣವಾಸಿಗಳ ಅಗತ್ಯಕ್ಕನುಗುಣವಾಗಿ ಆರ್ಥಿಕಸ್ವರೂಪವು ರಚನೆಗೊಳ್ಳಬೇಕಾಗುತ್ತದೆ. ಹಳ್ಳಿಗರು ತಮ್ಮ ಶ್ರಮದ ಫಲಕ್ಕೆ ವಂಚಿತರಾಗುವದೇ ಬಹಳ. ಕೊಡುವ ಪ್ರಯೋಜನವನ್ನೆಲ್ಲ ಕೊಟ್ಟು ಕೊನೆಗೆ ಅವರಿಗೆ ಬರಿಗೈ. ಹಳ್ಳಿಗಳ ಬಳಕೆಗೆ ಬೇಕಾಗದ ಸರಕುಗಳೇ ಅಲ್ಲಿಯ ಹೊಲಗಳು ಬೆಳೆಯಬೇಕು.

ರೊಕ್ಕದ ಮುಖನೋಡಿ ಈಗ ಹಳ್ಳಿಯ ಹೊಲಗಳಲ್ಲಿ ಬೆಳೆಗಳು ಬರತೊಡಗಿವೆ. ಯಾವ ಪದಾರ್ಥಕ್ಕೆ ಪೇಟಿಯು ? ಬೆಲೆ ಹೆಚ್ಚೊ ಅಂತಹ ಬೆಳೆಯನ್ನೇ ಹಳ್ಳಿಯ ಹೊಲಗಳು ಬೆಳೆಯಹತ್ತುವದು ಸಹಜ. ಈ ಮೂಕ ಹಳ್ಳಿಗರ ಕೊಳ್ಳುವ ಶಕ್ತಿ ಬೆಳೆಸುತ್ತೇವೆಂಬ ನೆವ ಹೇಳಿ ಪಟ್ಟಣಗಳು ಹಳ್ಳಿಗರನ್ನು ದುಡಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿವೆ. ಕೊನೆಗೆ ಇದರ ಪರಿಣಾಮ ಹಳ್ಳಿಗರಿಗೆ ಹಾನಿಕರವೆಂದು ತಿಳಿದರೂ ಪಟ್ಟಣಿಗರಿಗೆ ಬೇಕಾಗುವ ಉದ್ದೆಳೆಯಹತ್ತಿ, ಕಬ್ಬು, ತಂಬಾಕದಂತಹ ಕಚ್ಚಾ ಸರಕುಗಳನ್ನು ಬೆಳೆಯ ಹೋಗಿ ಹಳ್ಳಿಗರು ಆಹಾರ ಪದಾರ್ಥಗಳ ಬೆಳೆಯನ್ನು ಕೈಬಿಡುತ್ತಾರೆ. ಇದರಿಂದ ತಮ್ಮ ಆಹಾರಕ್ಕಾಗಿ ಹೆರವರ ಮುಖನೋಡುತ್ತ ಹಳ್ಳಿಗರಿಗೆ ಕೊಳ್ಳುವ ಆರ್ಥಿಕ ಶಕ್ತಿ ಇದ್ದರೂ ಅವರು ಉಪವಾಸ ಬೀಳುವ ಪ್ರಸಂಗ ಬಂದರೂ ಬರಹದುಡು. ಈ ಕೊಳ್ಳುವ ಶಕ್ತಿ ಸಹ ತೋರಿಕೆಯದೇ. ಯಾಕಂದರೆ ಮಿತಿಮೀರಿದ ಪೇಟಿಯ ಬೆಲೆಯೆದುರು ಹಳ್ಳಿಗರ ಕೈಲಿದ್ದ ಹಣಕ್ಕೇನಃ ಬೆಲೆಯಿದೆ ?

ಒಕ್ಕಲಿಗರ ಈ ಬಗೆಯ ಏಳಿಗೆಯಿಂದ ಹಳ್ಳಿಗಳು ಊರ್ಜಿತ ಸ್ಥಿತಿಗೆಂದೂ ಬರಲಾರವು. ಪಟ್ಟಣಿಗರ ಮತ್ತು ಗಿರಣಿಗಳ ಹಿತ ಸಾಧಿಸ ಹೋಗಿ ಹಳ್ಳಿಗರು ಹಾನಿಗೆ ಗುರಿಯಾಗುತ್ತಾರೆ. ಇಂದಿನ ಅರ್ಥಶಾಸ್ತ್ರವು ದುರ್ದೈವದಿಂದ ಇದೇ ಹಾದಿಯಿಂದ ಹೊರಟಿದೆ. ಎಂದಮೇಲೆ ಹಳ್ಳಿಗಳೆಂದು ಏಳಿಗೆಗೆ ಬರುವದು ?

ಹಳ್ಳಿಗರು ಮುಖ್ಯ ಗಿರಾಕಿಗಳಾದರೆ

ಮೇಲ್ಕಾಣಿಸಿದ ವಿಧದ ಹಳ್ಳಿಯ ಏಳಿಗೆಯ ಹಾಗೆಯೇ ಹಳ್ಳಿಗರು ಪಟ್ಟಣಗಳ ಹುಟ್ಟುವಳಿಗೆ ಮುಖ್ಯ ಗಿರಾಕಿಗಳಾಗಿರಬೇಕೆಂಬ ಬಗ್ಗೆಯೂ ಪ್ರಯತ್ನ ಸಾಗಿವೆ: ಇಲ್ಲಿಯೂ ಬೆಲೆಯ ಭ್ರಾಮಕ ಕಲ್ಪನೆ. ಪಟ್ಟಣದಲ್ಲಿ ಹುಟ್ಟಿದ ಸರಕುಗಳ ಬೆಲೆ ತೀರ ಸುಲಭವೆಂದು ಹಳ್ಳಿಗರು ಅವನ್ನು ಕೊಳ್ಳಹೋಗುತ್ತಾರೆ. ನಮ್ಮ ದೇಶದ ಪಟ್ಟಣಗಳಷ್ಟೇ ಅಲ್ಲ; ಇದರಲ್ಲಿ ವಿದೇಶಿಗರ ಸಾಮರ್ಥ್ಯ ಸಹ ಅಡಕವಾಗಿದೆ. ನಮ್ಮ ದೇಶದ ಅಪಾರ ಜನ ಸಂಖ್ಯೆಯಿಂದು ತಮ್ಮ ಅಪಾರ ಧನ ಪಿಪಾಸೆಯನ್ನು ತಣಿಸುವ ಗಿರಾಕಿಗಳೆಂದು ತಿಳಿದು ಎಲ್ಲರೂ ತಮ್ಮ ಸಿದ್ಧ ಸರಕುಗಳನ್ನೆಲ್ಲ ತಂದು ಇಲ್ಲಿ ಒಟ್ಟುವವರೇ. ಪಾಲಿಶಮಾಡಿದ ಅಕ್ಕಿ, ಗಿರಣಿಹೊಟ್ಟು, ಚಹ ಕಾಫಿ, ಸಕ್ಕರೆ, ಡಬ್ಬಿಯಲ್ಲಿಟ್ಟ ಆಹಾರ. ವನಸ್ಪತಿ ತುಪ್ಪ, ರಬ್ಬರ ಪಾದರಕ್ಷೆ, ಗಿರಣಿಯ ಬಟ್ಟೆ ಇವೇ ಮೊದಲಾದವು ಹಳ್ಳಿಗರಿಗೆ ಮೋಹಕ ವಸ್ತುಗಳಾಗಿವೆ. ಇದರಲ್ಲಿ ಹಳ್ಳಿಗರ ಹಿತವೆಳ್ಳಷ್ಟೂ ಇಲ್ಲ. ಹಳ್ಳಿಗರು ಬೇರೆ ಬೇರೆ ಉದ್ದಿಮೆಗಳಲ್ಲಿ ತೊಡಗುವದು ಇದರಿಂದ ತಪ್ಪುವದು. ಅವರ ಗಳಿಕೆಯ ಉಪಾಯಗಳು ಇಲ್ಲದಾಗಿ ಅವರ ಜೀವನ ಭಾರವೆಲ್ಲ ಅವರ ಭೂಮಿಗಳ ಮೇಲೆ ಬಿದ್ದುಬಿಡುವದು.

ಮೇಲಿನ ಎರಡೂ ಬಗೆಯ ಹಳ್ಳಿಯ ಏಳಿಗೆಯ ಕ್ರಮದಲ್ಲಿ ಹಳ್ಳಿಗರಿಗೇನು ಕೆಂಬ ಮಾತೇ ಮರೆಗೆ ಸರಿದಿದೆ, ಬಟ್ಟೆಯ ನಾಗರಿಕರಾಗಿ ಬಾಳುವ ಅವರ ವ್ಯಕ್ತಿತ್ವ ವರ್ಧನದ ಮಾತಂತೂ ದೂರವೇ.

ವ್ಯಕ್ತಿತ್ವ ಪ್ರಧಾನ ಹಳ್ಳಿಗರು

ಪಟ್ಟಣಗಳ ಭೌತಿಕ ಹಿತ ಹೆಚ್ಚಿನದೋ ಇಲ್ಲವೆ ಹಳ್ಳಿಗರ ಜೀವನ ಹಿತವೊ ಇದನ್ನು ನಾವು ಮೊದಲು ನಿರ್ಧರಿಸಬೇಕು. ಹಳ್ಳಿಗರ ಹಿತವೇ ಹೆಚ್ಚಿನದೆಂದುಕೊಂಡರೆ ಮೊದಲಿನ ಎರಡು ಬಗೆಯ ಪಟ್ಟಣಿಗರ ಭೌತಿಕ ಏಳಿಗೆಯ ಹಾದಿಯನ್ನು ತೊರೆದು ಹಳ್ಳಿಗರು ಪ್ರಜಾರಾಜ್ಯದ ಒಳ್ಳೆಯ ನಾಗರಿಕರಾಗಿ ಬಾಳುವ ಹಾದಿಯನ್ನು ಹುಡುಕಬೇಕು. ದುಡಿಮೆ ಕೆಲಸ ಬೊಗಸೆ ಇವುಗಳಿಂದ ಮನುಷ್ಯನು ಕ್ಷಣಕ್ಷಣಕ್ಕೂ ಹೊಸದನ್ನು ಕಲಿತು ತನ್ನನ್ನು ತಾನು ಎತ್ತರಿಸಿಕೊಳ್ಳುವನು. ಹೀಗೆ ಕೆಲಸದಲ್ಲಿ ತೊಡಗಿದಾಗ ಮನುಷ್ಯನು ತನಗೆ ಬೇಕಾದ ವಸ್ತುಗಳನ್ನು ನಿರ್ಮಿಸಿಕೊಳ್ಳುತ್ತಾನೆ. ಕಾರಣ ಹಳ್ಳಿಗನೆಂದರೆ ಸ್ವಯಂಪೂರ್ಣ ವ್ಯಕ್ತಿಯಾಗಿರಬೇಕು. ಇದನ್ನು ಸಾಧಿಸಲೋಸುಗ ನಮ್ಮ ಆರ್ಥಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳು ಪಲ್ಲಟಗೊಳ್ಳುವದಗತ್ಯ. ಹಳ್ಳಿಗನು ಹುಟ್ಟಿ ಮುಪ್ಪುಗಾಣುವ ವರೆಗೂ ಹೊಸ ಹೊಸ ಅನುಭವದ ಲಾಭ ಪಡೆದು ಅವನ ವ್ಯಕ್ತಿತ್ವವು ದಿನದಿನವೂ ವರ್ಧಿಷ್ಣುವಾಗಿ ಸಾಗಬೇಕು. ಅವನು ಒಳ್ಳೆಯ ನಾಗರಿಕನಾಗಬೇಕು. ಹಳ್ಳಿಯ ಆರ್ಥಿಕ ರಚನೆಯು ಮಾನವನ ಸರ್ವಾಂಗೀಣ ಉನ್ನತಿಗೆ ತಳಹದಿಯಾಗುವಂತೆ ಮಾರ್ಪಡಬೇಕು.

ಸಾಮಾಜಿಕ ವ್ಯವಸ್ಥೆ

ಸಾಮಾಜಿಕ ಜೀವನಕ್ಕೆ ಅತ್ಯಾವಶ್ಯಕವಾದ ನೀರಿನಪೂರೈಕೆ, ಶಾರಿಗೆ, ಆರೋಗ್ಯ ವಾಸಸೌಕರ್ಯ ಇತ್ಯಾದಿಗಳ ಬಗ್ಗೆ ಜನರು ತಾವೇ ಯೋಗ್ಯ ವ್ಯವಸ್ಥೆ ಮಾಡಿಕೊಳ್ಳುವಂತಾಗಬೇಕು. ತಮ್ಮ ಮಕ್ಕಳಿಗೆ ಕೈಗಾರಿಕೆಯ ಮೂಲಕ ಅವರೇ ಶಿಕ್ಷಣ ಕೊಡಬೇಕು. ಅವರು ಸದ್ಗುಣಿಗಳೂ ಸದಾಚಾರಿಗಳೂ ಆಗಿ ಬಾಳುವ ಜೀವನ ಕಲೆಯನ್ನೂ ಅವರೇ ತಮ್ಮ ಮಕ್ಕಳಿಗೆ ಕಲಿಸುವ ಹೊಣೆ ಹೊರಬೇಕು.

ಆರ್ಥಿಕ ವ್ಯವಸ್ಥೆ

ತಮಗೆ ಬೇಕಾಗುವ ಆಹಾರ, ವಸ್ತ್ರ, ವಾಸ ಮೊದಲಾದವನ್ನು ತಾವೇ ಒದಗಿಸಿಕೊಳ್ಳುವಂತೆ ಜನರು ಸಂಘಟಿತರಾಗಬೇಕು. ಇದನ್ನು ಸಾಧಿಸಲು ಪ್ರಮಾಣಬದ್ಧ ಪೋಷಣೆ ಕೊಡುವ ಆಹಾರ ಪದಾರ್ಥಗಳನ್ನು ಬೆಳೆಸುವ ಸಲುವಾಗಿ ನೀರಿನ ಅನುಕೂಲತೆಗನುಸರಿಸಿ ಭೂಮಿಯನ್ನೆಲ್ಲ ಜನರಿಗೆ ಇಂತಿಷ್ಟೆಂದು ಹಂಚಿಕೊಡಬೇಕು. ಜನರು ದ್ವಿದಳಧಾನ್ಯಗಳನ್ನು, ಎಣ್ಣೆಯ ಕಾಳುಗಳನ್ನು ಹಣ್ಣು ಹಂಪಲಗಳನ್ನು, ಕಾಯಿಪಲ್ಯಗಳನ್ನು ತಮಗೆ ಸಾಕಾಗುವಷ್ಟು ಬೆಳೆಯಬೇಕು. ಹೆಚ್ಚಾದವುಗಳನ್ನು ಜೀವನಾವಶ್ಯಕ ಇನ್ನಿತರ ಪದಾರ್ಥಗಳಿಗಾಗಿ ನೆರೆಯ ಊರು ಪಟ್ಟಣಗಳೊಡನೆ ವಿನಿಮಯ ಮಾಡಬೇಕು.

ಭೂಮಿಯಲ್ಲಿ ದುಡಿಯದವರು ಒಕ್ಕಲಿಗನು ಬೆಳೆದ ಪದಾರ್ಥಗಳಿಂದ ವಿಧವಿಧದ ನಿರ್ಮಾಪನ ಕೆಲಸದಲ್ಲಿ ತೊಡಗಿರಲೂ ಸಾಕಷ್ಟು ಆಸ್ಪದವಾಗುವದು. ಕಂಬಾರಿಕೆ, ಕುಂಬಾರಿಕೆ, ತೊಗಲು ಹದಗೊಳಿಸುವದು, ಎಣ್ಣೆತೆಗೆಯುವದು, ಬೆಲ್ಲಮಾಡುವದು, ನೂಲುವದು, ನೇಯುವದು, ಬಡಿಗತನ ಇವೇ ಮೊದಲಾದವು ಬಗೆಬಗೆಯ ಉಪಜೀವನದ ಉದ್ಯೋಗಗಳಾಗಬಲ್ಲವಲ್ಲದೆ ಜನರ ನಿರ್ಮಾಪಕ ಚೈತನ್ಯಕ್ಕೆ ಸಾಕಷ್ಟು ಅನುವುಗೊಡುವಂತಹವೂ ಆಗಿವೆ. ಹಳ್ಳಿಗಳಲ್ಲಿ ಜಾತ್ರೆಗಳು ಉತ್ಸವಗಳು ಏರ್ಪಡಿಸಲ್ಪಡಬೇಕು. ಇವು ಸರಕು ಮಾರಲು ಅನುಕೂಲ ಒದಗಿಸುವಂತೆ ಹಳ್ಳಿಯ ಸಾಂಸ್ಕೃತಿಕ ಜೀವನಕ್ಕೂ ಸಹಾಯಕವಾಗುವವು.

ರಾಜಕೀಯ

ಗ್ರಾಮಪಂಚಾಯತಿಗಳ ಮುಖಾಂತರವಾಗಿ ಈ ಎಲ್ಲ ಬಗೆಯ ಚಟುವಟಿಕೆಗಳೂ ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸಂಘಟಿಸಲ್ಪಡಬೇಕು. ಈ ಪಂಚಾಯತಿಗಳು ಜನರ ಸಾಮಾಜಿಕ ಆರ್ಥಿಕ ಜೀವನವನ್ನು ನಿಯಂತ್ರಿಸುವದಲ್ಲದೆ ಅವರಿಗೆ ನ್ಯಾಯದಾನವನ್ನೂ ಮಾಡುವವು, ಈ ಆಡಳಿತಕ್ಕೆ ಮತ್ತು ಹಳ್ಳಿಯ ಎಲ್ಲ ಚಟುವಟಿಕೆಗಳಿಗೆ ಬೇಕಾದ ಧನಸಂಗ್ರಹವನ್ನು ತಾನು ಮಾಡಿಕೊಳ್ಳುವದು.

ಸಮಾರೋಪ

ನಾವು ಮೂರನೆಯ ಬಗೆಯ ಹಳ್ಳಿಯ ಏಳಿಗೆಯ ಹಾದಿಯನ್ನು ಹಿಡಿದಲ್ಲದೆ ನಮ್ಮ ಪ್ರಜಾರಾಜ್ಯದ ಸುಗಮತೆಯ ಸಮಸ್ಯೆ ಬಿಡಿಸಲು ಸಾಧ್ಯವಿಲ್ಲ. ಯಾಕಂದರೆ ಹೀಗಲ್ಲದೆ ಜನರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳುವ ಶಿಕ್ಷಣ ಅವರಿಗೆ ಬರಲಾರದು. ನಮ್ಮ ದೇಶವಿಂದು ನಾಳಿನ ಯೋಜನೆಗಳಿಗೆ ಕೈಯಿಕ್ಕಿದೆ. ಅಭಿವೃದ್ಧಿಯ ಈ ಪ್ರಕರಣಗಳ ಬಗ್ಗೆ ಲಕ್ಷ್ಯ ಪೂರೈಸುವದವಶ್ಯ. ಅಂದರೆ ನಾವು ಬಯಸಿದ ಫಲಗಳು ನಮ್ಮ ಯೋಜನೆಗಳಿಂದ ಬಂದಾವು. ದೇಶದಲ್ಲಾಗಲೀ ಉಳಿದ ಜಗತ್ತಿನೊಡನಾಗಲೀ ಇಲ್ಲದ ತೊಡಕು ಉಂಟಾಗಬಾರದೆಂದಿದ್ದರೆ ಗ್ರಾಮಾಭಿವೃದ್ಧಿಯ ಯಾವ ಮಾರ್ಗ ಸಮನೆಂಬ ಬಗ್ಗೆ ವಿಚಾರಿಸಿಕೊಳ್ಳಲೇಬೇಕು. ಅದ್ದರಿಂದ ನಮ್ಮ ಗ್ರಾಮಾಭಿವೃದ್ಧಿಯ ಯೋಜನೆ ಸ್ವಯಂಪೂರ್ಣ ತತ್ವದ ಮೇಲೆ ನಿಲ್ಲಬೇಕು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ದೃಷ್ಟಿಯಿಂದ ಸಾಗಿದರೆ ಜೀವನಾವಶ್ಯವಾದ ಯಾವ ಪದಾರ್ಥದ್ದೂ ಕೊರತೆಯೆನಿಸುವದಿಲ್ಲ. ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿ ನೆಲಸಬೇಕಿದ್ದರೆ ಜೀವನಾವಶ್ಯಕ ಪದಾರ್ಥಗಳ ವಿಷಯದಲ್ಲಿ ಸ್ಪರ್ಧೆಯಿರಲೇಕೂಡದು.

ಈ ಬಗೆಯ ಹಳ್ಳಿಗಳ ಏಳಿಗೆಯ ಯೋಜನೆಯು ಸರಕಾರದ ಬೇರೆ ಬೇರೆ ಶಾಖೆಯವರು ತಮತಮಗೆ ತಿಳಿದಂತೆ ಮಾಡಿದ ಸಾಮ್ಯವಿರಹಿತ ಕೆಲಸವಾದರೆ ಸಾಗದು. ಇದು ಸ್ಥಾನಿಕ ತೇಜಿಯ ಕೆಲಸವಾದರೆ ಸಾಗದು. ಇದು ಸ್ಥಾನಿಕ ಸಹಕಾರದಿಂದ ಸ್ವಾವಲಂಬನ ತತ್ವಕ್ಕನುಗುಣವಾಗಿಬೇಕು. ಹಳ್ಳಿಗರ ಈ ಸಹಕಾರವೇ ಅವರ ಜೀವನ ಕಲೆಗೆ ಕಳಸವಿಡುವ ಶಿಕ್ಷಣವಾಗಿ ಬಿಡುವದು. ಇದೇನು ಸಾಮಾನ್ಯ ಫಲವೆ ?

(ಜೆ. ಸಿ. ಕುಮಾರಪ್ಪ)

ಬಗೆದಂತೆ ನಡೆ

(ಮೋ. ಕ. ಗಾಂಧಿ)

ಡಾ. ಮಹದ ರಾಯಡನ್ನರಿಂದ ರಾಜಕುಮಾರಿಯವರಿಗೆ ಬಂದ ಪತ್ರವೊಂದನ್ನು ಅವರು ನನಗೆ ಓದಲು ಕೊಟ್ಟಿದ್ದಾರೆ. ಅದರಿಂದ ಈ ಕೆಳಗಿನ ಅಂಶಗಳು ಸಂಗ್ರಾಹ್ಯವಾದುದರಿಂದ ಇಲ್ಲಿ ಕೊಡುತ್ತೇನೆ.

" ಜಗತ್ತಿನಲ್ಲೆಲ್ಲ ಅತ್ಯುತ್ತಮ ಕ್ರಿಶ್ಚಿಯನ್ನನಾದವನು ಕ್ರಿಶ್ಚಿಯನ್ನನಲ್ಲದಿರುವದು ನನಗೆ ಸೋಜಿಗವನ್ನುಂಟುಮಾಡಿದೆ. ಕಳೆದ ಎರಡು ಮೂರು ವಾರಗಳಿಂದ ನಾನು ಅಲ್ಬರ್ಟ ಶ್ವೀಝರನ (Albert Schowtzer) ಹೊಸ ಜೀವನ ಚರಿತವನ್ನೋದುತ್ತಿದ್ದೇನೆ. ಅದರಲ್ಲಿಯೂ ನನಗೆ ಮತ್ತೆ ಅದೇ ವೈಚಿತ್ರ್ಯ ಕಂಡುಬಂತು. ಶ್ವೀಝರನ ಹೆಸರು ಹಿಂದುಸ್ಥಾನದಲ್ಲಿ ಪರಿಚಿತವಾಗಿದೆಯೋ ಇಲ್ಲವೋ ನಾನರಿಯೆ. ಆದರೆ ಅವನ ಹಿರಿಮೆ ಜಗತ್ತಿನಲ್ಲಿ ಅದ್ವಿತೀಯವಾದುದೆಂದು ನನ್ನೆಣಿಕೆ...... ನಿಮಗೆ ಗೊತ್ತಿದೆಯೋ ಏನೊ—ಶ್ವೀಝರನನ್ನು "ಸಾಂಪ್ರದಾಯಿಕ" ಕ್ರಿಶ್ಚಿಯನ್ನರು ಯಾವಾಗಲೂ ಸಂಶಯದಿಂದಲೇ ನೋಡುತ್ತಬಂದಿರುವರು. ನಮ್ಮ ಪ್ರಭುವಿನ ಬಗೆಗೆ ಅವನ ಭಕ್ತಿ ನಿರತಿಶಯವಾಗಿದ್ದಿಲ್ಲವೆಂದು ಅವರ ಆಕ್ಷೇಪ. ಆದರೂ ಯೇಸುಕ್ರಿಸ್ತನ ಉಪದೇಶವನ್ನು ಅಷ್ಟು ನಿಃಸ್ವಾರ್ಥ ಆಸಕ್ತಿಯಿಂದಲೂ ಧೀರ ವಿಶ್ವಾಸದಿಂದಲೂ ಅನುಸರಿಸಿದ ಒಬ್ಬನೇ ಒಬ್ಬ ಕ್ರಿಶ್ಚಿಯನ್ನನಾದರೂ ಜಗತ್ತಿನಲ್ಲಿಲ್ಲ. ಅವನ ತತ್ವಜ್ಞಾನವನ್ನು ಓದಿದಾಗಂತೂ "ಜೀವಮಾತ್ರದ ಬಗ್ಗೆ ಅವನ ಗೌರವ" ವನ್ನು ಹೆಜ್ಜೆಹೆಜ್ಜೆಗೂ ಅವನು ನಝರೆತ್ತಿನ ಯೇಸುವಿನ ಉದಾಹರಣೆ ಕೊಡುವದನ್ನೂ ನೋಡಿ, ಓದುಗರ ಮನಸ್ಸಿನಲ್ಲಿ ಶ್ವೀಝರನಂತೆ ಯೇಸುವನ್ನು ಅತ್ಯುನ್ನತ ಪದವಿಗೇರಿಸಿದವನು ಬೇರೆ ಸಿಗಲಾರನೆಂದು ನಾನು ಮನಗಂಡೆ...... ಬೇರೆಷ್ಟೋ ತತ್ವಜ್ಞಾನಿಗಳಿಗಿಂತ ಅವನು ಒಂದು ವಿಧದಲ್ಲಿ ಮಾತ್ರ ಬೇರೆಯೆನ್ನಬಹುದು—ತಾನುಬಗೆದಂತೆ, ಬರೆದಂತೆ, ನುಡಿದಂತೆ ನಡೆದು ತೋರಿಸಬೇಕೆಂಬದು ಅವನ ಹಟ. ಅವನ ವಿಚಾರಗಳು ಸ್ಪಷ್ಟ ಭೀಕರ ಪ್ರಾಮಾಣಿಕತೆಯಿಂದ ತುಂಬಿರುವಂತೆ ನಮಗೇಕೆ ಅನಿಸುವದೆಂದು ನನಗೀಗ ಮನವರಿಕೆಯಾಗಿದೆ. ಆಚಾರದ ಗೊಡವೆಯಿಲ್ಲದೆ ನಾವು ವಿಚಾರದಲ್ಲೆ ಆಸಕ್ತರಾದರೆ ನಾನಾ ವಿಧದ ಅಸತ್ಯ ವಿಷಯಗಳನ್ನು ವಿಚಾರಿಸುತ್ತ ಹೋಗಲು ಸಾಧ್ಯವುಂಟು. ನಾವು ವಿಚಾರಿಸಿದಂತೆ ಚಾಚೂ ತಪ್ಪದೆ ಆಚರಿಸುವ ನಿರ್ಧಾರ ನಮ್ಮಲ್ಲಿದ್ದರೆ, ಆಗ ಎಷ್ಟೊಂದು ಜಾಗ್ರತದೃಷ್ಟಿಯಿಂದ, ಎಂಥ ಆಳವಾದ ಕಳಕಳಿಯಿಂದ ನಾವು ವಿಚಾರ ಮಾಡಬೇಕಾಗುವದು ! "

ಹೊಸದಿಲ್ಲಿ,
೮—೧೧—೪೭

ಅಪವ್ಯಯ

ಪರಮ ಪೂಜ್ಯ ಮಹಾತ್ಮಾಜೀ,

ಮಹಾತ್ಮಾಜಿಯವರಿಗೆ ವಂದನೆ. ನಮ್ಮ ದೇಶದ ಇತಿಹಾಸದಲ್ಲಿಯೆ ಸರಿಸಾಟಿಯುಳ್ಳದ ಅಮಂಗಲವೂ ದುರಂತವೂ ಎದುರಿಸಿವೆ. ಕಾಲದ್ದಕ್ಕೆ ಇನ್ನೊಂದಿದೆ ಜನತೆಯ ಅತ್ಯಂತ ಪ್ರಾಥಮಿಕ ಅವಶ್ಯಕತೆಯನ್ನು ಪೂರೈಸಲು ಬೇಕಾದ ಸರಕುಗಳ ಬೆಲೆ ಏರುತ್ತ ಹೋಗುವ ದುರಂತವದು. ಕಾಗದ, ನಿಕೆಲ್ ಮತ್ತು ಅಂಥ ಇರುವವುಗಳಿಂದ ವಸ್ತುಗಳಿಂದೊಡಗೂಡಿದ ಚಲಾವಣೆಯ ಅತಿರೇಕ ಪ್ರಸಾರವೊಂದೆಡೆ, ನಿಜವಾದ ಧನವೆನಿಸುವ ಸರಕುಗಳ ಕೊರತೆಯೊಂದೆಡೆ ಸೇರಿ ಈ ಪರಿಣಾಮಕ್ಕೆ ಕಾರಣವಾಗಿವೆ. ಇದನ್ನು ಅತಿಪ್ರಸರಣವೆನ್ನಿರಿ, ಬೆಲೆಗಳ ಏರಿಕೆಯೆಂದು ಬೇಕಾದರೆ ಕರೆಯಿರಿ. ಸಮಾಜದಲ್ಲಿ ಹಬ್ಬಿದ ಅನೇಕ ರೋಗಗಳಿಗೆ ಇದೇ ಮೂಲ ಕಾರಣ; ಸಂಪುಗಳು, ಕಳ್ಳಪೇಟೆ ಲಂಚಗುಳಿತನ, ಸಿರಿವಂತರಲ್ಲದ ಕೋಟ್ಯಂತರ ಜನರ ಉಪವಾಸ ಮತ್ತು ಎಲ್ಲರಿಗೂ ತಿಕ್ಕಿಬಿದ್ದ ವೈಥೆ ಇವೆಲ್ಲ ಅದರಿಂದಲೇ ಹುಟ್ಟಿವೆ. ಕಾರಕೂನನನ್ನು ಸಂಪೇಕೆ ಹೂಡಿದೆಯೆಂದು ಕೇಳಿರಿ. ತನ್ನ ತಿಂಗಳ ಕೂಲಿ ಎಂಟು ದಿನದ ವೆಚ್ಚಕ್ಕೆ ಸಾಲುವದಿಲ್ಲೆನ್ನುತ್ತಾನೆ. ಲಂಚವನ್ನೇಕೆ ತೆಗೆದುಕೊಳ್ಳುವಿಯೆಂದು ಸರಕಾರಿ ಅಧಿಕಾರಿಯನ್ನು ಕೇಳಿರಿ. ಅವನ ಉತ್ತರವೂ ಅದೇ. ಕಳ್ಳಪೇಟೆಯವನನ್ನು ಈ ಸಮಾಜಘಾತಕ ಕಾರ್ಯವೇಕೆಂದು ಕೇಳಿರಿ: ಅವನೂ ನನಗೆ ಬೇಕಾದ ವಸ್ತುಗಳಿಗೆ ಮೊದಲಿಗಿಂತ ಎಷ್ಟೋ ಪಾಲು ಹೆಚ್ಚು ತರಬೇಕಾಗುತ್ತಿದೆಯೆಂದು ಸಿಟ್ಟಿದು ನುಡಿಯುತ್ತಾನೆ.

ಇದಕ್ಕೆ ಪರಿಹಾರವೇನು? ಅತ್ಯಂತ ಸರಳ ಪರಿಹಾರೋಪಾಯವೆಂದರೆ ಬೆಲೆಗಳನ್ನು ಹಿಡಿತಕ್ಕೆ ಸಿಗುವಂತೆ ಕೆಳಗಿಳಿಸಬೇಕು. ಇದಕ್ಕೆ ಚಲಾವಣೆಯಲ್ಲಿರುವ ನಿರರ್ಥಕ ಹಣವನ್ನು ಹಿಂತೆಗೆದುಕೊಳ್ಳುವದೊಂದೇ ಹಾದಿ. ಚಲಾವಣೆಯ ಉಬ್ಬರವನ್ನು ಕಡಿಮೆ ಮಾಡಬೇಕಾದರೆ ವೆಚ್ಚ ಕಡಿಮೆ ಉಳಿಕೆ ಹೆಚ್ಚು ಮಾಡಬೇಕು. ದೇಶದ ಸರಕಾರವೇ ಎಲ್ಲರಿಗಿಂತಲೂ ದುಂದುಗಾರ; ನಿರರ್ಥಕವಾದ ಹಣದ ಚಲಾವಣೆ ಹೆಚ್ಚಿದ್ದರ ಮೂಲ ಹೊಣೆಯಾದರೂ ಅದರ ಮೇಲೆಯೆ ಇದೆ. ಅದರಿಂದ ಇಂಗ್ಲಂಡ್ ಫ್ರಾನ್ಸುಗಳ ಸರಕಾರಗಳು ಮಿತವ್ಯಯದ ಮುಂಗಡ ಪತ್ರಗಳನ್ನು ಸ್ವೀಕರಿಸಿಕೊಂಡು ನಿರರ್ಥಕ ವೆಚ್ಚಗಳನ್ನು ಸಿಕ್ಕಸಿಕ್ಕಂತೆ ಕತ್ತರಿಸುತ್ತಿವೆ. ನಮ್ಮ ದೇಶದ ಪ್ರಸಂಗ ಮಾತ್ರ ತದ್ವಿರುದ್ಧ. ಏನೇನೂ ಹುಟ್ಟುವಳಿಯಿಲ್ಲದ ಹೊಸ ಖಾತೆಗಳನ್ನು ಸೃಷ್ಟಿಸುವದಕ್ಕೂ ಹಳೆಯ ಖಾತೆಗಳ ವಿಸ್ತರಣೆಗೂ ಆಗುವ ಅಗಾಧ ಅಪವ್ಯಯವನ್ನು ಎಣಿಸಿದರೆ ತಲೆ ತಿರುಗುತ್ತದೆ. ಅನೇಕ ಉದಾಹರಣೆಗಳಲ್ಲಿ ಒಂದನ್ನೆ ತೋರಿಸಿ ಕೊಡಬೇಕಾದರೆ ಅನಂತಪುರದಲ್ಲಿ ಎರಡು ಅಗ್ನಿಶಾಮಕ ಯಂತ್ರಗಳಿವೆ. ಅವರ ಸಿಬ್ಬಂದಿ ೧೩ ಜನರಿಂದ ಕೂಡಿದೆ; ತಲಾ ೧೨೦ ರೂಪಾಯಿ ಸಂಬಳ ಸಲ್ಲುತ್ತದೆ. ಅವರ ಮೇಲೆ ಅಧಿಕಾರಿಯೊಬ್ಬ ಅವನ ಸಂಬಳ ತಿಂಗಳಿಗೆ ೩೦೦. ಈ ಎಲ್ಲ ಜನರಿಗೆ ಇ... ವರ್ಷದಲ್ಲಿ ಒಂದು ಕ್ಷಣದ ಕೆಲಸವಾದರೂ ಕಾ... ಟೆಲಿಫೋನ್ ವ್ಯವಸ್ಥೆ ಇಲ್ಲಿಲ್ಲ. ಯಾರಾದರೂ ಓಡುತ್ತ ಹೋಗಿ ವರ್ತಮಾನ ಕೊಟ್ಟು ... ಯಂತ್ರಗಳು ಅಗ್ನಿಶಾಮಕ ಕೇಂದ್ರದಿಂದ ಬ... ಬೇಕಾದರೆ ಇಲ್ಲಿ ಬೆಂಕಿ ಹತ್ತಿದ ಗುಡಿಸಲು ಬೂ... ಯಾಗಿರುತ್ತದೆ. ಮೊನ್ನೆ ಮಹಾತ್ಮಾಜಿಯವ... ಗವರ್ನರರಿಗೆ ಉಪದೇಶ ಕೊಡುತ್ತ ಎಲ್ಲರಿಗ... ನಿಲುಕುವಂಥ ಸಾಮಾನ್ಯ ಗುಡಿಸಲುಗಳ... ಖಲೀಫ ಉಮರನಂತೆ ಗವರ್ನರರು ವಾ... ಬೇಕೆಂದೂ ದುಂದುಗಾರಿಕೆ ಕಡಿಮೆಮಾಡ... ಕೆಂದೂ ಜನ ಸೇವೆಯಲ್ಲಿ ನಿರತರಾಗಿರಬೇಕೆಂದು ಹೇಳಿದ್ದು ವಿಹಿತವೆ. ಎಷ್ಟೋ ಪ್ರಸಂಗದಲ್ಲಿ ಮಹಾತ್ಮಾಜಿಯ ಉಪದೇಶವೆತ್ತಲೋ ಸಂಬ... ಪಟ್ಟವರ ನಡೆವಳಿಕೆಯೆತ್ತಲೊ ಆಗುವದುಂಟು. ಆದರೂ ಅವರ ವಾಣಿ ಪರಿಣಾಮಕಾರಿಯಾಗ... ದೆಂದು ನನ್ನ ಭರವಸೆ. ಏಕಂದರೆ ಸತ್ಯದ ... ಯೆಂದರೆ ಅದೊಂದೆ ಅದುದರಿಂದ ಮಹಾತ್ಮಾಜಿಯವರು ನಮ್ಮ ಕುಸಿದು ಬೀಳುತ್ತಿರುವ ಆ... ಕಟ್ಟಡವನ್ನು ಹೇಗಾದರೂ ಉಳಿಸಿ ಕೋಟ್ಯಂತರ ಜನರ ದೇಹಾತ್ಮಗಳೆರಡೂ ನಷ್ಟವಾಗ... ಪ್ರಸಂಗವನ್ನು ತಪ್ಪಿಸಬೇಕೆಂದು ನಾನು ಕಳ... ಯಿಂದ ಬಿನ್ನೈಸುವೆ. ಎಷ್ಟೋ ಸಮಸ್ಯೆಗ... ಮಹಾತ್ಮಾಜಿಯವರಲ್ಲಿ ಸರಿಯಾದ ಉ... ಯುಗಳಿವೆ. ಇದಕ್ಕೂ ಒಂದನ್ನು ತಿಳಿಸ... ಯಲು ಅವರಿಗೆ ಸಾಧ್ಯವಾಗದೆ?

ಅನಂತಪುರ ಇತಿ
೧೪—೧೧—೪೭ ಜೆ. ಸೋಮ...
ಬಾರ್ ಅಟ್ ಲಾ...

ನಾಲ್ಕು ಮಾತು — ರಂಗನಾಥ ದಿವಾಕರ

ಮಹಾಕರ್ನಾಟಕ

ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆ ದಿನ ದಿನಕ್ಕೆ ಹೆಚ್ಚು ಮಹತ್ತ್ವದ ಸ್ವರೂಪವನ್ನು ತಾಳುತ್ತಿದೆ. ಕೇಂದ್ರವು ಒಂದು ಪ್ರತಿಬಂಧಕವಾಗಿಬಿಟ್ಟಿತು ಎಂದು ಮದ್ರಾಸದ ಒಂದು ಪತ್ರಿಕೆಯವರು ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ನಾವು ಒಂದೆರಡು ಮಹತ್ವದ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ನಡೆಯುವದು ಅವಶ್ಯ. ಮೈಸೂರು ಹಾಗೂ ಇತರ ಕನ್ನಡ ಸಂಸ್ಥಾನಗಳನ್ನು ಸಹ ಒಳಗೊಂಡು ಮಹಾ ಕರ್ನಾಟಕ ನಿರ್ಮಾಣದ ಪ್ರಶ್ನೆಯು ಈಗ ಮುಂದೆ ಬಂದಿದೆ. ಆದರೆ ಅದಕಾಗಿ ಯೂನಿಯನ್ನ ಕರ್ನಾಟಕ ಪ್ರಾಂತ ನಿರ್ಮಾಣದ ಕೆಲಸವನ್ನು ತಡೆಯುವದು ಸಮಂಜಸವಾಗಲಾರದು. ಈ ಕೆಲಸವನ್ನು ಮುಂದರಿಸುತ್ತಲೆ ಹೋಗುವದು ಯೋಗ್ಯವು. ಎರಡನೆಯ ಮಹತ್ವದ ಮಾತೇನೆಂದರೆ, ಭಾಷಾನುಗುಣ ಪ್ರಾಂತವೆಂದರೆ ಬೇರೆ ಒಂದು ರಾಷ್ಟ್ರ ಅಥವಾ ರಾಜ್ಯ ನಿರ್ಮಾಣವಲ್ಲ. ಹಿಂದುಸ್ಥಾನವೇ ನಮ್ಮ ರಾಷ್ಟ್ರ (ನೇಶನ್). ಇಂಡಿಯನ್ ಯೂನಿಯನ್ನೆ ನಮ್ಮ ರಾಜ್ಯ (ಸ್ಟೇಟ). ಭಾಷಾನುಗುಣ ಪ್ರಾಂತರಚನೆಯೆಂಬುದು ಒಂದು ಅಂತರಿಕ ವ್ಯವಸ್ಥೆ. ಈ ಮಾತನ್ನು ಇಲ್ಲಿ ಹಾಗೂ ಈಗ ಹೇಳುವ ಕಾರಣವೇನೆಂದರೆ ಹಲವರು ಈ ಪ್ರಾಂತಗಳಿಗೆ 'ರಾಷ್ಟ್ರ' ಇಲ್ಲವೆ 'ಹೋಮಲ್ಯಾಂಡ' ಎನ್ನುತ್ತಿರುವರು. ಹಾಗೂ ಅವರ ದೃಷ್ಟಿಯಿಂದ ಬೇರೆ ಭಾಷೆಯ ಪ್ರಾಂತದವರೆಲ್ಲ ಪರರು ಅಥವಾ ಪರಕೀಯರು ಎನಿಸುವರು. ಈ ವಿಚಾರಸರಣಿಯು ಪ್ರಾಂತದ ಹಾಗೂ ರಾಷ್ಟ್ರದ ದೃಷ್ಟಿಯಿಂದ ವಿಘಾತಕವಾಗುವದು. ಇದು 'ನಾಜಿ' ವಿಚಾರ ಸರಣಿಯನ್ನು ಇಲ್ಲವೆ 'ಪಾಕಿಸ್ತಾನ' ವಿಚಾರ ಸರಣಿಯನ್ನು ಹೋಲುವದು ಹಾಗೂ ಅನುಸರಿಸುವದು. ನಮಗೆ ಹಿಂದುಸ್ಥಾನದ ಐಕ್ಯವು ಉಳಿಯಬೇಕು. ಹಾಗೂ ಅದರ ಅಖಂಡತ್ವದ ಮೂಲಕ ಪ್ರಾಂತಗಳಿಗೆ ಉಂಟಾಗುವ ಬಲ ದೊರೆಯಬೇಕು ಎಂದು ನಮಗೆ ಎನಿಸುತ್ತಿದ್ದರೆ ನಾವು ಪ್ರಾಂತದವರೆಲ್ಲ ಸೇರಿಕೊಂಡಿರುವವರು ಎಂಬ ಭಾವನೆಯಿಂದ ನಡೆದುಕೊಳ್ಳಲಿಕ್ಕೆ ಬೇಕು. ಒಂದೇ ಭಾಷೆಯವರದೊಂದು ಪ್ರಾಂತವಿದ್ದರೆ ರಾಜ್ಯವ್ಯವಸ್ಥೆಯ ದೃಷ್ಟಿಯಿಂದ ಬಹಳ ಅನುಕೂಲತೆ ಉಂಟಾಗುವವು. ಆದುದರಿಂದಲೆ ಭಾಷಾನುಗುಣ ಪ್ರಾಂತ ರಚನೆ ಬೇಕು ಹೊರತು ನಾವು ಪ್ರತ್ಯೇಕ ರಾಷ್ಟ್ರವಿರುವೆವು, ಇಲ್ಲವೆ ನಮಗೊಂದು ಸ್ವತಂತ್ರ ರಾಜ್ಯ ಬೇಕು, ಪ್ರತ್ಯೇಕವಾಗಬೇಕು ಎಂದು ಹೇಳುವದು ದೊಡ್ಡ ತಪ್ಪಾಗುವದು. ಮೂರನೆಯ ಮಹತ್ವದ ಮಾತೇನೆಂದರೆ, ಮಹಾಕರ್ನಾಟಕ ನಿರ್ಮಾಣ ಕಾರ್ಯದಲ್ಲಿ ಮೈಸೂರ ಮಂತ್ರಿಮಂಡಲದವರು ಹಾಗೂ ಮೈಸೂರ ಜನತಾ ಪ್ರತಿನಿಧಿಗಳು ಹೆಚ್ಚು ಮುಂದೆ ಬಂದು ಕೆಲಸಮಾಡಬೇಕಾಗುವದು. ಅವರು ಇದನ್ನು ಹೆಚ್ಚು ಮನಸಿನ ಮೇಲೆ ತೆಗೆದುಕೊಳ್ಳದಿದ್ದರೆ ಆ ಪ್ರಶ್ನೆ ಮುಂದರಿಯುವದು ಕಠಿಣವಾಗುವದು. ಯಾಕೆಂದರೆ ಸಂಸ್ಥಾನವೆಂದು ಉಳಿದಿದ್ದ ಅಧಿಕಾರಗಳ ಪ್ರಶ್ನೆ ಹಾಗೂ ಶ್ರೀ ಮಹಾರಾಜರ ಅಧಿಕಾರ ಮರ್ಯಾದೆಗಳ ಪ್ರಶ್ನೆಗಳನ್ನು ಅವರೇ ಹೆಚ್ಚು ವಿಚಾರಿಸಬೇಕಾಗಿದೆ. ಯೂನಿಯನ್ ಕರ್ನಾಟಕದ ಪ್ರತಿನಿಧಿಗಳು ಆ ಬಗ್ಗೆ ಅದರ ವಿವರವನ್ನು ಬೇರೆ ಹೇಳಬೇಕಾಗಿಲ್ಲ.

ಅಧ್ಯಕ್ಷರ ರಾಜೀನಾಮೆ:—

ಕಾಂಗ್ರೆಸ್ ಅಧ್ಯಕ್ಷರ ರಾಜೀನಾಮೆ ಇದು ಒಂದು ವಿಷಯವಷ್ಟೆ. ಶ್ರೀ. ಆಚಾರ್ಯ ಕೃಪಲಾನಿಯವರು ಸರಕಾರಕ್ಕಾಗಿ ಒಂದು ದೊಡ್ಡ ಸೇವೆ ಕೊಟ್ಟು ರಾಜೀನಾಮೆಯನ್ನು ಎ. ಐ. ಸಿ. ಸಿ.ಗೆ ಒಪ್ಪಿಸಿದರು. ಸಭೆ ಗುಪ್ತವಾಗಿ ನಡೆಯಬೇಕು ಎಂದು ಮೊದಲೇ ಗೊತ್ತಾಗಿತ್ತು. ಆದ್ದರಿಂದ ರಾಜೀನಾಮೆಯಲ್ಲಿ ನಮೂದಾದ ಮುದ್ದೆಗಳ ಚರ್ಚೆಯಾಗಲಿ, ವಿಚಾರ ಎ. ಐ. ಸಿ. ಸಿ. ಯಲ್ಲಿ ಆಗಲಿಲ್ಲ ಎಂಬುದು ವಿಷಾದದ ಸಂಗತಿ. ಕಾಂಗ್ರೆಸಿನ ಅಧ್ಯಕ್ಷರು ಹಾಗೂ ಕಾರ್ಯನಿರ್ವಾಹಕ ಮಂಡಲಿ ಒಂದು ಕಡೆ, ಮುಖ್ಯ ಅಧಿಕಾರಾರೂಢವಾದ ಕಾಂಗ್ರೆಸ್ ಪಕ್ಷದ ಮಂತ್ರಿಮಂಡಲ ಇನ್ನೊಂದು ಕಡೆ—ಇವುಗಳ ಪರಸ್ಪರ ಸಂಬಂಧಗಳು ಏನಿರಬೇಕು, ಯಾರು ಯಾರನ್ನು ಯಾವಾಗ ಸಲಹೆಗೆ ಕೇಳಬೇಕು, ಯಾರು ಹೆಚ್ಚು ಯಾರು ಕಡಿಮೆ — ಇದೇ ಈ ಸಂದರ್ಭದಲ್ಲಿ ಮುಖ್ಯವಾದ ಮಾತು ಇರುವದು. ಕಾಂಗ್ರೆಸ್ ಸಂಸ್ಥೆಯ ಹಾಗೂ 'ಕಾಂಗ್ರೆಸ್ ಪಕ್ಷದ ಭವಿತವ್ಯದ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಈ ಪ್ರಶ್ನೆ ಕೇಂದ್ರ ಸರಕಾರದಲ್ಲಿಯಷ್ಟೇ ಬರುವದಿಲ್ಲ. ಪ್ರಾಂತಿಕ ಸರಕಾರಗಳಲ್ಲಿ ಕೂಡ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳೊಡನೆ ಅವುಗಳ ಸಂಬಂಧಗಳು ಹೇಗಿರಬೇಕು ಎಂಬುದು ದೊಡ್ಡ ಮಹತ್ವದ ಪ್ರಶ್ನೆಯಾಗಿದೆ. ಮನಸು ಬಿಚ್ಚಿ ಆ ಸಂಬಂಧಗಳ ಚರ್ಚೆ ಮಾಡಿ ಹಲವು ನಿಯಮ ನಿಬಂಧನೆಗಳನ್ನಾಗಲಿ, ಸಂಪ್ರದಾಯಗಳನ್ನಾಗಲಿ (ಕಾನ್ವೆನ್ಶನ್ಸ್) ನಿರ್ಮಿಸದೆ ಹೋದರೆ ತಾತ್ಕಾಲಿಕ ತಿಕ್ಕಾಟಗಳು ಈಗ ನಡೆದಂತೆ ನಡೆದು ತನ್ನಷ್ಟಕ್ಕೆ ತಾನೆ ಪರಿಸ್ಥಿತಿ ಯಾವದೊಂದು ಗತಿಗೆ ಹತ್ತುವದು. ಹಾಗೆ ಆಗುವದು ಹಿತಕರವಲ್ಲ. ಅದರಿಂದ ಮನಸ್ತಾಪಾದಿಗಳು ಆಗಿ ಒಟ್ಟಿಗೆ ಕಾಂಗ್ರೆಸ್ ಸಂಸ್ಥೆಗೆ ಹಾನಿಯಾಗುವದು. ಈ ವರೆಗೆ ತ್ಯಾಗಪೂರ್ವಕವಾಗಿ ಹೋರಾಟ ಹೂಡಿ, ಜನರೊಡನೆ ಸಂಬಂಧ ಸಂಪರ್ಕಗಳನ್ನಿಟ್ಟುಕೊಂಡು, ಅವರ ಬೆಂಬಲದಿಂದ ಸ್ವಾತಂತ್ರ್ಯವನ್ನು ಗಳಿಸಿದ ಸಂಸ್ಥೆಯ ಶಕ್ತಿಯು ಕ್ಷೀಣವಾಗುವದು ಯಾವದೇ ರೀತಿ ಇಷ್ಟವಿಲ್ಲ. ಅದೇ ಕಾಲಕ್ಕೆ ರಾಜ್ಯಕಾರಭಾರದ ನಿತ್ಯವ್ಯವಹಾರದಲ್ಲಿ ಕಾಂಗ್ರೆಸ್ ಸಂಸ್ಥೆಯವರು ಕೈಹಾಕುತ್ತ ಹೋದರೆ ರಾಜ್ಯಕಾರಭಾರವು ಸುಸೂತ್ರ ಸಾಗುವದು ಸಾಧ್ಯವಿಲ್ಲ. ಈ ಎರಡೂ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಮಂಜಸ ರೀತಿಯಿಂದ ಈ ತೊಡಕನ್ನು ಬಿಡಿಸಲಿಕ್ಕೆ ಬೇಕು. ಹಾಗೆಯೆ ಈ ಪ್ರಶ್ನೆಯನ್ನು ಗಾಳಿಗೆ ಬಿಟ್ಟುಬಿಡುವದು ವಿಹಿತವಾಗುವದು. ನಿಜವಾಗಿ ಸಾಮಾನ್ಯ ಧೋರಣೆ, ಸರಕಾರವು ಯಾವ ಹಾದಿಯಿಂದ ಹೋಗಬೇಕು, ವಿಶಿಷ್ಟ ಪರಿಸ್ಥಿತಿಯಲ್ಲಿ ಯಾವ ಕ್ರಮವನ್ನು ಅನುಸರಿಸಬೇಕು, ಎಂಬ ಮಾತುಗಳ ಬಗ್ಗೆ ಸರಕಾರ ಹಾಗೂ ಕಾಂಗ್ರೆಸ್ ಕಮಿಟಿಗಳು ಇವರ ನಡುವೆ ಏಕಮತವಿರಬೇಕು. ಇಲ್ಲದೆ ಹೋದರೆ ಒಂದೇ ಸಂಸ್ಥೆಯು ಎರಡು ಮುಖದಿಂದ ಬೇರೆ ಬೇರೆ ಮಾತುಗಳನ್ನಾಡಿದಂತಾಗುವದು. ಜನರಲ್ಲಿ ಬುದ್ಧಿಭೇದವುಂಟಾಗುವದು. ಹೀಗೆ ಬಹಳ ಮಾತುಗಳಲ್ಲಿ ಆಯಿತೆಂದರೆ ಕಾಂಗ್ರೆಸ್ಸು ಬೇರೆ ಸರಕಾರ ಬೇರೆ ಎಂದು ಆಗುವದು. ಇದು ಕಾಂಗ್ರೆಸ್ ಸರಕಾರ ಎಂಬುವದು ಅರ್ಥಹೀನವಾಗುವದು. ಕೊನೆಗೆ ಈ ಎರಡೂ ಸಂಸ್ಥೆಗಳ ಬೆಸಿಕೆ ತಪ್ಪಿಹೋಗುವದು. ಅವನ್ನು ತಪ್ಪಿಸುವದು ಎಲ್ಲರ ಕರ್ತವ್ಯವಿರುವದು.

ಕಂಟ್ರೋಲುಗಳು:—

ಆದಷ್ಟು ಬೇಗನೆ ಕಂಟ್ರೋಲ್‌ಗಳು ಹೋಗಬೇಕು ಎಂದು ಎ. ಐ. ಸಿ. ಸಿ. ಯವರು ಒಂದು ಗೊತ್ತುವಳಿ ಮಾಡಿದರು. ಮಹಾತ್ಮಾ ಗಾಂಧಿಯವರೂ ಈಚೆಗೆ ನಿಯಂತ್ರಣಗಳೆಲ್ಲ ಹೋಗಬೇಕೆಂದು ಪ್ರತಿಪಾದಿಸುತ್ತಿರುವರು. ಆ ಮೂಲಕ ದೇಶದಲ್ಲೆಲ್ಲ ನಿಯಂತ್ರಣದ ವಿರುದ್ಧ ವಾತಾವರಣವುಂಟಾಗಿದೆ. ಕಳ್ಳಪೇಟೆ, ಲಂಚಗುಳಿತನ ಇವು ನಿಯಂತ್ರಣದ ಪರಿಣಾಮಗಳು ಎಂದು ಜನರು ಕೂಗಿಕೊಳ್ಳುತ್ತಿರುವರು. ಈ ಎಲ್ಲ ಮಾತುಗಳಲ್ಲಿ ಸಾಕಷ್ಟು ಸತ್ಯಾಂಶವಿದೆ. ಆದರೆ ನಿಯಂತ್ರಣಗಳನ್ನು ತೆಗೆದೊಡನೆ ಇಲ್ಲಿ ಸುಗ್ಗಿಯೆ ಸುಗ್ಗಿಯಾಗುವದು ಎಂದು ಯಾರಾದರೂ ತಿಳಿದಿದ್ದರೆ ಅದೊಂದು ಭ್ರಮವಿರುವದು. ಕಂಟ್ರೋಲ ಅಥವಾ ನಿಯಂತ್ರಣ ಎಂಬುದೇನೂ ಒಂದು ತತ್ವವಲ್ಲ. ಅದೊಂದು ವಿಶಿಷ್ಟ ಉಪಾಯ. ಎಲ್ಲರಿಗೆ ಅತ್ಯವಶ್ಯಕವಾದ ಅನ್ನ, ವಸ್ತ್ರ, ಇಂಧನ, ಔಷಧ; ಇವು ಸಾಕಷ್ಟು ಹಾಗೂ ಯೋಗ್ಯದರಕ್ಕೆ ಯೋಗ್ಯ ವೇಳೆಗೆ ನಿತ್ಯ ಸಿಗುವಂತೆ ಮಾಡುವದು ಇದು ತತ್ವ, ಇದು ಪ್ರತಿಯೊಂದು ಸರಕಾರದ ಕರ್ತವ್ಯ. ದೇಶದಲ್ಲಿ ಇವು ಕಡಿಮೆ ಇದ್ದರೆ ಅಥವಾ ಯಾವದೇ ಕಾರಣದಿಂದ ಜನರಿಗೆ ತಕ್ಕ ವೇಳೆಗೆ ತಕ್ಕ ದರಕ್ಕೆ ದೊರೆಯದೆ ಹೋದರೆ ನಿಯಂತ್ರಣ ಮಾಡುವ ಪ್ರಸಂಗವು ಬರುವದು. ಅಂಥ ಪ್ರಸಂಗದಲ್ಲಿ ನಿಯಂತ್ರಣ ಮಾಡದೆ ಹೋದರೆ ಯಾರ ಹತ್ತರ ದುಡ್ಡು ಹೆಚ್ಚು ಇದೆಯೊ ಅವರು ಹೆಚ್ಚು ಸಂಗ್ರಹ ಮಾಡಲಾರಂಭಿಸುವರು. ಯಾರ ಹತ್ತರ ಸಾಕಷ್ಟು ಹಣವಿಲ್ಲವೊ ಅವರು ಉಪವಾಸ ಸಾಯುವ ಪ್ರಸಂಗ ಬರುವದು. ಕಳ್ಳಪೇಟೆಯಾಗಲಿ, ಲಂಚಗುಳಿತನವಾಗಲಿ ಇವು ಕೇವಲ ಕಂಟ್ರೋಲದಿಂದ ನಿರ್ಮಾಣವಾಗುವ ಮಾತಲ್ಲ. ಜನರ ನೀತಿ ನಿಯಮಗಳ ಮಟ್ಟು ಹೆಚ್ಚು ಉಚ್ಚವಾಗದೆ ಹೋದರೆ ಅವು ನಷ್ಟವಾಗಲಾರವು. ಇದಲ್ಲದೆ ಮೇಲೆ ಕಾಣಿಸಿದ ವಸ್ತುಗಳ ದೇಶದಲ್ಲಿ ಸಾಕಷ್ಟು ಇರಬೇಕು ಇಷ್ಟೇ ಅಲ್ಲ. ಅವುಗಳನ್ನು ಎಲ್ಲರಿಗೂ ತಕ್ಕ ವೇಳೆಗೆ ಸಲ್ಲಿಸುವ ವಾಹನ ಸೌಕರ್ಯಗಳು ಬೇಕು. ಇಲ್ಲದಿದ್ದರೆ ಒಂದು ಪ್ರಾಂತದಲ್ಲಿ ಸುಭಿಕ್ಷೆ ನೆರೆ ಪ್ರಾಂತದಲ್ಲಿ ದುರ್ಭಿಕ್ಷೆ ಹೀಗೊಂದು ದೃಶ್ಯವು ಕಂಡು ಬರಬಹುದು. ಈ ಎಲ್ಲ ಮಾತುಗಳ ಲಕ್ಷ್ಯದಲ್ಲಿಟ್ಟುಕೊಂಡು ನೋಡಿದರೆ ಮಾತ್ರ ನಾವು ಒಂದು ಸಮಂಜಸ ನಿರ್ಣಯಕ್ಕೆ ಬರಬಲ್ಲೆವು.

ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಪದಾರ್ಥಗಳ ಮೇಲಿನ ನಿಯಂತ್ರಣ ಒಮ್ಮೆಲೆ ತೆಗೆದು ಬಿಡುವದು ಜನರಿಗೆ ಹಿತಕರವಾಗುವದೊ ಇಲ್ಲವೊ ಇದು ಬಹಳ ಸಂಶಯಾಸ್ಪದವಿರುವದು. ಯಾಕೆಂದರೆ ಆಯಾ ವಸ್ತುಗಳ ಸಾಕಷ್ಟು ಇಲ್ಲ, ಇದ್ದ ವಸ್ತುಗಳನ್ನು ಯೋಗ್ಯ ಕಾಲಕ್ಕೆ ಆಯಾ ಸ್ಥಳಕ್ಕೆ ಒದಗಿಸಲು ವಾಹನ ಸೌಕರ್ಯಗಳಿಲ್ಲ. ವಾಹನ ಸೌಕರ್ಯಾದಿಗಳು ಏಕೆ ಇಲ್ಲ ಎಂದು ಕೇಳಿದರೆ, ಸಾಕಷ್ಟು ಕಲ್ಲಿದ್ದಲಿ ಇಲ್ಲ, ಸಾಕಷ್ಟು ಪೆಟ್ರೋಲ ಇಲ್ಲ, ಅನ್ನ ವಸ್ತ್ರಗಳು ಕೂಡ ನಮ್ಮಲ್ಲಿ ಸಾಕಷ್ಟು ಇವೆ ಎಂದು ಹೇಳಲಿಕ್ಕಾಗುವದಿಲ್ಲ. ತಲೆ ಪ್ರಮಾಣ ಕಡಿಮೆ ಹಿಡಿದು ಎಲ್ಲರಿಗೂ ಸಾಲುವದು ಎಂದು ಅನ್ನವಸ್ತ್ರಗಳ ಬಗ್ಗೆ ಲೆಕ್ಕ ಹಾಕಿ-ಹಲವರು ಹೇಳುವದು ಹೊರತು ಅವು ಸಾಕಷ್ಟು ಇವೆ ಎಂದು ಹೇಳುವದು ತಪ್ಪು. ಅಂದ ಬಳಿಕ ಸಾಕಷ್ಟು ವಸ್ತುಗಳಿಲ್ಲದಿರುವಾಗ, ವಾಹನ ಸೌಕರ್ಯಗಳೂ ಇಲ್ಲದಾಗ ಇದ್ದ ನಿಯಂತ್ರಣಗಳನ್ನು ತೆಗೆದೊಡನೆ ನಂದನವನವು ಇಲ್ಲಿ ನಿರ್ಮಾಣವಾಗುವದು ಎಂದು ತಿಳಿದುಕೊಳ್ಳುವದು ತಪ್ಪು. ಹಾಗಾದರೆ ಈ ದುಷ್ಟಚಕ್ರವು ನಷ್ಟವಾಗುವ ಬಗೆಯಾವುದು.

ನಿಜವಾಗಿ ಮುಖ್ಯಮಾತೆಂದರೆ ಸಾಕಷ್ಟು ಉತ್ಪಾದನೆಯಾಗಲೊಲ್ಲದು. ಇದು ಬೀಜ ಮಾತು. ಉತ್ಪಾದನೆ ಆಗದಿರುವದಕ್ಕೆ ಎರಡು ಮೂರು ತೊಡಕುಗಳಿವೆ— ಉತ್ಪಾದಕ ಸಾಧನ ಸಾಮಗ್ರಿ ಸಾಕಷ್ಟಿಲ್ಲ, ಜನರು ಎಷ್ಟು ದುಡಿಯಬೇಕೊ ಅಷ್ಟು ದುಡಿಯುವದಿಲ್ಲ, ಉತ್ಪಾದನೆ ಹೆಚ್ಚು ಮಾಡುವತ್ತ ಕೂಲಿಕಾರರ ಪ್ರವೃತ್ತಿಯಿಲ್ಲ. ಈ ಮೂರು ಕಾರಣಗಳನ್ನು ಹೋಗಲಾಡಿಸದೆ ಇದ್ದರೆ ನಿಯಂತ್ರಣವಿದ್ದರೂ ಅಷ್ಟೆ ನಿಯಂತ್ರಣ ತೆಗೆದರೂ ಅಷ್ಟೇ ದುಃಖ ತಪ್ಪಿದ್ದಲ್ಲ. ಆದುದರಿಂದ ಈ ಮೂರು ಕಾರಣಗಳ ನಿರ್ಮೂಲನ ಇದು ಎಲ್ಲಕ್ಕೂ ಮಹತ್ವದ ಮಾತು. ನಮ್ಮ ದೇಶಕ್ಕೆ ಹೆಚ್ಚು ಧಾನ್ಯ ಬೇಕಾಗಿದೆ, ಅದನ್ನು ಉತ್ಪನ್ನ ಮಾಡಿಯೇ ತೀರುವೆವು ಎಂದು ರೈತರು, ನಮ್ಮ ಜನರಿಗೆ ಹೆಚ್ಚು ವಸ್ತ್ರ ಬೇಕು, ಅದನ್ನು ಹುಟ್ಟಿಸಿಯೇ ತೀರುವೆವು ಎಂದು ಗಿರಣೀ ಕಾಮಗಾರರು, ನಿರ್ಣಯಿಸಿದರೆ ಕೆಲಸವು ಸಾಗಬಲ್ಲದು. ಅವರ ಮನಸು ಆ ರೀತಿ ಆಗುವಂತೆ ಪ್ರಯತ್ನಿಸುವದು ಎಲ್ಲರ ಕರ್ತವ್ಯವಿರುವದು.

ಪ್ರಾಂತೀಕರಣ ಗೊತ್ತುವಳಿಗೆ ತಾತ್ಕಾಲಿಕ ತಡೆ

ಮುಖ್ಯ ಮಂತ್ರಿ ನೆಹರೂ ಅವರ ಆಶ್ವಾಸನ

ಒಡನೆ ಭಾಷಾನ್ವಯ ಪ್ರಾಂತಗಳ ರಚನೆಯಾಗಬೇಕೆಂದೂ ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಸರಕಾರ ಕೈಕೊಳ್ಳಬೇಕೆಂದೂ ಅಭಿಪ್ರಾಯವುಳ್ಳ ಗೊತ್ತುವಳಿಯೊಂದನ್ನು ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ಪಾಟಸ್ಕರರು ಮಂಡಿಸುವವರಿದ್ದರು. ಅದಕ್ಕೆ ಆಂಧ್ರದ ಶ್ರೀ ಎನ್. ಜಿ. ರಂಗಾ ಕರ್ನಾಟಕದ ಶ್ರೀ ರಂ. ರಾ. ದಿವಾಕರ ಮೊದಲಾದವರು ಒಂದು ತಿದ್ದುಪಡಿ ಸೂಚಿಸಿ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಪ್ರಾಂತಗಳ ಹೆಸರುಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುವಂತೆ ಮಾಡಬೇಕೆಂದಿದ್ದರು. ಈ ಗೊತ್ತುವಳಿ ಚರ್ಚೆಗೆ ಬಂದೊಡನೆ ಮುಖ್ಯಮಂತ್ರಿ ಪಂ. ಜವಾಹರಲಾಲರು ಆವಶ್ಯಕ ಆಶ್ವಾಸನ ಕೊಡಬೇಕೆಂದೂ ಆ ಮೇಲೆ ತಿದ್ದುಪಡಿ ಹಿಂತೆಗೆದುಕೊಳ್ಳಲ್ಪಡಬೇಕೆಂದೂ ಮೊದಲು ಗೊತ್ತಾದಂತಿತ್ತು.

ಆದರೆ ಅಕಸ್ಮಾತ್ತಾಗಿ ತಾ. ೨೭ ಕ್ಕೆ ಈ ಗೊತ್ತುವಳಿಯನ್ನು ಮಂಡಿಸುವ ಮುಂಚಿನ ದಿನ ಭಾಷಾನ್ವಯ ಪ್ರಾಂತರಚನೆಯಲ್ಲಿ ಆಸ್ಥೆಯಿಲ್ಲದ ಕೆಲ ಸದಸ್ಯರ ಚಟುವಟಿಕೆ ತೀಕ್ಷ್ಣವಾಯಿತು. ಈ ವರ್ಗಕ್ಕೆ ಸೇರಿದವರೆಂದು ಮೊದಲೇ ಪ್ರಸಿದ್ಧರಾಗಿದ್ದ ಕಾಯದೆ ಮಂತ್ರಿ ಡಾ. ಅಂಬೇಡಕರರು ಒಂದು ಕಾಯದೆಯ ಮುದ್ದೆಯನ್ನೆತ್ತಿ, ಘಟನಾ ಸಮಿತಿಯಲ್ಲಿ ಇಂಥದೇ ಗೊತ್ತುವಳಿಯೊಂದು ಮಂಡಿಸಲ್ಪಟ್ಟಿರುತ್ತದೆ, ಶಾಸನ ಸಭೆಯಲ್ಲಿ ಅದನ್ನು ಪುನಃ ಮಂಡಿಸಲು ಬರುವದಿಲ್ಲೆಂದು ಸೂಚಿಸಿದರು. ಈ ಸುದ್ದಿ ತಿಳಿದೊಡನೆ ಭಾಷಾನ್ವಯ ಪ್ರಾಂತ ರಚನಾ ವಾದಿಗಳು ಪಕ್ಷದ ಕಾರ್ಯಸಮಿತಿಯ ಸಭೆ ಕರೆದು ಪ್ರೊ. ರಂಗಾ ಅವರು ಈ ಬಗ್ಗೆ ಶಾಸನಸಭೆಯಲ್ಲಿ ಪ್ರಶ್ನೆ ಕೇಳಬೇಕೆಂದು ಅದಕ್ಕೆ ಮುಖ್ಯ ಮಂತ್ರಿಗಳ ಉತ್ತರ ಬಂದೊಡನೆ ಪಾಟಸ್ಕರರು ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಣಯಿಸಲ್ಪಟ್ಟಿತು.

ಪ್ರೊ. ರಂಗಾರ ಪ್ರಶ್ನೆಗೆ ಪಂ. ಜವಾಹರಲಾಲರು ಉತ್ತರ ಕೊಡುತ್ತ ಭಾಷಾನ್ವಯ ಪ್ರಾಂತರಚನೆಯ ತತ್ವವನ್ನು ಕಾಂಗ್ರೆಸ್ಸು ಎಷ್ಟೋ ವರ್ಷಗಳಿಗೆ ಮೊದಲೇ ಒಪ್ಪಿದ್ದು ಸದ್ಯದ ಸರಕಾರಕ್ಕೂ ಅದು ಮಾನ್ಯವಿದೆಯೆಂದರು. ಆದರೆ ದೇಶದ ಅಸ್ವಾಭಾವಿಕ ವಿಭಜನೆಯಿಂದ ಘೋರ ಪರಿಸ್ಥಿತಿಯನ್ನು ಸರಕಾರವೀಗ ಎದುರಿಸಬೇಕಾಗಿದೆ. ಅನೇಕ ಪ್ರತಿಗಾಮಿ ಶಕ್ತಿಗಳು ಎದ್ದು ಪರಿಸ್ಥಿತಿಯ ದುರ್ಲಾಭ ಪಡೆದು ತಾವು ಸ್ವತಂತ್ರವೆಂದು ಸಾರತೊಡಗಿದವು. ಇವನ್ನೆಲ್ಲ ಸರಕಾರ ಯಶಸ್ವಿಯಾಗಿ ಎದುರಿಸುತ್ತಿದ್ದರೂ ಇನ್ನೂ ಅನೇಕ ಗಂಡಾಂತರಗಳು ಕಾದು ಕುಳಿತಿವೆ. ಈ ಸಂದರ್ಭದಲ್ಲಿ ನಾವು ಆಯಾ ಪ್ರಶ್ನೆಗಳನ್ನು ಅವುಗಳ ಮಹತ್ವದ ತಾರತಮ್ಯ ನೋಡಿ ಬಿಡಿಸಬೇಕಾಗುವದು. ಇಲ್ಲದಿದ್ದರೆ ಅಹಿತ ಸಂಭವಿಸಬಹುದು. ಭಾಷಾನ್ವಯ ಪ್ರಾಂತರಚನೆಯ ತತ್ವ ಮಾನ್ಯವಿದ್ದರೂ ಕೆಲವೆಡೆ ಭಾಷೆ ಸಂಸ್ಕೃತಿಗಳ ಗಡಿಗಳನ್ನು ನಿರ್ಣಯಿಸುವದು ಸುಲಭಸಾಧ್ಯವಿಲ್ಲ. ಆಂಧ್ರ ಪ್ರಾಂತ ನಿರ್ಮಾಣಕ್ಕೆ ಅಷ್ಟೇನೂ ತೊಡಕಿಲ್ಲದಿದ್ದರೂ ಉಳಿದವುಗಳು ಸ್ವಲ್ಪ ತೊಡಕಿವೆ. ಆರ್ಥಿಕವೇ ಮೊದಲಾದ ಹಲವು ವಿಷಯಗಳನ್ನು ಮೊದಲೇ ಆಳವಾಗಿ ವಿಚಾರಿಸಬೇಕಲ್ಲದೆ ನೆರೆ ಪ್ರಾಂತದವರ ಒಪ್ಪಿಗೆಯೂ ಅವಶ್ಯ. ಗಡಿನಿರ್ಣಾಯಕ ಸಮಿತಿಗಳನ್ನೂ ನಿರ್ಮಿಸಬೇಕಾಗುವದು. ಇಂಥ ಯಾವದೇ ದೊಡ್ಡ ಯೋಜನೆಗೆ ಕೈಹಾಕುವ ಮುನ್ನ ಮೊದಲು ಹಿಂದುಸ್ತಾನದ ಭದ್ರತೆ ಮತ್ತು ಸಂರಕ್ಷಣೆಯ ವ್ಯವಸ್ಥೆಯನ್ನು ಮಾಡಿಕೊಳ್ಳುವದವಶ್ಯ. ನಾವು ಬಲಾಢ್ಯ ರಾಷ್ಟ್ರವಾಗಿ ಹಿಂದುಸ್ತಾನ ಬಾಳಬಲ್ಲುದಾದರೆನೇ ಅದರ ಅಂಗಗಳಾದ ಪ್ರಾಂತಗಳೂ ಉಳಿದಾವು. ಹಿಂದುಸ್ತಾನವೇ ದುರ್ಬಲವಾದರೆ ಅವೂ ದುರ್ಬಲವಾಗಿ ಪ್ರಗತಿ ಹೊಂದಲಾರವು. ಆದರಿಂದ ಪ್ರತಿಯೊಂದು ಸಮಸ್ಯೆಯನ್ನೂ ಇಡಿ ಹಿಂದುಸ್ತಾನದ ಹಿತದೃಷ್ಟಿಯಿಂದ ಮೊದಲು ವಿಚಾರಿಸಬೇಕು. ನಮ್ಮ ಶಕ್ತಿ ಉತ್ಸಾಹಗಳು ಅವಸರದ ಕಾರ್ಯಗಳಿಂದ ವಿಮುಖವಾಗಬಾರದು.

ಕೊನೆಯಲ್ಲಿ ಪಂ. ನೆಹರೂ ಅವರು ಈ ಪ್ರಶ್ನೆಯನ್ನು ಕೊನೆಯದಾಗಿ ನಿರ್ಣಯಿಸುವ ಅಧಿಕಾರ ಘಟನಾ ಸಮಿತಿಯದೆಂದರು. ಆದರೆ ಮುಂದೆ ಸರಕಾರ ಈ ಪ್ರಶ್ನೆಯನ್ನಿಟ್ಟು ಭಾಷಾನ್ವಯ ಪ್ರಾಂತರಚನೆಯ ಪೂರ್ವದಲ್ಲಿ ನಡೆಸಬೇಕಾದ ಪರಿಶೀಲನೆಯ ವಿಷಯದಲ್ಲಿ ಅದರ ಸಲಹೆ ಕೇಳುವರು. ಇದರ ಬಗ್ಗೆ ಗಡಿನಿರ್ಣಾಯಕ ಸಮಿತಿಗಳ ನೇಮಕವಾಗುವದು ಎಂದು ಆಶ್ವಾಸನವಿತ್ತರು.

ನಿರಾಶೆಗೆಡೆಯಿಲ್ಲ

ಈ ಸಂಬಂಧದಲ್ಲಿ ಭಾಷಾನ್ವಯ ಪ್ರಾಂತರಚನೆಯ ಪುರಸ್ಕರ್ತರ, ಮುನವಳ್ಳಿ, ನಿಜಲಿಂಗಪ್ಪ, ಜೋಧೆ ಹಾಗು ಕೃಷ್ಣಮೂರ್ತಿಯವರು ಒಂದು ಹೇಳಿಕೆ ಹೊರಡಿಸಿ ಮುಖ್ಯಮಂತ್ರಿಗಳ ಹೇಳಿಕೆಯಿಂದ ಭಾಷಾನ್ವಯ ಪ್ರಾಂತವಾದಿಗಳಿಗೆ ಆನಂದ ಖೇದಗಳ ಮಿಶ್ರಭಾವನೆಯುಂಟಾಗಿದೆಯೆಂದಿದ್ದಾರೆ. ಈ ತತ್ವಕ್ಕೆ ಮುನ್ನಡೆ ಕೊಡಲಾಗಿದೆಯೆಂದೂ ಗಡಿನಿರ್ಣಾಯಕ ಸಮಿತಿಗಳ ನೇಮಕವಾಗುವದೆಂದೂ ಅದು ಅಥವಾ ಅವು ಒಂದು ವರ್ಷದೊಳಗೆ ಕಾರ್ಯ ಮುಗಿಸಬಲ್ಲವೆಂದೂ ಅವರಿತ್ತ ಆಶ್ವಾಸನಕ್ಕಾಗಿ ಆನಂದವಾಗಿದ್ದರೂ ಆಂಧ್ರವೊಂದೇ ಪ್ರತ್ಯೇಕ ಪ್ರಾಂತವಾಗಲರ್ಹವೆಂದು ಹೇಳಿದ್ದು ಅಸಮಾಧಾನಕ್ಕೆ ಕಾರಣವಾಗಿದೆ. ಬಳ್ಳಾರಿಯ ಪ್ರಶ್ನೆಯಿದ್ದಾಗ ಆಂಧ್ರ ಕರ್ನಾಟಕಗಳೆರಡರ ಗಡಿ ನಿರ್ಣಯವಾಗಬೇಕಾಗುವದೆಂದೂ ಆ ಸಂದರ್ಭದಲ್ಲಿ ಕರ್ನಾಟಕ ಮಹಾರಾಷ್ಟ್ರಗಡಿಯೂ ನಿರ್ಧರಿಸಲ್ಪಡಬೇಕಾಗುವದೆಂದೂ ಅದು ಕಾರಣ ಇವು ಮೂರರ ಸಮಸ್ಯೆಯೂ ಬೇರೆ ಬೇರೆಯಾಗಿಲ್ಲವೆಂದೂ ಅವರು ವಾದಿಸಿ ಜವಾಹರಲಾಲರಿಗೆ ಉತ್ತರ ಕೊಟ್ಟಿದ್ದಾರೆ.

ಆದರೂ ಈ ವಿಷಯದಲ್ಲಿ ಜನರು ನಿರಾಶರಾಗಬಾರದು. ಇನ್ನೊಂದು ವರ್ಷದೊಳಗೆ ಭಾಷಾವಾರು ಪ್ರಾಂತಗಳು ರಚನೆಯಾಗುವವೆಂದು ಭರವಸೆಯಿದೆ. ಆ ದಿಶೆಯಲ್ಲಿ ತಾವೆಲ್ಲರೂ ಪ್ರಯತ್ನ ನಡೆಸುವದಾಗಿಯೂ ಅವರು ಹೇಳಿದ್ದಲ್ಲದೆ ಪ್ರಾಂತೀಕರಣದ ಬೇಡಿಕೆಯು ಹಿಂದೆ ಬಿದ್ದು ಹೋಗುವ ಪ್ರವೃತ್ತಿಯುಳ್ಳದ್ದಲ್ಲೆಂದು ಮುಂದಾಳುಗಳಿಗೆ ಆಶ್ವಾಸನ ಕೊಟ್ಟಿದ್ದಾರೆ.

ಕರ್ನಾಟಕ

ಬೆಂಗಳೂರು—ಮೈಸೂರು

ನ್ಯಾಯಾಂಗ ಮತ್ತು ಕಾರ್ಮಿಕ ಶಾಖೆಯ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರು ತಾ. ೨೧ ರಲ್ಲಿ ಬೆಂಗಳೂರಿನ ಯುವಜನ ಪರಿಷತ್ತಿನವರು ಆಚರಿಸಿದ ಪಂಡಿತ ಜವಾಹರರ ಜಯಂತ್ಯುತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿದಾಗ ಪಂಡಿತರ ಜೀವನ ಭಾರತೀಯರಿಗೆ ಮಾದರಿಯದಾಗಿದೆಯೆಂದರು.

ಬೆಂಗಳೂರಿನ ಒಕ್ಕಲಿಗರ ಸಂಘದಲ್ಲಿ ತಾ ೨೧ ರಲ್ಲಿ ನೆಹರೂ ಜಯಂತಿಯನ್ನು ಆಚರಿಸಲಾಯಿತು. ಕಾಂಗ್ರೆಸ್ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅಸಿಸ್ಟೆಂಟ ಪಬ್ಲಿಸಿಟಿ ಆಫೀಸರರಾದ ಶ್ರೀ ಡಿ. ಆರ್. ರಾಮಯ್ಯನವರೂ ಸೆಂಟ್ರಲ್ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಡಿ. ಜವರೇಗೌಡರೂ ಭಾಷಣ ಮಾಡಿದರು.

ದೇಶೀಯ ವ್ಯಾಯಾಮ ಶಾಲಾ, ಜೆ. ಕೆ. ಗೋವಿಂದಪ್ಪ ರಸ್ತೆ, ಬಸವನ ಗುಡಿ, ಬೆಂಗಳೂರು ನಗರ—ಇದರ ಸಭಾಂಗಣದಲ್ಲಿ ತಾ. ೨೩ ರ ಸಂಜೆ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣ ಶರ್ಮರವರು ಮಿಲಿಟರಿ ಮತ್ತು ವ್ಯಾಯಾಮ ಶಿಕ್ಷಣದ ಅವಶ್ಯಕತೆ ಎಂಬುದರ ಮೇಲೆ ಮಾತನಾಡಿದರು.

ತಾ. ೨೧ ರ ಸಾಯಂಕಾಲ ಬೆಂಗಳೂರು ನಗರದ ಸುಮಾರು ೨೦ ಕೆಲಸಗಾರ ಸಂಘಗಳ ಪ್ರತಿನಿಧಿಗಳ ಸಭೆಯನ್ನು ಬಿನ್ನಿಮಿಲ್ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ. ಬಿ. ಶ್ರೀನಿವಾಸನ್‌ರವರು ಸಂಘದ ಕಾರ್ಯಾಲಯದಲ್ಲಿ ಕರೆದಿದ್ದರು. ೫೩ ದಿನಗಳಿಂದ ನಡೆಯುತ್ತಿರುವ ಮಿನರ್ವಾ ಮಿಲ್ ಕೆಲಸಗಾರರ ಮುಷ್ಕರದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಪ್ರತಿನಿಧಿಗಳು ಚರ್ಚಿಸಿದರು.

ಬೆಂಗಳೂರಿನ ಬಳೇಪೇಟೆಯಲ್ಲಿರುವ ಒಂದು ಹೊಟೇಲಿನಲ್ಲಿ ತಾ. ೨೧ ರ ಮಧ್ಯಾಹ್ನ ಹೊಟೇಲ್ ಕೆಲಸಗಾರರ ಸಂಘದವರೂ ಆಹಾರ ಇನ್‌ಸ್ಪೆಕ್ಟರರೂ ಶೋಧನೆ ನಡೆಸಿದಾಗ ಅಲ್ಲಿ ಅಕ್ಕಿ, ರಾಗಿ, ಜೋಳ, ಗೋದಿ, ಇವುಗಳನ್ನು ಇದ್ದಿಲು ಮೂಟೆಯ ಜೊತೆಯಲ್ಲಿಯೂ ಬಚ್ಚಲು ಮನೆಯಲ್ಲಿಯೂ ಪತ್ತೆ ಹಚ್ಚಿದರೆಂದು ತಿಳಿಯುತ್ತದೆ.

ಬೆಂಗಳೂರಿನ ಓಲ್ಡ್ ಮದ್ರಾಸ್ ರಸ್ತೆಯಲ್ಲಿರುವ ಗೋಶಾಲೆಗೆ ಮಂತ್ರಿಗಳಾದ ರಾಜ ಸೇವಾಸಕ್ತ ಪಾಮಡಿ ಸುಬ್ಬರಾಮ ಶೆಟ್ಟರು ತಾ ೨೨ ರ ಬೆಳಗ್ಗೆ ಭೆಟ್ಟಿಯಿತ್ತುದಲ್ಲದೆ ನಗರದ ನಾನಾ ಭಾಗಗಳ ಪರಿಶೀಲನೆ ನಡೆಸಿದರು.

ಬೆಂಗಳೂರಿನ ಕನ್ನಡ ಸಂಘದವರು ತಾ. ೧೯ ರ ಸಂಜೆ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಮಹಾ ಪ್ರಧಾನ ಪಂಡಿತ ಜವಾಹರರ ಜಯಂತಿಯನ್ನು ಆಚರಿಸಿದರು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಫಲಾಹಾರ ಮಂದಿರದ ಪ್ರಾರಂಭೋತ್ಸವವು ತಾ. ೧೭ ರಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಲ್. ರಾಮರಾವ್ ಅವರಿಂದ ನೆರವೇರಿಸಲ್ಪಟ್ಟಿತು.

ವ್ಯವಸಾಯ ಮತ್ತು ಪಬ್ಲಿಕ್‌ವರ್ಕ್ಸ್ ಮಂತ್ರಿಗಳಾದ ಶ್ರೀ ಎಚ್. ಸಿದ್ಧಯ್ಯನವರು ಬೆಂಗಳೂರಿನ ಕಬ್ಬನ್ ಪಾರ್ಕ ಮತ್ತು ಲಾಲಬಾಗುಗಳಿಗೆ ತಾ ೨೦ ರಲ್ಲಿ ಭೆಟ್ಟಿ ಇತ್ತು ಸರಕಾರದ ತೋಟಗಳ ಅಭಿವೃದ್ಧಿಯ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು.

ಬೆಂಗಳೂರಿನ ಅಪೆಕ್ಸ್ ಬ್ಯಾಂಕಿನ ಉದ್ಯೋಗದಲ್ಲಿದ್ದು ಜನಪ್ರಿಯರೆಂದೆನಿದ ಶ್ರೀ ಕೆ. ಆರ್. ಶ್ರೀನಿವಾಸ ಮೂರ್ತಿಯವರು ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ನಿವೃತ್ತ ಚೀಫ್ ಎಂಜಿನಿಯರರಾದ ರಾಜಸೇವಾ ಸಕ್ತ ಕೆ. ಆರ್. ಶೇಷಾಚಾರ್ಯರ ಜ್ಯೇಷ್ಠ ಪುತ್ರರು.

“ವಿದ್ಯಾವಂತ ಮಹಿಳೆಯು ದೇಶದ ಒಂದು ಸಂಪತ್ತು, ಅಂತಹ ಮಹಿಳೆಯು ಮನೆಯಲ್ಲಿರುವದು ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾದ ಒಂದು ವಿಶ್ವವಿದ್ಯಾಸಂಸ್ಥೆಯೆಂದೇ ಹೇಳಬಹುದು” ಎಂಬುದಾಗಿ ನ್ಯಾಯಾಂಗ ಮಂತ್ರಿಗಳಾದ ಶ್ರೀ ಕೆ. ಟಿ. ಭಾಷ್ಯಂರವರು ತಾ ೨೦ ರ ಸಂಜೆ ಬೆಂಗಳೂರಿನ ಮಹಾರಾಣೀಕಾಲೇಜಿನ ವಿದ್ಯಾರ್ಥಿನಿಯರನ್ನುದ್ದೇಶಿಸಿ ಸಂಘದ ಸಮಾರಂಭ ಭಾಷಣ ಮಾಡಿದಾಗ ತಿಳಿಸಿದರು.

ಮೈಸೂರ ಸಂಸ್ಥಾನದ ಮೂಲ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಸ್ವಾಮಿ ವಿಶಾಲಾನಂದಜಿಯವರು ಡಿಸೆಂಬರಿನಲ್ಲಿ ಬೆಂಗಳೂರಲ್ಲಿ ಮೂಲಶಿಕ್ಷಣ ಸಮ್ಮೇಳನ ನಡೆಯುವುದೆಂದೂ ಅದಕ್ಕೆ ಆರಂಭ ಭಾಷಣಮಾಡಲು ಶ್ರೀ ಕೆ ಸಿ. ರೆಡ್ಡಿಯವರನ್ನು ಕೇಳಲಾಗಿದೆಯೆಂದೂ ಸಮ್ಮೇಳನದಲ್ಲಿ ಪ್ರಬಂಧಗಳನ್ನೋದಬಯಸುವ ಮಹನೀಯರು ಅದನ್ನು ಬೇಗ ಅವುಗಳನ್ನು ಶೆಂಗೇರಿಯ ಗುರುಕುಲಾಶ್ರಮಕ್ಕೆ ಕಳುಹಬೇಕೆಂದೂ ಬಿನ್ನವಿಸುತ್ತಾರೆ.

ವಿಜಾಪುರ

ವಿಜಾಪುರದ ನೂತನ ಆಯುರ್ವೇದ ಕಾರ್ಯಾಲಯದಲ್ಲಿ ನವೆಂ. ೧೦ ಕ್ಕೆ ಧನ್ವಂತರಿ ಜಯಂತ್ಯುತ್ಸವ ಹುಬ್ಬಳ್ಳಿಯ ವೈದ್ಯಗುರು ಶ್ರೀ ರಾಮರಾವ ವಾಳವೇಕರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ವಿಜಾಪುರ ಜಿಲ್ಲಾ ಲಮಾಣಿ ಜನರ ಎರಡನೆ ಪರಿಷತ್ತು ಶ್ರೀ ಚನಬಸಪ್ಪ ಅಂಬಲಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಾನ್ಯ ಮಂತ್ರಿ ಶ್ರೀ ತಪಾಸೆಯವರು ಪರಿಷತ್ತಿನ ಉದ್ಘಾಟನೆ ಮಾಡಿದರು. ಲಮಾಣಿ ಜನರಿಗೆ ಮನೆಕಟ್ಟಿಕೊಂಡು ಉಳಿಯಲು ಸರಕಾರದವರು ಸಾಲಕಡದ ಸಹಾಯಮಾಡಬೇಕೆಂಬಿತ್ಯಾದಿ ಬೇಡಿಕೆಗಳು ಲಮಾಣಿಗಳ ಪರವಾಗಿ ಮುಂದೊಡ್ಡಲ್ಪಟ್ಟವು.

ಬಾಗಲಕೋಟೆಯಲ್ಲಿ ಡಾ. ಕೆಂಡುಲಕರರು ತೆರೆಯಬೇಕೆಂದಿರುವ ಸಿಮೆಂಟ ಕಾರಖಾನೆಗೆ ಮುಂಬಯಿ ಸರಕಾರದವರು ಒಪ್ಪಿಗೆಕೊಟ್ಟಿರುವರಲ್ಲದೆ ಸ್ವಲ್ಪ ಧನಸಹಾಯ ಮಾಡಲೊಪ್ಪಿದ್ದಾರೆಂದು ಮಾನ್ಯ ಮಂತ್ರಿ ತಪಾಸೆಯವರು ಒಂದು ಸಂದರ್ಶನದಲ್ಲಿ ಹೇಳಿದ್ದಾರೆ.

ಮುಂಬಯಿ ಸರಕಾರದ ಉಪಮಂತ್ರಿ ಶ್ರೀ ಎಸ್. ಆರ್, ಕಂಠಿಯವರು ನಿಜಾಮ ಸೈನಿಕರ ಅತ್ಯಾಚಾರಕ್ಕೆ ಗುರಿಯಾದ ಗಡಿಪ್ರದೇಶಗಳಲ್ಲಿ ಸಂಚರಿಸಿ ನಿಜಾಮ ಹಳ್ಳಿಗಳಿಂದ ಅತ್ಯಾಚಾರ ಸಹಿಸದೆ ಬಂದ ನಿರಾಶ್ರಿತರ ದೂರುಗಳನ್ನು ಕೇಳಿಕೊಂಡು ಒಕ್ಕೂಟ ಹಳ್ಳಿಗಳಿಗೆ ಸರ್ವವಿಧ ಸಹಾಯದ ಆಶ್ವಾಸನ ವಿತ್ತರು.

ವಿಜಾಪುರ ಜಿಲ್ಲಾ ನಿರಾಶ್ರಿತ ಪರಿಹಾರ ಸಮಿತಿಯ ಕಾರ್ಯದರ್ಶಿ ಶ್ರೀ ತಿರುಮಲರಾವ ಕೌಜಲಗಿ ಹಾಗು ಶ್ರೀ ಭಾಲಚಂದ್ರ ಪರುಳೆಕರರು ಒಂದು ಹೇಳಿಕೆಯ ಮೂಲಕ ಸಿಂಧ ಪಂಜಾಬಗಳಿಂದ ಬಂದ ನಿರಾಶ್ರಿತರ ಸಹಾಯಕ್ಕಾಗಿ ಸಾರ್ವಜನಿಕರನ್ನು ಪ್ರಾರ್ಥಿಸುತ್ತ ಪ್ರತಿಯೊಂದು ಮನೆಯವರು ಕನಿಷ್ಠ ಒಂದು ಕಂಬಳಿಗೆ ಹತ್ತುವಷ್ಟು ಧನ ಸಹಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಮುಸ್ಲಿಂ ಲೀಗಿನ ಈಚೆಗಿನ ಧೋರಣದಿಂದಾಗುತ್ತಿರುವ ಜಾತೀಯ ದ್ವೇಷದಿಂದ ನೊಂದು ವಿಜಾಪೂರ ಜಿಲ್ಹಾ ಮುಸ್ಲಿಂ ಲೀಗ ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿ ಶ್ರೀ. ಎ. ಎಚ್. ಛೀವಾಲ ಹಾಗು ಎಂ. ಎನ್. ಪಡೇಕನೂರರು ಮತ್ತು ನಗರ ಲೀಗಿನ ಶ್ರೀ ಕಲ್ಹಾದಗಿ ಮೊದಲಾದವರೂ ಮುಸ್ಲಿಂ ಲೀಗಿಗೆ ರಾಜೀನಾಮೆ ಕೊಟ್ಟಿದ್ದಾರೆ.

ಬಳ್ಳಾರಿ

ರಾಯಲ ಸೀಮಾ ಮಹಾಸಭೆಯವರು ಬಳ್ಳಾರಿಯನ್ನು ಆಂಧ್ರ ಪ್ರಾಂತಕ್ಕೆ ಸೇರಿಸಬೇಕೆಂದು ವಾದಿಸಲು ಸಂಧಾನ ಸಮಿತಿಗೆ ತಮ್ಮನ್ನು ಸದಸ್ಯರನ್ನಾಗಿ ಆರಿಸಿದ್ದನ್ನು ಪ್ರತಿಭಟಿಸಿ ಬಳ್ಳಾರಿಯ ಪ್ರಸಿದ್ಧ ವಕೀಲರೂ ಸೊಂಡೂರು ಸಂಸ್ಥಾನ ಶಾಸನ ಸಭಾಧ್ಯಕ್ಷರೂ ಆದ ಶ್ರೀ ಡಿ. ಎನ್. ಹನುಮಂತರಾಯರು ಮಹಾಸಭೆಯ ಕಾರ್ಯಕಾರಿ ಮಂಡಲಕ್ಕೂ ಸಂಧಾನ ಸಮಿತಿಗೂ ರಾಜೀನಾಮೆ ಕೊಟ್ಟಿದ್ದಾರೆ.

ಹೊಸಪೇಟೆಯ ವಕೀಲರೂ ಕಾಂಗ್ರೆಸ್ ಕಾರ್ಯಕರ್ತರೂ ಆದ ಶ್ರೀ ಮತ್ತೀಹಳ್ಳಿ ರಾಘವೇಂದ್ರ ರಾಯರು ವಕೀಲ ವೃತ್ತಿಯಿಂದ ನಿವೃತ್ತರಾಗಿ ಹುಬ್ಬಳ್ಳಿಯಲ್ಲಿ ಬಂದು ನೆಲಸಲು ನಿರ್ಧರಿಸಿದ್ದರಿಂದ ಕಾಂಗ್ರೆಸ್ ಕಮಿಟಿಗಳ ಪರವಾಗಿ ಅವರಿಗೆ ಬೀಳ್ಕೊಡುವ ಸಮಾರಂಭ ಏರ್ಪಡಿಸಲಾಯಿತು.

ಮೈಸೂರ ಸಂಸ್ಥಾನಕ್ಕೆ ಬರುತ್ತಿರುವ ಪಂಜಾಬ ನಿರಾಶ್ರಿತರ ವ್ಯವಸ್ಥೆಯ ಸಂಬಂಧವಾಗಿ ಸ್ವಾಮಿ ವಿಶ್ವಾನಂದಜಿಯವರು ಸಂಸ್ಥಾನದ ಸೇವಾ ಸಮಿ ಕಾರ್ಯದರ್ಶಿಗಳಾದ ಶ್ರೀ ಕಪೂರರೂ ತಾ ೧೪ ರಲ್ಲಿ ಮುಖ್ಯ ಮಂತ್ರಿಗಳನ್ನು ಕಂಡು ಮಾತುಕತೆ ನಡೆಸಿ ನಿರಾಶ್ರಿತರ ಪರಿಹಾರ ಕಾರ್ಯದ ಬಗ್ಗೆ ಒಬ್ಬ ಖಾಸಗಿಯವರನ್ನು ಸರಕಾರವು ನೇಮಿಸಬೇಕೆಂದು ಪ್ರಾರ್ಥಿಸಿದರೆಂದೂ ಮುಖ್ಯ ಮಂತ್ರಿಗಳು ಸೂಕ್ತ ಭರವಸೆ ಕೊಟ್ಟರೆಂದೂ ಗೊತ್ತಾಗಿದೆ.

ಫ್ರಾನ್ಸಿನಲ್ಲಿ ಕಳೆದ ಆಗಸ್ಟಿನಲ್ಲಿ ನಡೆದ ಪ್ರಪಂಚದ ಸ್ಕೌಟ್‌ಜಾಂಬೋರಿಗೆ ಮೈಸೂರಿಂದ ಹೋಗಿದ್ದ ಸ್ಕೌಟ್ ನಾಯಕರಿಗೆ ನವೆಂಬರ ೧೫ ರಲ್ಲಿ ಆಚಾರ್ಯ ಪಾಠಶಾಲೆಯಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಯಿತು.

ಧಾರವಾಡ

ಅಂತರ್‌ರಾಷ್ಟ್ರೀಯ ವಾಣಿಜ್ಯ ಪರಿಷತ್ತಿಗಾಗಿ ಏಳು ತಿಂಗಳ ಹಿಂದೆ ಜಿನಿವಾಕ್ಕೆ ತೆರಳಿದ್ದ ದ. ಪ. ಕರಮರಕರರು ೧೨—೧೧—೪೭ ಕ್ಕೆ ಧಾರವಾಡಕ್ಕೆ ಮರಳಿದರು. ಅವರಿಗೆ ಪುರಪ್ರಮುಖರು ಸಂಭ್ರಮದ ಸ್ವಾಗತವಿತ್ತರು. ತಾ ೧೪ ಕ್ಕೆ ಅವರು ಧಾರವಾಡ ನಗರಸಭೆಯ ಅಕ್ಷದಲ್ಲಿ ತಮ್ಮ ವಿದೇಶದ ಅನುಭವಗಳ ಬಗ್ಗೆ ಭಾಷಣ ಮಾಡಿದರು.

ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯದರ್ಶಿ ಶ್ರೀವೊಬಾಸಿಯವರುಶಿಕ್ಷಣಶಾಖೆಯ ಡಾಯರೆಕ್ಟರರಿಗೆ ಬರೆದ ಪತ್ರಕ್ಕುತ್ತರವಾಗಿ ಫಾಜಿ ಸಮಿತಿಯ ವರದಿ ಇನ್ನೂ ಅಚ್ಚಿನಲ್ಲಿದೆಯೆಂದೂ ಹೆಚ್ಚಿಸಿದ ತುಟ್ಟಿಭತ್ತೆಯ ವಿಷಯ ಸರಕಾರವಿನ್ನೂ ವಿಚಾರನಡೆಸಿದ್ದು ನಿರ್ಣಯವಾದೊಡನೆ ಎಲ್ಲ ಶಾಲೆಗಳಿಗೂ ತಿಳಿಸಲಾಗುವದೆಂದೂ ಸರಕಾರೀ ಮಾ· ಶಾಲೆಗಳ ಶಿಕ್ಷಕರಿಗೆ ಸಂಘದ ಸದಸ್ಯರಾಗಲು ಅನುಮತಿಕೊಡುವ ವಿಷಯ ಸರಕಾರ ವಿಚಾರಿಸುತ್ತಿದೆಯೆಂದೂ ತಿಳಿಸಲಾಗಿದೆ.

ಹುಬ್ಬಳ್ಳಿ ಸತ್ಯಬೋಧ ವಾಚನಾಲಯದ ವಾರ್ಷಿಕೋತ್ಸವ ತಾ ೧೫-೧೬ನವಂಬರದಲ್ಲಿ ಪ್ರೊ ರಂ. ಶ್ರೀ ಮುಗಳಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ವಾಚನಾಲಯಗಳ ಅಭಿವೃದ್ಧಿ ಮತ್ತು ಚಳವಳಿಯ ವಿಷಯಕ್ಕೆ ಅಧ್ಯಕ್ಷರು ವಿಸ್ತೃತವಾಗಿ ಮಾತಾಡಿದರು. ವಿಚಾರ ಸಂಕಿರಣ, ನಾಟಕ ಕಾವ್ಯವಾಚನ ಮೊದಲಾದ ವಿವಿಧ ಕಾರ್ಯಕ್ರಮಗಳಿಂದ ಉತ್ಸವ ಮನೋರಂಜಕವಾಗಿತ್ತು.

ಗದುಗಿನಲ್ಲಿ ಶ್ರೀ ರಾ. ಶ್ರೀ. ಹುಕ್ಕೇರಿಕರ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿದ ಧಾರವಾಡ ಜಿಲ್ಹಾ ನೇಕಾರ ಪರಿಷತ್ತಿನಲ್ಲಿ ಆಹಾರ ವಸ್ತುಗಳ ಮೇಲಿನ ನಿಯಂತ್ರಣ ಹೋಗಲಾಡಿಸಬೇಕೆಂಬಿತ್ಯಾದಿ ೨೫ ಗೊತ್ತುವಳಿಗಳಾದವು.

ಧಾರವಾಡ ಕರ್ನಾಟಕ [illegible] ಸರರಾಗಿದ್ದ ಶ್ರೀ [illegible] ಗೋವೆಯಲ್ಲಿ ಭಾರತ [illegible] ಲಾಗಿದೆ.

ರೋಣ ತಾಲೂಕ ಕಾಂಗ್ರೆಸ [illegible] ಹೈದರಾಬಾದ [illegible] ಆ ತಾಲೂಕಿಗೂ [illegible] ಗಡಿಯ ಹಳ್ಳಿಗಳಲ್ಲಿ [illegible] ಯಿಂದಾಗಿ ಭಯ [illegible] ರಿಗೆ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರ ಪೂರೈಸಬೇಕೆಂದೂ [illegible] ವರು ಸೈನ್ಯ [illegible] ವಳಿಗಳಾದವು.

[illegible] ಪ್ರದೇಶದಲ್ಲಿ [illegible] ಸರಾದ [illegible] ಮತ್ತು [illegible] ಬಂಧಿಸಿದ್ದಾರೆ.

[illegible] ಹುಬ್ಬಳ್ಳಿ ನಗರದಲ್ಲಿ [illegible] ಒಂದು [illegible] ನಡೆಯಿತು. ಅಧಿಕಾರಿಗಳು [illegible] ಯಾವ ದುರ್ಘಟನೆಯುಳ್ಳದೆ ಜರುಗಿದವು.

ಹುಬ್ಬಳ್ಳಿಯ ಮುಸ್ಲಿಂ [illegible] ಅಧ್ಯಕ್ಷ [illegible] ವಿಚಾರಣೆಯಾಗಬೇಕೆಂದು [illegible].

ಭಾರತ [illegible] ಶ್ರೀ. [illegible] ತರಲಿರುವ ಗೊತ್ತುವಳಿಯ [illegible] ವಾಗಿ ಸಭೆಯ ಸದಸ್ಯರಿಗೆ ಏಕೀಕರಣ ಪ್ರತ್ಯಯ ಪರಿಚಯಮಾಡಿಕೊಡುವ ಸಲುವಾಗಿ ಏಕೀಕರಣ ಮಹಾಸಮಿತಿಯ ಕಾರ್ಯದರ್ಶಿ ಶ್ರೀ. ಮಂಗಳವೇಢೆ ಶ್ರೀನಿವಾಸರಾಯರು ದಿಲ್ಲಿಗೆಹೋಗಿದ್ದಾರೆ.

ದಕ್ಷಿಣ—ಕನ್ನಡ

ಕಾರ್ಕಳತಾಲೂಕು [illegible] ಜಾತ್ರೆ ಜರುಗಲಿರುವುದು.

[illegible] ವ್ಯವಹಾರ ಕ್ಷೇತ್ರದಲ್ಲಿರುವ [illegible] ಕಾಂಗ್ರೆಸ ಕಾರ್ಯಕರ್ತರಲ್ಲಿ ಕೆಲವರನ್ನು ಜಿಲ್ಲಾ ಕಾಂಗ್ರೆಸ ಕಮಿಟಿಯವರು ಕಾಂಗ್ರೆಸ್ಸಿನಿಂದ ಹಳ್ಳಿಹಾಕಿದ್ದಾರೆಂದು ಕೆಲವು ಕಾಂಗ್ರೆಸ ವಿರೋಧಿಗಳು ಅಪಪ್ರಚಾರ ನಡೆಸುತ್ತಿದ್ದಾರೆಂದು ತಮ್ಮ ತಿಳುವಳಿಕೆಗೆ ಬಂದಿದೆಯೆಂದೂ ಅದು ಶುದ್ಧ ಸುಳ್ಳೆಂದೂ ಜಿಲ್ಲಾ ಕಾಂಗ್ರೆಸ ಕಮಿಟಿಯ ಉಪಾಧ್ಯಕ್ಷರು ತಿಳಿಸುತ್ತಾರೆ.

ಕಾಸರಗೋಡಿನ ಕನ್ನಡ ಬರಹಗಾರರಾದ ಕಾರ್ಯಹಳ್ಳ ರಾಮಕೃಷ್ಣ ಶೆಟ್ಟರು ತಾ. ೯ ರಲ್ಲಿ ದೇವಂಗತರಾದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರು ಒಳ್ಳೆಯಬರಹಗಾರರಿದ್ದು ಹಳಗನ್ನಡದ ತಿಳಿಪ್ರಯೋಗಗಳನ್ನು ಹೊಸಗನ್ನಡದಲ್ಲಿ ಸಾಧಿಸಿಕೊಂಡವರಿದ್ದರು. ಇವರ ನಿಧನದಿಂದ ಕನ್ನಡನಾಡಿಗೆ ಬಹಳ ನಷ್ಟವಾಯಿತೆನ್ನಬಹುದು.

ಕಾರ್ತಿಕ ಶುದ್ಧ ದ್ವಾದಶದ ದಿನ ಮಂಗಳೂರಿನ ವಿದ್ಯಾರ್ಥಿಗಳೂ ತರುಣರೂ ವಂದೇ ಮಾತರಂ ಗೀತೆಯೊಡನೆ ಪ್ರಭಾತಫೇರಿ ನಡೆಸಿದರು. ಶ್ರೀಗಳಾದ ಕೆ ವಿರೂಪಾಕ್ಷಪ್ಪ ಹಾಗೂ ಬಿ. ಆರ್. ಮಲ್ಲಪ್ಪನವರು ವಿದ್ಯಾರ್ಥಿಗಳಿಗೆ ಗಾಂಧಿ ಟೊಪ್ಪಿಗೆ ಮತ್ತು ಪಾಟಿಗಳನ್ನು ಹಂಚಿದರು.

ಅಸಹಕಾರ ಚಳವಳದ ಕಾಲದಲ್ಲಿ ಮಂಗಳೂರಿನ ೩. ಸಿ. ಎ. [illegible] ಅಧ್ಯಾಪಕರಾಗಿದ್ದ ಶ್ರೀ ಯು. ಗೋವಿಂದರಾಯರು ತಾ ೨೦ ರಂದು ದಿವಂಗತರಾದರೆಂದು ತಿಳಿಸಲು ವಿಷಾದವಾಗುವುದು. ಕಳೆದ ೨ ವರ್ಷಗಳಿಂದ ಅವರು [illegible].

ಮಂಗಳೂರಿನ ಪ್ರದೇಶ ಸಮಿತಿಯ ಆಶ್ರಯದಲ್ಲಿ ತಾ ೧೪ ರಲ್ಲಿ ದೇಸಿಂಟ [illegible] ಜಯಂತಿಯು [illegible] ಅಧ್ಯಕ್ಷತೆಯಲ್ಲಿ ಜರುಗಿ [illegible] ಉಪನ್ಯಾಸವಾಯಿತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಧಾನ್ಯಗಳ ಪೂರೈಕೆ ಮತ್ತು ವಿತರಣೆಯಲ್ಲಿ [illegible]

[illegible]

ಉತ್ತರ ಕನ್ನಡ

[illegible]

ಬೆಳಗಾವಿ

[illegible] ಭಯಭೀತರಾಗಿದ್ದಾರೆ [illegible] ಗಡುನ ಹೇಳಲಾಗಿದೆ.

ಮುಂಬಯಿ

ಚಿಕ್ಕ ಚಿಕ್ಕ ಪಟ್ಟಣಗಳಲ್ಲಿಯ ಜನರಿಗೆ ಜಕ್ಕಲ ಕಸದ ಮತ್ತು ಮನೆತನದ ಸಾಮುಗ್ರಿಗಳಿಗಾಗಿ ಕಬ್ಬಿಣ ಉಕ್ಕು ಸುಲಭವಾಗಿ ಮತ್ತು ಸೋವಿದರದಿಂದ ದೊರೆವಂತೆ ಮಾಡುವ ಉದ್ದೇಶದಿಂದ ಮುಂಬಯಿ ಸರಕಾರದವರು ಈ ಪದಾರ್ಥಗಳನ್ನು ಸರಿಯಾಗಿ ಹಂಚುವ ಹೊಣೆಯನ್ನು ಜಿಲ್ಲಾ ರೂರಲ್ ಡೆವಲಪ್‌ಮೆಂಟ ಬೋರ್ಡುಗಳಿಗೆ ಕೊಟ್ಟಿದ್ದಾರೆ. ಈ ಬೋರ್ಡುಗಳಿಂದ ನಾಲ್ವನಾಲ್ಕು ತಗಡುಗಳು ಕಿತ್ತಿಯ ಕಬ್ಬಿಣ ಸಳಿಗಳು ಮತ್ತು ತಂತಿಗಳು ಮೊದಲಾದವನ್ನು ಪಡೆಯಬಹುದು. ಇತರ ಯಾವದೇ ಬಗೆಯ ಕಬ್ಬಿಣ ಮತ್ತು ಉಕ್ಕಿನ ಪದಾರ್ಥಗಳಿಗಾಗಿ ಎಂದಿನಂತೆ ಪ್ರಾಂತಿಕ ಕಬ್ಬಿಣ ಮತ್ತು ಉಕ್ಕಿನ ಹಿಡಾ ಅಧಿಕಾರಿಗಳ ಕಡೆಗೆ ಅರ್ಜಿ ಕಳಿಸಬೇಕು.

ಮುಂಬಯಿ ಪ್ರಾಂತದ ಅಬಕಾರೀ ಖಾತೆಯ ಮಂತ್ರಿ ಶ್ರೀ. ಎಲ್. ಎಂ. ಪಾಟೀಲರು, ಮುಂಬಯಿ ಸರಕಾರದವರು ಪ್ರಾಂತದಲ್ಲೆಲ್ಲ ತೆರೆಯಬೇಕೆಂದಿರುವ ನೀರಾ ಕೇಂದ್ರಗಳಲ್ಲೊಂದನ್ನು ಖಾಜಾ ಜಿಲ್ಹೆಯ ಬೋರ್ಡಿ ಎಂಬಲ್ಲಿ ಉದ್ಘಾಟಿಸಿದರು. ಮುಂಬಯಿ ಸರಕಾರದವರು ಮದ್ಯಪಾನ ನಿರೋಧಕ್ಕಾಗಿ ಕೈಕೊಂಡ ಕಾರ್ಯಕ್ರಮಗಳಲ್ಲಿ ಇದೊಂದು ವಿಶೇಷ. ನೀರಾದ ವೈದ್ಯಕೀಯ ಗುಣಗಳನ್ನು ಸಂಶೋಧಿಸುವದಕ್ಕಾಗಿ ಮುಂಬಯಿಯ ಹ್ಯಾಫ್‌ಕಿನ್ ಸಂಸ್ಥೆಯವರು ಕೆಲಸ ಮಾಡುತ್ತಿದ್ದಾರೆಂದೂ ನೀರಾವನ್ನು ಬಹಳ ದಿವಸ ಹೇಗೆ ಕಾಯ್ದಿಡಬಹುದೆಂಬ ಬಗ್ಗೆ ವ್ಯವಸ್ಥೆ ಮಾಡಲಾಗುವದೆಂದೂ ಮಂತ್ರಿಗಳು ಹೇಳಿದರು.

[illegible] ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ದೊರೆಯಬೇಕೆಂದು ಕಾಯದೆಯಾದ ಪ್ರಕಾರ ಈ [illegible] ಕಾರ್ತಿಕ ಏಕಾದಶಿ ಸೋಮವಾರ ಮುಂಬಯಿಯ [illegible] ಹರಿಜನ ಮಂತ್ರಿಗಳಾದ ಶ್ರೀ. ತಪಾಸೆಯವರು [illegible] ಪಂಢರಪುರದಲ್ಲಿಯ ವಿಠ್ಠಲ ಮಂದಿರವನ್ನು ಪ್ರವೇಶಿಸಿ ಪೂಜೆ ನಡೆಸುವರು.

[illegible] ಮುಂಬಯಿಯ ಗುಜರಾತಿ ದೈನಿಕ ವರ್ತಮಾನಪತ್ರಿಕೆಯು ಜುನಾಗಡದ ಶಾಂತಿಗೆ ಭಂಗತರುವ ರೀತಿ [illegible] ಪ್ರಚಾರ ನಡೆಸಿದೆಯೆಂದು ಅದನ್ನು [illegible] ಸಂಸ್ಥಾನದಲ್ಲಿ ಬರದಂತೆ ಜುನಾಗಡದ ಹೊಸ ಅಡ[illegible] ಳಿತಗಾರರು ನಿರ್ಬಂಧಿಸಿದ್ದಾರೆ.

[illegible]ಗೆ ಶ್ರೀ. ಎಸ್. ಕೆ. ಪಾಟೀಲರು ಅ. ಭಾ. [illegible] ಕಾಂಗ್ರೆಸ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಲಿರುವರೆಂದು ತಿಳಿಯುತ್ತದೆ.

[illegible]ದ ಕನ್ನಡಿಗರೂ ಮುಂಬಯಿಯಲ್ಲಿ ಪ್ರಮುಖ [illegible] ರೂ ಆಗಿದ್ದ ಶ್ರೀ. ಎಸ್. ಪಾಟೀಲರು [illegible] ರವಾಡದ ಆದರ್ಶ ವಿದ್ಯಾನಿಲಯಕ್ಕೆ ಹ[illegible] [illegible] ಗಳ ಉದಾರ ದಾನವಿತ್ತಿದ್ದ[illegible] [illegible] ಶ್ರೀ. ಆರ್ಜುಣಗಿ ರಾ[illegible] [illegible] ತಿಳಿಸುತ್ತಾರೆ.

[illegible] ಸಶಸ್ತ್ರ ಪೋಲೀಸಪಡೆಯ ಸಂರಕ್ಷಣೆಯಲ್ಲಿ [illegible] ಹರಿಜನ ಮಂತ್ರಿ ಶ್ರೀ. ಜಿ. ಡಿ. [illegible] ವಿಠ್ಠಲಮಂದಿರದಲ್ಲಿ ಪ್ರವೇಶ [illegible] ಪ್ರತಿಬಂಧಿಸಿ [illegible] ರಿಂದ ಮಂತ್ರಿಗಳು ಮರಳಿ ಬಂದರು.


ಮದ್ರಾಸ

[illegible] ಇಲ್ಲಿಯ ಕರ್ನಾಟಕ ಸೇವಾ ಸಂಘದ ಆಶ್ರಯ [illegible] ತಾ. [illegible] ರಂದು [illegible] ಭವನದಲ್ಲಿ ರಾಜ[illegible] ಪ್ರಸಕ್ತ ಮಂತ್ರಿ ವೆಂಕಟೇಶ ಅಯ್ಯಂಗಾ[illegible] ರಿಗಿದ್ದ[illegible] [illegible] ಸಮಸ್ಯೆಗಳನ್ನು ಕುರಿತು [illegible] ಮಾಡಿದರು. ಬಂಗಾಲ ಡೈಸಿಸ್ ಮ್ಯಾ[illegible] [illegible] ಕಂಪನಿಯ ಡಾಯರೆಕ್ಟರರಾದ [illegible] ಜಿ. ಎಸ್. ಮೂರ್ತಿಯವರು ನೂರು [illegible] ಕೊಟ್ಟ ಸಂಘದ ಪೋಷಕರಾದರಲ್ಲದೆ [illegible] ಸಹಾಯಾರ್ಥವಾಗಿ ಒಂದು ಉತ್ತಮ [illegible] ಒಬ್ಬರಿಗೆ ಸಾವಿರ [illegible] ಕೊಡುವದಾಗಿಯೂ [illegible] ಮಾಡಿದರು.

[illegible] ದಿಗರಾದ ಉಡುಪಿ ಕೃಷ್ಣರಾಯರು [illegible] ತಾ. ೨೦ ರಂದು ಮದ್ರಾಸ ಮೇಯರ [illegible] [illegible] ಶ್ರೀ. [illegible] [illegible]

ಪೂರ್ವ ಪಂಜಾಬ

[illegible] ಸ್ವಯಂ ಸೇವಕರ [illegible] ಪೂರ್ವ ಪಂಜಾಬ [illegible] ನಿರ್ಧರಿಸಿದ್ದಾರೆ. ಪ್ರಾಂತದಲ್ಲಿ [illegible] ಕಾಯಲು ಪೋಲೀಸರಿಗೆ [illegible] ಕಡೆ [illegible] ಬೇಕೆಂದು ಈ ಸ್ವಯಂ ಸೇವಕರಿಗೆ [illegible] ಶಸ್ತ್ರಾಸ್ತ್ರಗಳ ಶಿಕ್ಷಣ ಕೊಡಲಾಗು[illegible] ಪ್ರಾಂತದ ಎಲ್ಲ ಜಿಲ್ಹಾ ಮತ್ತು ಪ್ರಮುಖ [illegible] ಗಳಲ್ಲಿ ಕಮಾಂಡಂಟರನ್ನು ನೇಮಿಸಲಾ[illegible] [illegible] ಸ್ವಯಂ ಸೇವಕರನ್ನು ಕೆಲಸಕ್ಕೆ ಕರೆ[illegible] [illegible] ಯೋಗ್ಯ ಭತ್ತೆ ಕೊಡಲಾಗುವದು.



ಹೊಸದಿಲ್ಲಿ

ಜಾತೀಯ ಗಲಭೆಗಳಿಂದ ಪಂಜಾಬದಲ್ಲಿ ಆಗಷ್ಟ ೧೫ ರಿಂದ ಅಕ್ಟೋಬರ ೩೧ರ ವರೆಗೆ ರೇಲ್ವೆ ಖಾತೆಗೆ ೨,೩೩,೩೭,೦೦೦ ರೂಪಾಯಿಗಳ ಹಾನಿಯಾಗಿದೆಯೆಂದೂ ನಿರಾಶ್ರಿತರ ಉಗಿಬಂಡಿಗಳನ್ನು ನಡೆಸಲು ತಗಲಿದ ವೆಚ್ಚವನ್ನು ಭಾರತ ಸರಕಾರದ ಸಾಮಾನ್ಯ ಆದಾಯದಲ್ಲಿ ವಜಾ ಮಾಡಿಕೊಳ್ಳಲಾಗಿದೆಯೆಂದೂ ಡಾ. ಮಥಾಯಿಯರು ಶ್ರೀ ಸಂತಾನಂರವರಿಗೆ ತಿಳಿಸಿದರು.

ರಾಷ್ಟ್ರದ ವಿಭಜನೆಯಿಂದ ವಾರ್ಷಿಕ ಆಹಾರ ಕೊರತೆಯು ಎಂಟು ಲಕ್ಷ ಟನ್ನುಗಳಷ್ಟು ಏರಿದೆಯೆಂದು ಆಹಾರ ಮಂತ್ರಿಗಳು ತಿಳಿಸಿದರು.

ಭಾರತದ ಕೇಂದ್ರ ಶಾಸನಸಭೆಯಲ್ಲಿ ಸಂರಕ್ಷಣ ಮಂತ್ರಿಗಳು ಪಂಡಿತ ಕುಂಜರುರವರ ಪ್ರಶ್ನೆಗೆ ಉತ್ತರ ಕೊಡುತ್ತ ೧೯೪೮ ಜಾನೇವಾರಿ ೧ ರ ನಂತರವೂ ಹಿಂದೀ ಸೈನ್ಯ ಪಡೆಯಲ್ಲಿ ಬ್ರಿಟಿಶ ಅಧಿಕಾರಿಗಳನ್ನು ಇಟ್ಟುಕೊಳ್ಳಲಾಗುವದೆಂದು ಹೇಳಿದರು.

ಹೈದರಾಬಾದ ಸಂಸ್ಥಾನ ಕಾಂಗ್ರೆಸಿನ ಪರವಾಗಿ ಶ್ರೀಗಳಾದ ಎ. ಕಾಲೇಶ್ವರರಾವ, ಪಿ. ಡಿ. ಸರಾಫ ಮತ್ತು ಪ್ರಾದೇಶಾಚಾರ್ಯರು ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರನ್ನು ಕಂಡು ಹೈದರಾಬಾದ ಪರಿಸ್ಥಿತಿಯನ್ನು ಅವರೊಡನೆ ಚರ್ಚಿಸಿದರು.

ಪಾಕಿಸ್ತಾನ ಸರಕಾರವು ತೋರಿಕೆಗೆ ಅಧಿಕೃತ ನಿರಾಕರಣೆಯ ಪ್ರಕಟನೆಗಳನ್ನು ಹೊರಡಿಸುತ್ತಿದ್ದರೂ ಒಳಗಿಂದೊಳಗೆ ದಾಳಿಗರಿಗೆ ಸಹಾಯ ನೀಡುತ್ತಿದೆ. ಇತ್ತೀಚಿಗೆ ೨೫೦ ಟ್ರಕ್ಕುಗಳಲ್ಲಿ ಆಹಾರ ಯುದ್ಧೋಪಕರಣ ಹಾಗು ಮದ್ದುಗುಂಡು ಮೊದಲಾದವು ಪೇಶಾವರದಿಂದ ಅಬ್ಬೊಟಾಬಾದದ ಮಾರ್ಗವಾಗಿ ದಾಳಿಗಾರರಿದ್ದಲ್ಲಿಗೆ ತೆರಳಿದವು.

ಹಾಜಾರಾ ಜಿಲ್ಹೆಯಿಂದ ಗುಡ್ಡಗಾಡು ಜನರ್‍ತಂಡತಂಡಗಳಲ್ಲಿ ಕಾಶ್ಮೀರಕ್ಕೆ ಹೋಗುತ್ತಿರುವರು. ಪಾಕಿಸ್ತಾನದ ವಿಮಾನಗಳು ದಾಳಿಗರಿಗೆ ಶತ್ರುಗಳ ಚಲನವಲನವನ್ನು ತಿಳಿದುಕೊಳ್ಳುವಲ್ಲಿ ನೆರವಾಗುತ್ತಿವೆಯೆಂದು ಸುದ್ದಿ ಬಂದಿದೆ.

ಭಾರತ ಸರಕಾರದ ಅಧೀನದಲ್ಲಿರುವ ಎಲ್ಲ ರೇಲ್ವೆಗಳಲ್ಲಿಯೂ ಒಂದೇ ಬಗೆಯ ಪ್ರವಾಸಿಕರ ದರ ಬಳಕೆಯಲ್ಲಿರುವಂತೆ ಸರಕಾರದವರು ವ್ಯವಸ್ಥೆ ಮಾಡಲಿದ್ದಾರೆ. ಈ ಬಗೆಯ ಪ್ರಯತ್ನ ನಡೆದುದು ಇದೇ ಮೊದಲ ಸಲ.

ಕಾಂಗ್ರೆಸ ಘಟನಾಸಮಿತಿಯು ಇದೇ ನವೆಂಬರ ೩೦ ಮತ್ತು ಡಿಸೆಂಬರ ೧ ನೇ ತಾರೀಕುಗಳಲ್ಲಿ ಸೇರುವದಾಗಿ ತಿಳಿಯುತ್ತದೆ.

ಡಾ. ಖರೆಯವರು ಕೆಲದಿನ ಇಲ್ಲಿ ಉಳಿದು ತಾ. ೧೯ ರಂದು ರಾತ್ರಿ ಅಲಹಾಬಾದಕ್ಕೆ ತೆರಳಿದರು. ಪ್ರಾಂತೀಯ ಸಂರಕ್ಷಣದಲದ ಸಂಘಟನೆಗಾಗಿ ಅವರು ಮಧ್ಯಪ್ರಾಂತದ ಕೆಲವು ಜಿಲ್ಹೆಗಳಲ್ಲಿ ಸಂಚರಿಸಲಿರುವರು. ಸರಕಾರದಿಂದ ಪ್ರತ್ಯೇಕವಾಗಿ ರಚಿತವಾಗುವ ಈ ಪ್ರಾಂತೀಯ ಸಂರಕ್ಷಣದಲಕ್ಕಾಗಿ ಸರಕಾರವು ೧೫ ಲಕ್ಷ ರೂ. ಗಳ ಧನಸಹಾಯ ನೀಡಲು ಒಪ್ಪಿದೆ. ಜಿಲ್ಹೆಗಳಲ್ಲಿಂದ ಬಾಲಕರನ್ನು ಆರಿಸಿಕೊಂಡು ಹೋಗುವದೇ ಈ ಪ್ರಾಂತೀಯ ಸಂರಕ್ಷಕದಲದ ಕರ್ತವ್ಯವಾಗಿದೆ.

ಮಧ್ಯಪ್ರಾಂತ

ಡೇರೆಗಳು, ವಾಯರಲೆಸ್ ಉಪಕರಣಗಳು, ಮಿಲಿಟರಿ ಎಂಜನಿಯರಿಂಗ ಸಲಕರಣೆಗಳು ಮೊದಲಾದುವನ್ನು ಹೇರಿಕೊಂಡು ಹೈದರಾಬಾದ ಸಂಸ್ಥಾನದ ಕಡೆಗೆ ಹೊರಟಿದ್ದ ಟ್ರಕ್ಕುಗಳನ್ನು ನಾಶಿಕ ಜಿಲ್ಹಾ ಮ್ಯಾಜಿಸ್ಟ್ರೇಟರ ಅಜ್ಞೆಯ ಮೇರೆಗೆ ಪುನಮಾಡದ ಹತ್ತಿರ ತಡೆದು ನಿಲ್ಲಿಸಲಾಯಿತು. ಟ್ರಕ್ಕುಗಳ ಡ್ರಾಯವ್ಹರರು ಬಂಧಿತರಾಗಿದ್ದಾರೆ.

೧೭ ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜ್ ಕೋಆಪರೇಟಿವ್ ಸೊಸಾಯಿಟಿಯ ಡೈರೆಕ್ಟರುಗಳ ಚುನಾವಣೆ ನವೆಂಬರ ೧೫ ರಲ್ಲಿ ನಡೆಯಿತು. ಶ್ರೀಗಳಾದ ಬಿ. ಜಿ. ಅಶ್ವತ್ಥ್, ಪಿ. ಸಿ. ಹಿರೇಮಠ, ಎಸ್. ಸಿ. ಶಿವನಂಜಪ್ಪ ಮತ್ತು ಇತರ ನಾಲ್ವರು ಚುನಾಯಿತರಾದರು.

ಹಿಂದೀ ಸಂಸ್ಥಾನ

ಸ್ತ್ರೀಯರ ಮಾನಭಂಗ ಸುಲಿಗೆ ಮುಂತಾದ ಅಪರಾಧಗಳಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಕಾಶ್ಮೀರ ಸರಕಾರವು ಕಟ್ಟಪ್ಪಣೆ ಹೊರಡಿಸಿದೆ.

ಕೊಲ್ಹಾಪುರದ ಹೊಸ ಮಂತ್ರಿಮಂಡಲದ ನಾಲ್ವರು ಮಂತ್ರಿಗಳಾದ ಶ್ರೀ. ವಸಂತರಾವ ಬಾಗಲ, ಶ್ರೀ. ಡಿ. ಎಸ್. ಖಾಂಡೇಕರ, ಶ್ರೀ. ನಾರಾಯಣರಾವ ಸರನಾಯಕ ಮತ್ತು ಶ್ರೀ. ಟಿ. ಎಸ್. ಕಾರಖಾನಿಸ ಇವರ ಪ್ರತಿಜ್ಞಾವಿಧಿಯು ತಾ. ೨೧ ರಂದು ಜರುಗಿತು. ಈ ನಾಲ್ವರೂ ಪ್ರಜಾಪರಿಷತ್ತಿನವರಿದ್ದಾರೆ. ಈ ಹೊಸ ಮಂತ್ರಿಮಂಡಲದೊಡನೆ ಸರ್ವವಿಧದಿಂದಲೂ ಸಹಕರಿಸುವದಾಗಿ ಪ್ರತಿಜ್ಞಾವಿಧಿಯ ನಂತರ ಮಹಾರಾಜರು ತಮ್ಮ ಭಾಷಣದಲ್ಲಿ ಹೇಳಿದರು.

ಜುನಾಗಡ ಸಂಸ್ಥಾನದ ಹೊಸ ಆಡಳಿತಗಾರರಾದ ಶ್ರೀ. ಎಸ್. ಡಬ್ಲ್ಯೂ. ಶಿವೇಶ್ವರಕರರು ಜುನಾಗಡ ಸಂಸ್ಥಾನ ಮಂಡಲವನ್ನು ವಿಸರ್ಜಿಸಿದ್ದಾರೆ. ಈ ಮಂಡಲವು ೧೯೪೪ ರಿಂದ ಅಸ್ತಿತ್ವದಲ್ಲಿತ್ತು. ಈಗ ಈ ಮಂಡಲದೊಡನೆ ವ್ಯವಹರಿಸಲಿಚ್ಛಿಸುವವರು ಆಡಳಿತಗಾರರಾದ ಶ್ರೀ. ಶಿವೇಶ್ವರಕರರೊಡನೆ ಪತ್ರವ್ಯವಹಾರ ಮಾಡಬೇಕು.

ಜಮ್ಮು ಪ್ರದೇಶದಲ್ಲಿ ಶೇಖ ಅಬ್ದುಲ್ಲಾರಿಂದ ಒಡಗೂಡಿದ ಸದಿಚ್ಛಾ ಮಂಡಲವು ಕೈತುಂಬ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದೆ. ಪುನರ್ನಿವೇಶನ ಕಾರ್ಯಕ್ಕಾಗಿ ಶೇಖ ಅಬ್ದುಲ್ಲಾರ ಬಿನ್ನಹದ ಮೇರೆಗೆ ೧೦,೦೦೦ ರೂ. ಗಳು ಕೂಡಿವೆ. ಅವರ ಕರೆಗೆ ಶಾಂತಿಪಥಕದಲ್ಲಿ ಸೇರಲು ನೂರಾರು ತರುಣರು ಮುಂದೆ ಬರುತ್ತಿದ್ದಾರೆ.

ಜಮ್ಮು ನಗರದಲ್ಲಿ ವ್ಯಾಪಾರ ವ್ಯವಹಾರಗಳು ಎಂದಿನಂತೆ ನಡೆಯುತ್ತಿವೆ. ಈ ನಗರದ ಆಡಳಿತವನ್ನು ಕುಲವಂತಸಿಂಗ ಎಂಬ ಹಿಂದೀ ಸೇನಾಧಿಕಾರಿಗೆ ಒಪ್ಪಿಸಲಾಗಿದೆ.

ಹಿಂದುಸ್ತಾನ ಸರಕಾರದ ಶಿಲ್ಪಶಾಸ್ತ್ರಜ್ಞರು ಮತ್ತು ಎಂಜನಿಯರರು ಶೀಘ್ರದಲ್ಲಿಯೇ ಜುನಾಗಡ ಸಂಸ್ಥಾನದಲ್ಲಿಯ ಪ್ರಭಾಸ ಪಟ್ಟಣಕ್ಕೆ ಬಂದು ಘಜನಿ ಮಹಮ್ಮದನಿಂದ ಸುಲಿಯಲ್ಪಟ್ಟ ಸೋಮನಾಥ ದೇವಾಲಯದ ಅವಶೇಷಗಳನ್ನು ಪ್ರತ್ಯಕ್ಷ ಅಭ್ಯಸಿಸಿ ವುಗಳನ್ನು ಪುನಃ ಪೂರ್ವ ಗುಜರಾಥಿನಲ್ಲಿ ಸ್ಥಾಪಿಸುವ ಯೋಜನೆಯನ್ನು ಸಿದ್ಧಪಡಿಸಲಿರುವರು. ದೇವಾಲಯದ ಜೀರ್ಣೋದ್ಧಾರವಲ್ಲದೆ ಅಲ್ಲಿ ಒಂದು ಸಂಸ್ಕೃತ ವಿಶ್ವವಿದ್ಯಾಲಯವನ್ನೂ ಸ್ಥಾಪಿಸುವ ವಿಚಾರ ನಡೆದಿದೆ. ಅದು ಒಂದು ಸಾವಿರ ವಿದ್ಯಾರ್ಥಿಗಳಿಗೆ ಗುರುಕುಲವಾಗಬಹುದು.

ಹೈದರಾಬಾದ

ಹೈದರಾಬಾದ ನಿಜಾಮ ಹಾಗು ಹಿಂದುಸ್ತಾನ ಸರಕಾರದ ನಡುವೆ ತಾ ೨೫ ರಂದು ಯಥಾಸ್ಥಿತಿ ಒಪ್ಪಂದವಾಯಿತು. ಹೈದರಾಬಾದ ಶಿಷ್ಟಮಂಡಲವು ಒಪ್ಪಂದದ ಕರಾರುಗಳಿಗೆ ಒಪ್ಪಿಕೊಂಡಿರುವದು. ಮಂಡಲದ ಮುಖಂಡರಾದ ನವಾಬ ಮೊಯಿನ ನವಾಬ ಜಂಗರು ಒಪ್ಪಂದಕ್ಕೆ ನಿಜಾಮರ ಅಂಕಿತ ಕೊರಕಿಸಲು ವಿಮಾನದಿಂದ ಹೊರಟರು.

ನಿಜಾಮ ಸರಕಾರವು ಹೈದರಾಬಾದ ಕಾಂಗ್ರೆಸಿಗೆ ಒಡಂಬಿಕೆಯ ಕರಾರುಗಳನ್ನು ಕಳಿಸಿದುದಾಗಿ ಸುದ್ದಿಯಿದೆ. ಸರಕಾರದಲ್ಲಿ ಹಿಂದು ಮುಸ್ಲಿಮರಿಗೆ ಸರಿ ಅರ್ಧ ಪ್ರತಿನಿಧ್ಯವಿರಬೇಕೆಂದು ಒಂದು ಕರಾರಿದೆ.

ಭಾರತಸರಕಾರದ ಸಂಸ್ಥಾನ ಖಾತೆಯವರೊಡನೆ ಮಾತುಕತೆಪ್ರಾರಂಭಿಸಲು ನವಾಬ ಮೊಯಿನ ನವಾಬ ಯಾಜಂಗ ಬಹದ್ದೂರರ ಧುರೀಣತ್ವದಲ್ಲಿ ಹೈದರಾಬಾದ ಶಿಷ್ಟಮಂಡಲವು ತಾ ೨೧ ರಂದು ಸಂಜೆ ಹೊಸದಿಲ್ಲಿಗೆ ತಲುಪಿತು. ಕೂಡಲೆ ಶ್ರೀ ವಿ. ಪಿ. ಮೆನನ್ನರನ್ನು ಶಿಷ್ಟಮಂಡಲವು ಸಂಧಿಸಿತು.

ರಾಜಕೀಯ ಸುಧಾರಣೆಗಳನ್ನು ಘೋಷಿಸುವ ವಿಷಯದಲ್ಲಿ ನಿಜಾಮ ಸರಕಾರವು ಆಸ್ಥೆಯಿಂದ ಪ್ರಯತ್ನ ನಡೆಸಿದೆ. ಈ ಬಗ್ಗೆ ಜೇಲಿನಲ್ಲಿದ್ದ ಹೈದರಾಬಾದ ಸಂಸ್ಥಾನ ಕಾಂಗ್ರೆಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರೊಡನೆ ನಿಜಾಮ ಸರಕಾರದ ಪ್ರತಿನಿಧಿಯೊಬ್ಬನು ಸಂಧಾನದ ಬಗ್ಗೆ ಮಾತುಕತೆ ನಡೆಸಿದ್ದಾಗಿ ತಿಳಿದುಬಂದಿದೆ.

ಪಾಕಿಸ್ತಾನ

ಕರಾಚಿ ನಗರದ ಬ್ಯಾಂಕ ಆಫ್ ಇಂಡಿಯಾ ಕಚೇರಿಯಲ್ಲಿ ನಾಲ್ವರು ನುಗ್ಗಿ ಕಾವಲುಗಾರನನ್ನು ಗುಂಡಿಕ್ಕಿ ಕೊಂದು ಅವನ ಕೈಯಲ್ಲಿಂದ ೫,೭೦,೦೦೦ ರೂಪಾಯಿಗಳ ಚೀಲವನ್ನು ತುಡುಗು ಮಾಡಿಕೊಂಡು ಹೋದರು. ಈ ನಾಲ್ವರು ಪುಂಡರು ಕಾರಿನಲ್ಲಿ ಬಂದರೆಂದು ತಿಳಿಯುತ್ತದೆ. ಇಂಡಿಯಾ ಬ್ಯಾಂಕಿನ ಕಾರಕೂನರೂ ಆಳೂ ಈ ಹಣವನ್ನು ರಿಜರ್ವ ಬ್ಯಾಂಕಿಗೆ ಜಮೆ ಮಾಡಲು ಹೊರಟಾಗ ಈ ದರೋಡೆ ಸಂಭವಿಸಿತು.

ಬ್ರಿಟಿಶ್ ರೆಡ್‌ಕ್ರಾಸ್ ಸಂಸ್ಥೆಯವರು ನಿರಾಶ್ರಿತರ ಸಹಾಯಕ್ಕೆಂದು ಪಾಕಿಸ್ತಾನ ಸರಕಾರಕ್ಕೆ ೧,೦೦,೦೦೦ ಪೌಂಡು ಕಾಣಿಕೆ ಕೊಟ್ಟಿದ್ದಾರೆ.

ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ಹೋದ ಮತ್ತು ಎನ್. ಡಬ್ಲ್ಯು. ರೇಲ್ವೆಯಲ್ಲಿ ಕೆಲಸಕ್ಕೆ ಸೇರಿದ ರೇಲ್ವೆ ಕೂಲಿಕಾರರು ಲಾಹೋರದಲ್ಲಿ ತಾ. ೧೯ ರಂದು ಒಂದು ಪ್ರಚಂಡ ಸಭೆ ಸೇರಿಸಿ ತಮ್ಮನ್ನು ನಡೆಯಿಸಿಕೊಳ್ಳುವ ರೀತಿಯ ಬಗ್ಗೆ ಅಸಂತೋಷ ವ್ಯಕ್ತ ಮಾಡಿದರು. ಒಂದು ಗೊತ್ತುವಳಿ ಪಾಸುಮಾಡಿ ಪಾಕಿಸ್ತಾನದ ಅಧಿಕಾರಿಗಳು ತೋರಿಸಿದ ಭೇದಭಾವ ಮತ್ತು ಪಕ್ಷಪಾತಗಳನ್ನು ಖಂಡಿಸಲಾಯಿತು.

ನ್ಯೂಯಾರ್ಕದಲ್ಲಿ ಪಾಕಿಸ್ತಾನದ ತಾತ್ಕಾಲಿಕ ಟ್ರೇಡ ಕಮೀಶನರರಾದ ಶ್ರೀ. ಶಫಿಯವರನ್ನು ೧೯೪೭ ನೇ ಅಕ್ಟೋಬರ ೨೦ ರಿಂದ ಅಮೇರಿಕೆಯಲ್ಲಿ ಪಾಕಿಸ್ತಾನದ ರಾಯಭಾರಿಯೆಂದು ನೇಮಿಸಲಾಗಿದೆಯೆಂದು ತಾ. ೧೯ ನೇ ದಿನ ಕರಾಚಿಯಿಂದ ಸರಕಾರಿ ಪ್ರಕಟನೆಯೊಂದು ಹೊರಟಿದೆ. ಶ್ರೀ. ಶಫಿಯವರು ಪಾಕಿಸ್ತಾನಕ್ಕೆ ಸೇರುವ ಮೊದಲು ಹಿಂದೀ ಟ್ರೇಡ್ ಕಮಿಶನರರೆಂದು ನ್ಯೂಯಾರ್ಕದಲ್ಲಿ ಕೆಲಸ ಮಾಡುತ್ತಿದ್ದರು.

ಕನ್ನಡ ಸಂಸ್ಥಾನ

ಮುಧೋಳ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸುತ್ತ ಸಂಸ್ಥಾನದ ಕಂದಾಯ ಮಂತ್ರಿ ಶ್ರೀ ರಾಮಣ್ಣಾ ಸೊನ್ನದರು ಸಂಗ್ರಹದಲ್ಲಿ ೧೧೦೦ ಚೀಲ ಜೋಳ ೫೦೦೦ ಚೀಲ ಗೋದಿ ಇವೆಯೆಂದೂ ಇನ್ನೂ ೫೦೦ ಚೀಲ ಗೋದಿಬರುವ ಆಶೆಯಿದೆಯೆಂದೂ ತಿಳಿಸಿದರು. ಸಂಸ್ಥಾನದಲ್ಲಿ ಪೂರ್ವಭಾಗದ ಶೆಜ್ಜೆ ಶೇಂಗಾ ಬೆಳೆ ಚೆನ್ನಾಗಿದ್ದರೂ ಪಶ್ಚಿಮಭಾಗದಲ್ಲಿ ಶೆಜ್ಜೆ ಕೆಟ್ಟಿದೆಯೆಂದೂ ಹೇಳಿದರು.

ಕೋಲಾರ ಚಿನ್ನದ ಗಣಿಯಲ್ಲಿ ಬಂಡೆಗಲ್ಲುಗಳು ಅಕಸ್ಮಾತ್ ಸ್ಫೋಟವಾಗಿ ೧೫ ಜನರು ಮಣ್ಣಲ್ಲಿ ಸಂರಕ್ಷಕ ಪಥಕಗಳು ಕೆಲಸ ನಡೆಸಿವೆ.

ಶಿವಮೊಗ್ಗೆಯಲ್ಲಿ ಇನ್ನೂ ಜಾತೀಯ ಗಲಭೆಯ ಕಿರುಕುಳ ಪ್ರಸಂಗಗಳು ನಡೆದಿದ್ದು ಲಾರಿಗಳ ಪ್ರವೇಶವನ್ನು ಪ್ರತಿಬಂಧಿಸಲಾಗಿದೆ. ಪೋಲೀಸ ಹಾಗು ಮಿಲಿಟರಿ ಕಾವಲು ಬಿಗುವಾಗಿದೆ.

ಹಾಸನ ಇಂಟರ ಕಾಲೇಜಿನ ಇತಿಹಾಸಾಧ್ಯಾಪಕ ಶ್ರೀ ಅಬ್ದುಲ್ ಸಾಲಿಮ ಇವರು ಪಾಠ ಹೇಳುವಾಗ ಹಿಂದು ಮುಸ್ಲಿಂ ಪುರುಷರಲ್ಲಿ ಭೇದಭಾವವನ್ನು ತೋರ್ಪಡಿಸಿದ್ದನ್ನು ನಿಷೇಧಿಸಲು ವಿದ್ಯಾರ್ಥಿಗಳು ಹರತಾಳ ಆಚರಿಸಿದರು.

ಹರಿಹರದಲ್ಲಿ ಹಿಂದು ಮುಸ್ಲಿಂ ದಂಗೆಯಾಗುವ ಸಂಭವ ತೋರಿಸಿದ್ದರಿಂದ ಎರಡೂ ಜಾತಿಗಳ ಪ್ರಮುಖರನ್ನು ಕರೆಸಿ ಅಧಿಕಾರಿಗಳು ಶಾಂತತಾ ಸಮಿತಿ ಸ್ಥಾಗಿಸಿದರು.

ಜಮಖಂಡಿ ಸಂಸ್ಥಾನದ ಗ್ರಾಮಗಳಲ್ಲಿಯ ಸರಕಾರಿ ಕಾಗದಪತ್ರಗಳೆಲ್ಲ ಕನ್ನಡದಲ್ಲಿರಬೇಕೆಂದೂ ಕೆಳ ಅಧಿಕಾರಿಗಳು ೬ ತಿಂಗಳಲ್ಲಿ ಕನ್ನಡ ಕಲಿತೇ ತೀರಬೇಕೆಂದೂ ಅರ್ಥಮಂತ್ರಿಗಳು ವಿಧಿಸಿದ್ದಾರೆ.

ಯಾದಗಿರಿಯಲ್ಲಿ ಮುಸಲ್ಮಾನ ಪುಂಡರು ಒಬ್ಬ ಮಾರವಾಡಿಯನ್ನೂ ಅವನ ಹೆಂಡತಿಯನ್ನೂ ಕೊಂದು ಮನೆಯನ್ನು ದೋಚಿಕೊಂಡು ಹೋದರು.

ಸೊಲ್ಲಾಪುರ

ಪುಣೆ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಸೊಲ್ಲಾಪುರವನ್ನೂ ಸೇರಿಸಿದ್ದನ್ನು ವಿರೋಧಿಸಿ ಅಲ್ಲಿಯ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ನಾಗಪ್ಪಣ್ಣ ಕಾಡಾದಿಯವರು ಒಂದು ಹೇಳಿಕೆ ಹೊರಡಿಸಿದ್ದಾರೆ. ಸೊಲ್ಲಾಪುರದ ಕೆಲಭಾಗ ಕರ್ನಾಟಕಕ್ಕೆ ಸೇರಬೇಕಾಗಿರುವದರಿಂದ ಗಡಿನಿರ್ಣಯವಾದ ಹೊರತು ಅದನ್ನು ಯಾವದೇ ಪ್ರಾದೇಶಿಕ ವಿಶ್ವವಿದ್ಯಾಲಯದ ಅಧಿಕಾರ ಕಕ್ಷೆಯಲ್ಲಿ ತರುವದು ಅನ್ಯಾಯವೆಂದು ಅವರು ಹೇಳಿದ್ದಾರೆ.

ಪ್ರಜಾಪ್ರತಿನಿಧಿ ಸಭೆಯ ಹೌಸ್ ಕಮಿಟಿಗೆ ಪಬ್ಲಿಕ್ ವರ್ಕ್ಸ ಮಂತ್ರಿಗಳಾದ ಶ್ರೀ ಎಚ್. ಸಿದ್ದಯ್ಯನವರನ್ನು ನೇಮಿಸಲಾಗಿದೆಯೆಂದು ತಿಳಿಯುತ್ತದೆ.

ಕೇಂದ್ರ ಶಾಸನ ಸಭೆ

ರೇಲ್ವೆ ದರಗಳು ಏರಿದವು

ಉದ್ಯೋಗಗಳ ಬೆಳವಣಿಗೆ, ಆರ್ಥಿಕ ಸಹಾಯ ಸಂಸ್ಥೆ

ಹೊಸದಿಲ್ಲಿಯ ಕೇಂದ್ರ ಶಾಸನ ಸಭೆಯು ತಾ. ೧೭ ರಂದು ಅತ್ಯಂತ ಉತ್ಸಾಹದಿಂದಲೂ ಸಂಭ್ರಮದಿಂದಲೂ ಡಾ. ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿರಲು ಪ್ರಾರಂಭವಾಯಿತು. ಭಾರತ ಘಟನಾ ಸಮಿತಿಯೇ ಕೇಂದ್ರಶಾಸನ ಸಭೆಯಾಗಿ ಮಾರ್ಪಟ್ಟಿತು. ಹಳೆಯ ಕೇಂದ್ರಶಾಸನ ಸಭೆಯ ಅಧ್ಯಕ್ಷರಾದ ಶ್ರೀ. ಮಾವಳಣಕರರೇ ಈಗಲೂ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಗ್ಗೆ ಶ್ರೀ ರಾಜೇಂದ್ರರು ಸಾರಿ ಹೇಳಿದರು. ಆಯ್ಕೆಯ ನಂತರ ಪಂ. ಜವಾಹರಲಾಲ ಮತ್ತು ಸರದಾರ ವಲ್ಲಭಭಾಯಿ ಪಟೇಲರು ಶ್ರೀ ಮಾವಳಣಕರರನ್ನು ಅಧ್ಯಕ್ಷ ಪೀಠಕ್ಕೆ ಕರೆದೊಯ್ದರು ಮತ್ತು ಡಾ. ರಾಜೇಂದ್ರ ಪ್ರಸಾದರಿಂದ ಶ್ರೀ ಮಾವಳಣಕರರು ಅಧ್ಯಕ್ಷ ಸ್ಥಾನವನ್ನು ಒಪ್ಪಿಸಿಕೊಂಡರು. ನಂತರ ಮುಖ್ಯ ಪ್ರಧಾನರೂ ಸಭಾ ಧುರೀಣರೂ ಆದ ಪಂ. ಜವಾಹರರು ಹೊಸ ಅಧ್ಯಕ್ಷರನ್ನು ಅಭಿನಂದಿಸಿ ಸ್ವತಂತ್ರ ಭಾರತದ ಪ್ರತಿನಿಧಿಗಳೆಂದು ತಾವೆಲ್ಲ ನೆರೆದಿರುವದಾಗಿ ಹೇಳಿ ಭಾಷಣ ಮೊದಲಿಸುತ್ತಲೇ ಸಭೆ ಹರ್ಷೋದ್ಗಾರಕಲರವದಿಂದ ತುಂಬಿಹೋಯಿತು.

ಹಿಂದಿನ ಮಸೂದೆಗಳು

ಹಿಂದಿನ ಕೇಂದ್ರ ಶಾಸನ ಸಭೆಯು ಮುಂದಿದ್ದ ಕೆಳಗಿನ ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳಲು ಸಭೆ ಒಪ್ಪಿತು. ಬ್ಯಾಂಕಿಂಗ ಕಂಪನಿಗಳ ಕಾಯದೆಗಳನ್ನು ತಿದ್ದಿ ಅವುಗಳನ್ನು ಸಮನ್ವಯಿಸುವ ಮಸೂದೆ; ವಿಮಾ ಕಾಯದೆ ತಿದ್ದುಪಡಿ, ವಕೀಲರ ಕಾಯದೆ (೧೮೭೯) ಮತ್ತು ಇಂಡಿಯಾ ಬಾರ ಕೌನ್ಸಿಲ್ ಕಾಯದೆ (೧೯೨೬) ಇವುಗಳ ತಿದ್ದುಪಡಿ ಮಾಡುವಮಸೂದೆ ಹಿಂದು ಕಾಯದೆಯ ಕೆಲವು ಶಾಖೆಗಳನ್ನು ತಿದ್ದಿ ಅವನ್ನು ಕ್ರೋಡೀಕರಿಸುವ ಬಗ್ಗೆ ಮಸೂದೆ. ಮೊದಲನೆಯ ಮಸೂದೆ ಶ್ರೀ ಷಣ್ಮುಖಂ ಚೆಟ್ಟಿಯಾರರ ಎರಡನೆಯದು ಶ್ರೀ. ಸಿ. ಎಚ್. ಭಾಭಾರವರ ಮತ್ತು ಉಳಿದವುಗಳು ಡಾ ಅಂಬೇಡಕರ ಹೆಸರಿನಲ್ಲಿ ಇದ್ದವು.

ಹೊಸ ಮಸೂದೆಗಳು

ಸಭೆಯ ಎದುರಿಗೆ ಹೊಸ ಮಸೂದೆಗಳೂ ಬಂದವು. ಸರದಾರ ಪಟೇಲರಿಂದ ೧೯೪೭ ನೆಯ ವಿದೇಶಿ ಜನರ ಕಾಯದೆಯ ತಿದ್ದುಪಡಿಯ ಮಸೂದೆ; ಶ್ರೀ ಜಗಜೀವನರಾಮರ ಧಕ್ಕೆ ಕೂಲಿಕಾರ ನೌಕರಿ ನಿಯಮಗಳನ್ನು ಕ್ರಮಪಡಿಸುವ ಬಗ್ಗೆ ಮಸೂದೆ; ಡಾ. ಶಾಮಪ್ರಸಾದರ ಇಂಡಿಯನ್ ಪೇಟೆಂಟ್ಸ ಮತ್ತು ಡಿಝೈನ್ಸಿನ ಕಾಯದೆಯ ಅವಧಿಯನ್ನು ಬೆಳೆಸುವ ತಿದ್ದುಪಡಿ ಮಸೂದೆ; ಶ್ರೀ ಷಣ್ಮುಖಂ ಚೆಟ್ಟಿಯಾರರ ವಿದೇಶಿ ನಾಣ್ಯ ವಿನಿಮಯ ಕಾಯದೆ ತಿದ್ದುಪಡಿ ಮಸೂದೆ ಇವೇ ಮೊದಲಾಗಿ ಇನ್ನೂ ಕೆಲ ಮಸೂದೆಗಳು ಮಂಡಿಸಲ್ಪಟ್ಟವು

ವಿದೇಶಿ ವಿನಿಮಯ ಕಾಯದೆ ತಿದ್ದುಪಡಿ ಮಸೂದೆಯು ಬೆಳ್ಳಿ ಬಂಗಾರದ ಆಯಾತಕ್ಕೆ ಸಂಬಂಧಪಟ್ಟದ್ದಾಗಿದೆ. ಬೇರೆ ದೇಶಕ್ಕೆ ಸಾಗಿಸುವದಕ್ಕಾಗಿ ಹಿಂದುಸ್ತಾನದಲ್ಲಿ ಬಂದ ಬೆಳ್ಳಿ ಬಂಗಾರಕ್ಕೂ ಸದ್ಯದ ಕಾಯದೆಯ ಆಯಾತ ಪ್ರತಿಬಂಧಕ ಕಲಮು ಅನ್ವಯಿಸುವದೆಂದು ಈ ಮಸೂದೆಯು ಸ್ಪಷ್ಟಪಡಿಸುತ್ತದೆ.

೧೯೪೭ ನೆಯ ವರ್ಷದ ಉಳಿದ ಭಾಗದಲುವಾಗಿ ಸ್ಥಾಯಿ ಆರ್ಥಿಕ ಸಮಿತಿಯನ್ನು ಆರಿಸುವ ಬಗ್ಗೆ ಅರ್ಥಸಚಿವ ಶ್ರೀ. ಷಣ್ಮುಖಂ ಚೆಟ್ಟಿಯಾರರು ಮಂಡಿಸಿದ ಗೊತ್ತುವಳಿಯು ಸ್ವೀಕೃತವಾಯಿತು.

ರೇಲ್ವೆ ಮುಂಗಡ ಪತ್ರಿಕೆ

ರೇಲ್ವೆ ಆರ್ಥಿಕ ಸಮಿತಿಯು ಈ ವರ್ಷದ ಉಳಿದ ಅವಧಿಯಲ್ಲೂ ಕೆಲಸ ಮಾಡಬೇಕು ಮತ್ತು ರೇಲ್ವೆ ಕೇಂದ್ರ ಸೂಚನಾ ಸಮಿತಿಯಲ್ಲಿಯ ಎಂಟು ಜನ ಸದಸ್ಯರ ಆಯ್ಕೆಗೆ ಮನ್ನಣೆ ಕೊಡಬೇಕೆಂಬ ಸಾರಿಗೆ ಮಂತ್ರಿಗಳ ಗೊತ್ತುವಳಿ ಸ್ವೀಕರಿಸಲ್ಪಟ್ಟಿತು.

ರೇಲ್ವೆ ಮುಂಗಡ ಪತ್ರದ ಬಗ್ಗೆ ಮಾತನಾಡುತ್ತ ಸಾರಿಗೆ ಮಂತ್ರಿಗಳಾದ ಡಾ. ಮಥಾಯಿಯವರು ನುಡಿದುದರ ಸಾರಾಂಶ ಹೀಗಿದೆ. ದೇಶದ ವಿಚ್ಛೇದನೆಯ ಮೂಲಕ ರೇಲ್ವೆ ಆಡಳಿತದಲ್ಲಿ ಹಲಕೆಲವು ಮಾರ್ಪಾಟುಗಳನ್ನು ಮಾಡಬೇಕಾಯಿತು. ಎಷ್ಟೋ ರೇಲ್ವೆಗಳು ಮೂಲ ಭಾಗದಿಂದ ಬೇರ್ಪಡಿಸಲ್ಪಟ್ಟವು ಮತ್ತು ವರ್ಕಶಾಪಗಳು ಹಂಚಿಹೋದವು ಕಲ್ಲಿದ್ದಲಿಯ ಕೊರತೆಯ ಮೂಲಕವೂ ಕಷ್ಟವಾಗುತ್ತಿದೆ. ಎಂಜಿನಿನ ನೌಕರರಲ್ಲಿ ಅನೇಕರು ಮುಸಲ್ಮಾನರಿದ್ದುದರಿಂದ ಅವರು ಪಾಕಿಸ್ತಾನಕ್ಕೆ ಹೋದರು.

ರೇಲ್ವೆ ಸೊತ್ತಿನ ಹಂಚುವಿಕೆಯ ಪ್ರಾಥಮಿಕ ಕೆಲಸವೆಲ್ಲ ಮುಗಿದಂತಾಗಿದೆ. ಮೂಲಧನದ ಹಂಚುವಿಕೆಯ ಬಗ್ಗೆ ಪಾಕಿಸ್ತಾನವು ಒಂದು ವಾದ ಹೂಡಿದೆ. ರೇಲ್ವೆ ಸೊತ್ತು ಹಂಚುವಾಗ ಆಯಾ ಸರಕುಗಳ ಬೆಲೆ ನೋಡದೆ ಅವುಗಳ ಧನೋತ್ಪಾದಕ ಶಕ್ತಿಯನ್ನು ನೋಡಬೇಕೆಂದು ಅವರು ಅನ್ನುತ್ತಿದ್ದಾರೆ.

ನೌಕರರ ವಿನಿಮಯದಿಂದ ರೇಲ್ವೆ ಕಾರ್ಯವು ಅಸ್ತವ್ಯಸ್ತವಾಗಿದೆ. ಸುಮಾರು ೧,೨೬,೦೦೦ ರೇಲ್ವೆ ನೌಕರರು ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಬರಲು ಹೆಸರು ಕೊಟ್ಟಿದ್ದರು. ಇವರಲ್ಲಿ ಸುಮಾರು ೧,೦೮,೪೦೦ ಜನರು ಬಂದಿದ್ದಾರೆ. ಇದರಂತೆ ಸುಮಾರು ಲಕ್ಷ ಸಾವಿರ ಜನರು ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ಹೋಗಲು ಹೆಸರು ಕೊಟ್ಟಿದ್ದರು.

ನಿರಾಶ್ರಿತರ ಸ್ಥಾನಾಂತರವೂ ಇನ್ನೊಂದು ಸಮಸ್ಯೆಯೇ. ಈ ವರೆಗೆ ಹಿಂದುಸ್ತಾನದ ರೇಲ್ವೆಗಳು ಸುಮಾರು ೨೫ ಲಕ್ಷ ಜನರನ್ನು ಸ್ಥಾನಂತರಗೊಳಿಸಿವೆ, ಗಲಭೆಯ ಕಾಲದಲ್ಲಿ ೫೨ ಸಾವಿರಕ್ಕಿಂತ ಹೆಚ್ಚು ವಾಗಿನುಗಳು ವ್ಯರ್ಥವಾಗಿ ನಿಂತುಕೊಳ್ಳಬೇಕಾಯಿತು.

ಎಂಜಿನುಗಳ ಕೊರತೆಯನ್ನೂ ನಿವಾರಿಸಿಕೊಳ್ಳಬೇಕು. ಯುದ್ಧಕಾಲದಲ್ಲಿ ಓಡಾಟ ಹೆಚ್ಚಾಗಿ ಎಷ್ಟೋ ಎಂಜಿನುಗಳು ಸವೆದು ಹೋಗಿವೆ. ವಿಭಜನೆಯ ಪೂರ್ವದಲ್ಲಿ ನಮ್ಮ ಕಡೆಗಿದ್ದ ೮೪೦೦ ಎಂಜಿನಗಳಲ್ಲಿ ೨೯೦೦ ತೀರ ಹಳೆಯವು. ಎಂಜಿನುಗಳು ಹಿಂದುಸ್ತಾನದಲ್ಲಿ ಸಿದ್ಧವಾಗುವದಿಲ್ಲ, ಅವುಗಳ ಬಿಡಿಭಾಗಗಳೂ ಇದು ಸಿದ್ಧವಾಗುವದಿಲ್ಲ ಆದ್ದರಿಂದ ಇದೊಂದು ಜಟಿಲ ಸಮಸ್ಯೆಯಾಗಿದೆ. ಇಷ್ಟೆಲ್ಲ ಅಡೆತಡೆಗಳಲ್ಲಿ ರೇಲೆ ನೌಕರರು ಸಮರ್ಪಕ ಕೆಲಸ ಸಲ್ಲಿಸಿದ್ದಕ್ಕೆ ನಾನವರನ್ನು ಕೊಂಡಾಡುತ್ತೇನೆ. ಈ ಮಾತಿಗೆ ಸಭೆಯಲ್ಲಿ ಹರ್ಷೋದ್ಗಾರವಾಯಿತು.

ರೇಲ್ವೆ ವಿಷಯಕ ವೈಶಿಷ್ಟ್ಯ

ಈ ಸಭೆಯಲ್ಲಾದ ರೇಲ್ವೆ ವಿಷಯಕ ಚರ್ಚೆಯ ವೈಶಿಷ್ಟ್ಯವೆಂದರೆ ಹಿಂದುಸ್ತಾನದಲ್ಲಿ ಮೊಟ್ಟಮೊದಲನೆಯ ಸಲ ಎಲ್ಲ ರೇಲ್ವೆಗಳಲ್ಲಿಯೂ ಒಂದೇ ಪ್ರಮಾಣದ ದರಗಳನ್ನು ಇರಿಸಬೇಕೆಂಬ ತೀರ್ಮಾನ ಇದರಿಂದ ಮೂಲ ದರಗಳಮೇಲೆ ಹೇರಲ್ಪಟ್ಟಸರಚಾರ್ಜದಲ್ಲಿಕಂಡುಬರುವ ಎಷ್ಟೋ ವಿಧ ಲೋಪದೋಷಗಳು ಇಲ್ಲದಾಗುವವು. ಕೇಂದ್ರವೇತನ ಸಮಿತಿ ಮತ್ತು ನ್ಯಾಯಮಂಡಲದ ವರದಿ ಇವುಗಳನ್ವಯ ರೇಲ್ವೆ ವೆಚ್ಚವು ಬಹುಮಟ್ಟಿಗೆ ಪ್ರಮಾಣಬದ್ಧ ಮಾಡಲ್ಪಟ್ಟಿರುವದರಿಂದ ಮೇಲಿನ ಸುಧಾರಣೆ ಸಾಧ್ಯವಾಗಿದೆ. ಮೂರನೆಯ ವರ್ಗದ ದರವನ್ನು ಸರಚಾರ್ಜ ಇಲ್ಲದೆ ಮೈಲಿಗೆ ೪ ಪೈಗಳಂತೆ ಇರಿಸಲು ಶಕ್ಯವಾಗಿದೆ. ಜಿ. ಆಯ್. ಪಿ., ಎಂ. ಎಸ್. ಎಂ ಮತ್ತು ಅಸಾಮ ರೇಲ್ವೆ ಇವುಗಳಲ್ಲಿ ಯುದ್ಧಪೂರ್ವದಲ್ಲಿ ಇದೇ ದರವಿದ್ದಿತು. ಬಡವರ ಹಿತದ ದೃಷ್ಟಿಯಿಂದ ಸಣ್ಣ ಅಂತರ ಪ್ರಯಾಣದ ದರಗಳನ್ನು ಆದಷ್ಟು ಕಡಿಮೆ ಇಡಲು ಸರಕಾರ ಪ್ರಯತ್ನಿಸುವದು. ಸೀಝನ್ ತಿಕೀಟಿನ ದರಗಳನ್ನು ಸ್ವಲ್ಪ ಏರಿಸಲಾಗುವದು.

ಸಂಬಳ ಸಮಿತಿಯ ಸಲಹೆಯ ಮೂಲಕ ಮತ್ತು ರೇಲ್ವೆ ನೌಕರರಿಗೆ ಗ್ರೇನ್ ಶಾಪುಗಳ ಮುಖಾಂತರ ಕಡಿಮೆ ಬೆಲೆಯ ಸರಕುಗಳನ್ನು ಒದಗಿಸುವದರಿಂದ ರೇಲ್ವೆ ಆಡಳಿತಕ್ಕೆ ೨೨½ ಕೋಟಿ ರೂ ಗಳ ವೆಚ್ಚ ಹೆಚ್ಚುಬಂದಿದೆ. ಈ ಸಲದ ಆರ್ಥಿಕ ವರ್ಷವು ೧೨. ೩೮ ಕೋಟಿ ರೂಗಳ ಕೊರತೆ ತೋರಿಸಬಹುದು. ೧೯೪೭ ಅಗಸ್ಟ ೧೫ ರಿಂದ ೧೯೪೮ ರ ಮಾರ್ಚ ೩೧ ರ ವರೆಗೆ ಸದ್ಯದ ದರಗಳಂತೆ ೧೪೭ ಕೋಟಿ ರೂ ಆದಾಯ ಬರಬಹುದೆಂದು ಅಂದಾಜ ಮಾಡಲಾಗಿದೆ. ತಿಕೀಟು ಮೊದಲಾದವುಗಳ ದರವನ್ನು ಹೆಚ್ಚಿಸದೆ ಗತ್ಯಂತರವೇ ಇಲ್ಲ. ೧೯೪೮ ರ ಪ್ರಾರಂಭದಿಂದ ದರ ಏರಿಸುವದರಿಂದ ಮುಂಗಡ ಪತ್ರಿಕೆಯ ವರ್ಷ ಮುಗಿಯುವದರೊಳಗಾಗಿ ೯ ೧೫ ರೂ. ಗಳ ಲಾಭವಾಗಿ ಕೊರತೆಯು ೩.೧೫ ಕೋಟಿ ರೂ. ಗಳಿಗೆ ಇಳಿಯುವದು.

ಎಲ್ಲ ವರ್ಗಗಳ ದರವನ್ನು ಏರಿಸಲಾಗುವದಾದರೂ ಉಚ್ಚವರ್ಗದ ದರಗಳು ಹೆಚ್ಚು ಏರುವವು ಉದಾ— ೧ನೇ ವರ್ಗದ ದರವು ಮೈಲಿಗೆ ೨೪ ಪೈಗಳಿದ್ದುದನ್ನು ೩೦ ಪೈಗಳಿಗೆ ಏರಿಸಲಾಗುವದು ೩ ನೇ ವರ್ಗದವರು ಈ ಹೊಸದರದ ಪ್ರಕಾರ ಅಷ್ಟೇನು ಹೆಚ್ಚು ಹಣ ತೆರಬೇಕಾಗಿಲ್ಲ. ಸ್ವಲ್ಪ ಮಾತ್ರ ಹೆಚ್ಚು ಕೊಡಬೇಕಾಗುತ್ತದೆ.

ಮುಂಗಡಪತ್ರಿಕೆಯ ವರ್ಷದಲ್ಲಿ ರೇಲ್ವೆ ರಸ್ತೆ ಸಾರಿಗೆ ಕಂಪನಿಗಳು ಮದ್ರಾಸ ಮಧ್ಯಪ್ರಾಂತ ಓಡಿಸಾ ಮತ್ತು ಬಿಹಾರಗಳಲ್ಲಿ ತಲೆಯೆತ್ತಲಿದ್ದು ಅವುಗಳ ಬಂಡವಾಳಕ್ಕಾಗಿ ೬೯|| ಲಕ್ಷ ರೂ ಗಳನ್ನು ತೆಗೆದಿಡಲಾಗಿದೆ.

ಔದ್ಯೋಗಿಕ ಅರ್ಥ ಸಹಾಯ ಸಂಸ್ಥೆ

ಅರ್ಥಸಚಿವರಾದ ಶ್ರೀ ಷಣ್ಮುಖಂ ಚೆಟ್ಟಿಯಾರರು ಔದ್ಯೋಗಿಕ ಅರ್ಥ ಸಹಾಯ ಸಂಸ್ಥೆಯ ಮಸೂದೆಯನ್ನು ತಜ್ಞ ಸಮಿತಿಗೆ ಒಪ್ಪಿಸುವ ಬಗ್ಗೆ ಸೂಚನೆತಂದರು. ಈ ಸೂಚನೆಯನ್ನು ಸ್ವಾಗತಿಸುತ್ತ ಪ್ರೊ. ಕೆ. ಟಿ. ಶಹಾರವರು ದೇಶದ ಔದ್ಯೋಗಿಕ ಬೆಳವಣಿಗೆಯ ಬಗ್ಗೆ ಒಂದು ಸರ್ವಾಂಗ ಸಂಪೂರ್ಣ ಯೋಜನೆ ಸಿದ್ಧಪಡಿಸುವದು ಅವಶ್ಯವೆಂದೂ ಆದರೂ ಇಂತಹ ಸಂಸ್ಥೆಗಳ ಅಗತ್ಯತೆಯೂ ಉಂಟೆಂದೂ ಹೇಳಿ ಈ ಸಂಸ್ಥೆಯು ವಿಶಿಷ್ಟ ಉದ್ಯೋಗಗಳಿಗಷ್ಟೆ ಸಹಾಯ ಸಲ್ಲಿಸದೆ ಒಕ್ಕಲತನ ಮತ್ತು ವೃತ್ತಪತ್ರವ್ಯವಸಾಯಗಳಿಗೂ ಆರ್ಥಿಕ ಸಹಾಯ ಒದಗಿಸಬೇಕೆಂದೂ ಸೂಚಿಸಿದರು. ಪಂ. ಹೃದಯನಾಥ ಕುಂಝ್ರುರು ಅವರು, ಸಾಮಾನ್ಯ ಜನರಿಗೂ ಈ ಸಂಸ್ಥೆಯಲ್ಲಿ ಹಣ ತೊಡಗಿಸಲು ಅಸ್ಪದವಿರಬೇಕು ಮತ್ತು ಸಂಸ್ಥೆಯ ಮೂಲ ಧನವನ್ನು ಹೆಚ್ಚಿಸಬೇಕು ಎಂದು ಸೂಚಿಸಿದರು. ಈ ಬಗ್ಗೆ ಇನ್ನೂ ಅನೇಕರು ಅನೇಕಬಗೆಯ ಸೂಚನೆಮಂಡಿಸಿದರು. ಜನಸಾಮಾನ್ಯರ ಹಿತದದೃಷ್ಟಿಯಿಂದಲೇ ಈ ಸಂಸ್ಥೆ ಕಾರ್ಯಪ್ರವೃತ್ತವಾಗುವಕಾರಣ ಪ್ರತಿಯೊಬ್ಬನ ಅನುಭವಲಾಭವನ್ನೂ ಪಡೆಯಲಾಗುವದೆಂದೂ ತಜ್ಞ ಸಮಿತಿಯು ಅಭಿಪ್ರಾಯಕ್ಕನುಗುಣವಾಗಿಯೇ ತಾವು ವರ್ತಿಸುವದಾಗಿಯೂ ಅರ್ಥಸಚಿವರು ಉತ್ತರರೂಪವಾಗಿ ಎಲ್ಲ ಸೂಚಕರಿಗೂ ಆಶ್ವಾಸನಕೊಡಲು ಮಸೂದೆಯು ತಜ್ಞ ಸಮಿತಿಗೆ ಒಪ್ಪಿಸಲ್ಪಟ್ಟಿತು.

ಕೂಲಿಕಾರರ ಬಗ್ಗೆ ಸರಕಾರಿ ವಿಮೆಯಯೋಜನೆ

ಕೂಲಿಕಾರ ಮಂತ್ರಿ ಶ್ರೀ ಜಗಜೀವನ ರಾಮರವರು ತಂದ ಕೂಲಿಕಾರರ ಬಗ್ಗೆ ಸರಕಾರಿ ವಿಮೆಯ ಯೋಜನೆಯನ್ನು ತಜ್ಞ ಸಮಿತಿಗೆ ಒಪ್ಪಿಸಬೇಕೆಂಬ ಗೊತ್ತುವಳಿಯ ಚರ್ಚೆ ಆಯಿತು, ಕಾರಖಾನೆಗಳಲ್ಲಿ ಕೆಲಸಮಾಡುವ ಕೂಲಿಕಾರರು ಬೇನೆಯಿಂದ ಬಳಲುವಾಗ, ಅಪಘಾತಕ್ಕೆ ಸಿಕ್ಕಾಗ, ಹೆಂಗೆಯರಾದಾಗ ಇವೇಮೊದಲಾದ ನಿರುದ್ಯೋಗಿಗಳಾಗಿರಬೇಕಾದ , ಪ್ರಸಂಗಗಳಲ್ಲಿ ಅವರಿಗೆ ಆರ್ಥಿಕ ಸಹಾಯ ಸಲ್ಲಿಸುವ ಸಲುವಾಗಿ ಸರಕಾರದವರು ಒಂದು ಒತ್ತಾಯದ ವಿಮಾ ಯೋಜನೆ ಪ್ರಾರಂಭಿಸಬೇಕೆಂಬುದಾಗಿ ಈ ಮಸೂದೆಯ ಆಶಯವಿದೆ. ೧೦ ಅಣೆ ಗಳಿಗಿಂತ ಕಡಿಮೆ ದಿನಗೂಲಿಯ ಕೂಲಿಕಾರನ ವಿಮಾಕಂತುಗಳನ್ನು ಅವನ ಮಾಲಕನೆ ತುಂಬಬೇಕೆಂದೂ ಅವನಿಗೆ ಹಲಕೆಲವು ಸೌಕರ್ಯದೊರೆಯಬೇಕೆಂದೂ ಈ ಯೋಜನೆಯಲ್ಲಿದೆ.

ಚಿತ್ರದುರ್ಗದಲ್ಲಿ ಮೈಸೂರು ಕಾಂಗ್ರೆಸ ಅಧಿವೇಶನ

ಸರಕಾರದಗೂಡ ಮಾಡಿಕೊಂಡ ಒಪ್ಪಂದಕ್ಕೆ ಮನ್ನಣೆ

ಅಖಿಲ ಮೈಸೂರ ಕಾಂಗ್ರೆಸ್ ಸಮಿತಿಯ ಅಧಿವೇಶನವು ಕಳೆದ ೧೫-೧೬ ತಾರೀಖುಗಳಲ್ಲಿ ಚಿತ್ರದುರ್ಗದಲ್ಲಿ ಒಳ್ಳೆ ವಿಜೃಂಭಣೆಯಿಂದ ಸಾಂಗವಾಯಿತು. ಐವತ್ತು ಸಾವಿರಕ್ಕಿಂತ ಹೆಚ್ಚು ಜನರು ಕೂಡಿದ್ದರು. ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಕಾಂಗ್ರೆಸ್ಸು ಸತ್ಯಾಗ್ರಹದಲ್ಲಿ ವಿಜಯಹೊಂದಿ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡದ್ದರಿಂದ ಈ ಅಧಿವೇಶನಕ್ಕೆ ವಿಶೇಷ ಕಳೆ ಏರಿದ್ದಿತು. ೧೯೩೮ ರಲ್ಲಿ ಇದೇ ಚಿತ್ರದುರ್ಗದಲ್ಲಿ ಶ್ರೀ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಎಲ್ಲಿಯೋ ಒಂದು ಮನೆಯಲ್ಲಿ ಒಂದು ಛತ್ರದಲ್ಲಿ ಒಂದು ಬಗೆಯಿಂದ ರಹಸ್ಯವಾಗಿ ಕೂಡಿದ್ದ ಕಾಂಗ್ರೆಸು ಅಧಿವೇಶನ ಇಷ್ಟು ಪ್ರಚಂಡ ಜನಸಮುದಾಯದಲ್ಲಿ ಡಾಣಾಡಂಗುರವಾಗಿ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿಯೆ ನಡೆದುದು ಅಭೂತಪೂರ್ವವಾದ ಸಂಗತಿ. ಅದೂಸತ್ಯಾಗ್ರಹವನ್ನು ಪ್ರಾರಂಭಿಸಿದ ೪೮ ದಿವಸಗಳಲ್ಲಿವಿಜಯ ದೊರೆತದ್ದು ಮತ್ತಷ್ಟು ಅಪೂರ್ವ.

ಕಾಂಗ್ರೆಸ ಕಾರ್ಯ ಸಮಿತಿ ಮೈಸೂರ ಸರಕಾರದಗೂಡ ಮಾಡಿಕೊಂಡ ಒಪ್ಪಂದಕ್ಕೆ ಮನ್ನಣೆ ಕೊಡುವದು ಈ ಅಧಿವೇಶನದ ಮಹತ್ವದ ಕೆಲಸವಾಗಿದ್ದಿತು. ಕಳೆದ ಅಧಿವೇಶನದಲ್ಲಿ ಕಾಂಗ್ರೆಸ್ಸು ಹಾಕಿದ ಶರತುಗಳಿಗೆಲ್ಲ ಮಹಾರಾಜ ಸರಕಾರದವರು ಒಪ್ಪಿಕೊಂಡದ್ದರಿಂದ ಕಾರ್ಯ ಸಮಿತಿಯು ಒಪ್ಪಂದ ಮಾಡಿಕೊಂಡಿತು. ಆದರೆ ದಿವಾಣರ ಸ್ಥಳವನ್ನು ಹಾಗೆಯೆ ಇಟ್ಟುಬಿಟ್ಟದ್ದರಿಂದ ಎಲ್ಲೆಲ್ಲಿಯೂ ವಿಶೇಷತಃ ತರುಣ ಕಾರ್ಯಕರ್ತರಲ್ಲಿ ಅಸಮಾಧಾನ ಅಸಂತೋಷ ಒಡೆದು ಕಾಣುತ್ತಿತ್ತು. ಅಲ್ಲದೆ ರಾಜ್ಯಾಂಗ ರಚನೆಯ ಪದವಿಯಲ್ಲಿ ಸೂಕ್ತ ಕಂಡ ವ್ಯತ್ಯಾಸ ಇಲ್ಲವೆ ಬದಲಾವಣೆ ಮಾಡಬಹುದು ಎಂದು ಒಪ್ಪಂದದ ನಂತರ ಹೊರಬಿದ್ದ ರಾಜ್ಯ ಘೋಷಣೆಯಲ್ಲಿ ಹೇಳಿದ್ದರಿಂದಲೂ ಅಸಮಾಧಾನ ಹೆಚ್ಚಿದ್ದಿತು. ಈ ಎರಡು ಲೋಪದೋಷಗಳು ಮಹತ್ವದವಾಗಿದ್ದುದರಿಂದ ಕಾರ್ಯ ಸಮಿತಿಯವರು ತಂದ ಗೊತ್ತುವಳಿಗೆ ಹದಿನೆಂಟರಷ್ಟು ತಿದ್ದುಪಡಿಗಳು ವಿರೋಧಕವಾಗಿವೆಯೆಂದು ಹೇಳಿ ಅಧ್ಯಕ್ಷರು ಎಲ್ಲ ತಿದ್ದುಪಡಿಗಳನ್ನೂ ನಿಯಮಬಾಹ್ಯ ಮಾಡಿದರು. ಮೂಲ ಗೊತ್ತುವಳಿ ಅವಿರೋಧ ಸ್ವೀಕೃತವಾಯಿತು. ಸತ್ಯಾಗ್ರಹದಲ್ಲಿ ವಿಜಯ ದೊರೆತ ಬಗ್ಗೆ ಅಭಿನಂದಿಸುವ ಮತ್ತು ಬಲಿದಾನ ಮಾಡಿದವರಿಗೆ ಸಹಾನುಭೂತಿಯನ್ನು ಪ್ರದರ್ಶಿಸುವ ಮೊದಲನೆಯ ಗೊತ್ತುವಳಿ ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾಯಿತು. ಒಪ್ಪಂದಕ್ಕೆ ಮನ್ನಣೆ ಕೊಡುವ ಎರಡನೆಯ ಗೊತ್ತುವಳಿಯ ಬಗ್ಗೆಯೆ ತೀಕ್ಷ್ಣವಾದ ಬಿರುಸಾದ ಚರ್ಚೆ ನಡೆಯಿತು. ಆ ಗೊತ್ತುವಳಿ ಇಂತಿದೆ.

'ಮೈಸೂರು ಕಾಂಗ್ರೆಸ್ಸಿಗೂ ದಿವಾನರಿಗೂ ೧೨-೧೦-೪೭ ರಲ್ಲಿ ಆದ ಒಪ್ಪಂದಕ್ಕೆ ಶ್ರೀಮನ್ಮಹಾರಾಜರು ಒಪ್ಪಿಗೆ ಇತ್ತಿರುವ ಅಂಶ ೧೩-೧೦-೪೭ ರಲ್ಲಿ ಪ್ರಕಟವಾಗಿರುವ ಸರಕಾರೀ ಪ್ರಕಟನೆಯಲ್ಲಿ ತಿಳಿಸಲಾಗಿದೆ. ಈ ಒಪ್ಪಂದವನ್ನು ಅ. ಮೈ. ಕಾಂ. ಸಮಿತಿಯು ಈ ವಿಶೇಷ ಅಧಿವೇಶನ ಅನುಮೋದಿಸುತ್ತದೆ. ರಾಜ್ಯಾಂಗ ರಚನೆ ಸಭೆ ತಯಾರಿಸುವ ರಾಜ್ಯಾಂಗ ಮಸೂದೆಗೆ ಶ್ರೀಮನ್ಮಹಾರಾಜರು ಒಪ್ಪಿಗೆ ಕೊಡುವಾಗ ತಮಗೆ ಸೂಕ್ತ ಕಂಡ ವ್ಯತ್ಯಾಸ ಅಥವಾ ಬದಲಾವಣೆ ಮಾಡಬಹುದು" ಎಂಬ ವಾಕ್ಯವನ್ನು ೨೯-೧೦-೪೭ರ ರಾಜಘೋಷಣೆಯಲ್ಲಿ ಸೇರಿಸಿರುವದು ಸಾರ್ವಜನಿಕರ ಮನಸ್ಸಿನಲ್ಲಿ ಸ್ವಾಭಾವಿಕವಾಗಿ ಸಂಶಯವನ್ನುಂಟು ಮಾಡುವದಾಗಿದೆ. ಆದಾಗ್ಯೂ ೧೨-೧೦-೪೭ರ ಒಪ್ಪಂದದ ಆಧಾರದ ಮೇಲೆಯೆ ಈ ಘೋಷಣೆ ಹೊರಟಿರುವದರಿಂದ ಮೇಲ್ಕಂಡ ವಾಕ್ಯ ಒಪ್ಪಂದದ ಶರತ್ತುಗಳನ್ನು ಅತಿಕ್ರಮಿಸುವದಿಲ್ಲವೆಂದು ಅಧಿವೇಶನ ಅಭಿಪ್ರಾಯಪಡುತ್ತದೆ. ,

ಹೊಸ ಅಧ್ಯಕ್ಷರ ಆಯ್ಕೆಯ ಸಂಬಂಧದಲ್ಲಿಯೂ ತೀಕ್ಷ್ಣ ಸ್ಪರ್ಧೆ ನಡೆಯಿತು. ಹಳೆಯ ಕಾಂಗ್ರೆಸ ಕಾರ್ಯಕರ್ತರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಮತ್ತು ತರುಣಕಾರ್ಯಕರ್ತರಾದ ಶ್ರೀ ಕೆ ಹನುಮಂತಯ್ಯನವರು ಇವರಲ್ಲಿ ಸ್ಪರ್ಧೆ ನಡೆಯಿತು. ಸಿದ್ದಲಿಂಗಯ್ಯನವರಿಗೆ ೧೧೩ ಮತಗಳು ಶ್ರೀ ಹನುಮಂತಯ್ಯನವರಿಗೆ ೭೨ ಮತಗಳು ಬಿದ್ದವು. ಶ್ರೀ ಸಿದ್ದಲಿಂಗಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇದರಿಂದ ಕಾಂಗ್ರೆಸ್ಸಿಗರಲ್ಲಿ ಎರಡು ಪಕ್ಷಗಳು ನಿರ್ಮಿಸಲ್ಪಟ್ಟವೆಂದೂ ಒಂದು ಬಗೆಯ ಒಡಕು ಆಯಿತೆಂದೂ ಅನೇಕರು ಸಂಶಯಗ್ರಸ್ತರಾದರು. ಆದರೆ ಸಿದ್ದಲಿಂಗಯ್ಯನವರ ವಿರುದ್ಧ ಆಯ್ಕೆಗೆ ನಿಂತಿದ್ದ ಶ್ರೀ ಹನುಮಂತಯ್ಯನವರು ಹೊಸ ಅಧ್ಯಕ್ಷರಿಗೆ ಪೂರ್ಣ ಬೆಂಬಲದ ಆಶ್ವಾಸನ ಕೊಟ್ಟದ್ದರಿಂದ ಯಾವದೆ ಬಗೆಯ ಒಡಕಿಗೆ ಅವಕಾಶವಿಲ್ಲೆಂದು ನಂಬಬಹುದಾಗಿದೆ. ಹೊಸ ಅಧ್ಯಕ್ಷರಾದರೂ ತಮಗೆ ಮಾ[illegible] ಬೇಡ ಕೆಲಸಬೇಕು ಎಂದು ಹೇಳಿದ್ದಾರೆ. ಪ್ರಾ[illegible]ವಾದ ಹೊಣೆಗಾರ ಸರಕಾರದ ಸದ್ವಿ[illegible]ಯೋಗ ಮಾಡಿಕೊಳ್ಳುವದಕ್ಕಾಗಿ ಕಾಂ[illegible]ಸ್ಸಿನ ಶಕ್ತಿಯನ್ನು ಸಂವರ್ಧಿಸಬೇಕಾಗಿ[illegible]ಯೆಂದೂ ಹೇಳಿದರು. ಮಹಾರಾಜ ಸರಕಾ[illegible]ದವರು ಕೇವಲ ತಮ್ಮ ಪೋಲೀಸ [illegible]ಟರಿಯವರ ಮೇಲೆಯೆ ಹೆಚ್ಚು ವಿಶ್ವಾಸವಿ[illegible]ನಡೆಯದು. ಪ್ರಜೆಗಳ ಸಹಾಯ ಸಹಕಾರ [illegible]ಸದಿಂದಲೆ ಆಡಳಿತವನ್ನು ಸಾಗಿಸಿಕೊಳ್ಳಬೇಕೆಂ[illegible] ಅವರು ನಿರ್ಧರಿಸಿಕೊಂಡಿದ್ದಾರೆ. ಎಲ್ಲವೂ [illegible]ಮವಾಗಿ ಸಾಗುವದು. ರಾಜ ಪ್ರಜೆಗಳಲ್ಲಿ ಪರ[illegible] ಸ್ನೇಹಸಾಹಾರ್ದ ವಿಶ್ವಾಸ ಬೆಳೆದು ಸಂಸ[illegible]ಸರ್ವ ರೀತಿಯಿಂದ ಸಮೃದ್ಧಿ ಹೊಂದಲಿ.

ಯುಕ್ತರಾಷ್ಟ್ರ ಸಭೆಯು ಪಾಲಿಸ್ತಾನ [illegible]ತಿಯ ಸಭೆಯಲ್ಲಿ ಪಾಲಿಸ್ತಾನ ವಿಭಜನೆ [illegible]ನೆಯು ಪಾಸಾಗಿದೆಯಷ್ಟೆ. ಈ ಬಗ್ಗೆ ಅ[illegible] ಮುಂದಿನ ಮಾರ್ಗವೇನೆಂಬದನ್ನು ಜಿನ್ನಾ[illegible] ವಿಚಾರವಿನಿಮಯ ಮಾಡಲು [illegible] ಮುಫ್ತಿಯು ತನ್ನ ಪ್ರತಿನಿಧಿಯನ್ನು ಜಿನ್ನಾರ[illegible] ಕಳಿಸಿರುವನೆಂದು ನಮ್ಮ ಲಂಡನ [illegible] ತಿಳಿಸುತ್ತಾನೆ.

ಅ. ಭಾ. ಕಾಂ. ಸಮಿತಿಯ ಸಭೆ

ರಾಷ್ಟ್ರಪತಿ ಕೃಪಲಾನಿಯವರ ರಾಜೀನಾಮೆ

ಡಾ. ರಾಜೇಂದ್ರಪ್ರಸಾದರು ಹೊಸ ರಾಷ್ಟ್ರಪತಿ

ತಾ ೧೫ ನವೆಂಬರದ ದಿನ ಮಧ್ಯಾಹ್ನ ಅ. ಭಾ. ಕಾಂ. ಸಮಿತಿಯ ಸಭೆ ಸೇರಿತು. ಆಗ ರಾಷ್ಟ್ರಪತಿಗಳಾದ ಆಚಾರ್ಯ ಕೃಪಲಾನಿಯವರು ಕಾಂಗ್ರೆಸ ಅಧ್ಯಕ್ಷಪದಕ್ಕೆ ರಾಜೀನಾಮೆ ಕೊಟ್ಟಿರುವದಾಗಿ ಸಾರಿದರು. ಈ ಸ್ಥಾನತ್ಯಾಗವು ತಮ್ಮ ಕೊನೆಯ ನಿರ್ಧಾರವೆಂದೂ ಇದಕ್ಕೆ ಮಹಾತ್ಮ ಗಾಂಧಿಯವರ ಆಶೀರ್ವಾದವು ದೊರಕಿದೆ ಎಂದೂ ಆಚಾರ್ಯರು ಹೇಳಿದರು.

ರಾಜೀನಾಮೆಯ ಕಾರಣ

ತಮ್ಮ ಸ್ಥಾನತ್ಯಾಗಕ್ಕೆ ಕಾರಣ ಕೊಡುತ್ತ ಆಚಾರ್ಯ ಕೃಪಲಾನಿಯವರು ಮಾತನಾಡಿದ್ದರ ಸಾರ ಹೀಗೆ— "ಕೇಂದ್ರ ಹಾಗು ಪ್ರಾಂತಿಕ ಸರಕಾರಗಳ ಮಂತ್ರಿಗಳು ಸರಕಾರದ ಮಹತ್ವದ ಧೋರಣ ನಿರ್ಧರಿಸಲು ಕಾಂಗ್ರೆಸ ಕಾರ್ಯ ಸಮಿತಿ ಇಲ್ಲವೆ ತಮ್ಮ ಸಲಹೆ ಕೇಳುವದಿಲ್ಲ. ಈ ಬಗೆಯ ಪರಿಸ್ಥಿತಿಯು ಮುಂದರಿಯುವದು ಕಾಂಗ್ರೆಸ ಸಂಸ್ಥೆಯ ದೃಷ್ಟಿಯಿಂದ ವಿಘಾತಕವಾಗಿದೆ. ಕಾಂಗ್ರೆಸ ಮಂತ್ರಿಗಳ ವಿಶ್ವಾಸಕ್ಕೆ ಪಾತ್ರರಾಗಿದ್ದ ಬೇರೊಬ್ಬರಿಗೆ ನನ್ನ ಸ್ಥಾನವನ್ನು ಬಿಟ್ಟುಕೊಡುವದು ಕ್ರಮಪ್ರಾಪ್ತವೂ ಯೋಗ್ಯವೂ ಆಗಿದೆ" ಎಂದು ಹೇಳಿ ತಮ್ಮ ಮಾತು ಮುಂಬರಿಸಿ ಮತ್ತೆ ಹೀಗೆಂದರು. "ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸದಸ್ಯರಲ್ಲಿ ಬಹುಸಂಖ್ಯಾಕರು ಮಂತ್ರಿ ಮಂಡಲದಲ್ಲಿದ್ದವರೇ ಆಗಿರುವರು. ಈ ಬಗ್ಗೆ ಸಹ ಕಾಂಗ್ರೆಸ ಸಮಿತಿಯು ನಿರ್ದಿಷ್ಟ ಸೂಚನೆ ಮಾಡುವದು ಅಗತ್ಯ. ಇದರಿಂದ ನನ್ನ ತರುವಾಯ ಅಧ್ಯಕ್ಷರಾಗುವವರಿಗೆ ಕಾರ್ಯಕಾರೀ ಮಂಡಲದ ಸದಸ್ಯರನ್ನು ನೇಮಿಸಿಕೊಳ್ಳಲು ಅನುಕೂಲವಾಗುವದು"

ಪಾಕಿಸ್ತಾನದ ತಂತ್ರ

"ಹಿಂದುಸ್ತಾನದಲ್ಲಿ ನಡೆದ ಘಟನೆಗಳ ಉಲ್ಲೇಖ ಮಾಡಿ ಹೀಗೆ ಹೇಳಿದರು. "ಪಾಕಿಸ್ತಾನ ಸರಕಾರವು ಹಿಟ್ಲರನ ನಾಜೀ ತಂತ್ರವನ್ನೇ ಅನುಸರಿಸುತ್ತಿದೆ. ನಾವು ಅವರ ಬೇಡಿಕೆಗಳನ್ನು ಮನ್ನಿಸುತ್ತ ಹೋದಂತೆ ಅವರ ಬೇಡಿಕೆಗಳು ಹೆಚ್ಚುತ್ತಲೇ ಸಾಗಿವೆ. ಹಿಂದು ಜನರ ವಿರುದ್ಧ ದ್ವೇಷದ ವಿಷಪ್ರಚಾರ, ಭಯೋತ್ಪಾದಕ ಚಟುವಟಿಕೆ, ಕುತಂತ್ರ, ಅಸತ್ಯಪ್ರಚಾರ ಈ ಎಲ್ಲ ನಾಜೀತಂತ್ರಗಳನ್ನು ಮುಸ್ಲಿಂಲೀಗು ಅನುಸರಿಸುತ್ತಿದೆ. ನಾವು ಹೀಗೆಯೇ ಬಾಗುತ್ತ ಹೋದರೆ ಕೊನೆಗೆ ಚೇಂಬರಲೇನರ ಗತಿಯೇ ನಮಗೆ ಒದಗದಿರದು. ಪಾಕಿಸ್ತಾನ ಹಿಂದುಸ್ತಾನಗಳ ನಡುವೆ ಯುದ್ಧವಾಗಬಾರದೆಂದಿದ್ದರೆ ಹಿಂದುಸ್ತಾನವು ಶಕ್ತಿ ಬೆಳೆಸಿಕೊಬೇಕು. ಹೀಗೆ ಹೇಳುವೆನೆಂದು ನಾನು ಪಾಕಿಸ್ತಾನದೊಡನೆ ಯುದ್ಧ ಹೂಡಬೇಕೆಂದು ಅರ್ಥವಲ್ಲ. ಅಂತಹ ದುರ್ದಿನ ಎಂದೂ ಬರದಿರಲಿ.

ಹೇಡಿಗಳ ಅಹಿಂಸೆ ಬೇಡ

"ಗಾಂಧೀವಾದಿಯಾದ ನಾನು ಅಹಿಂಸೆಯಲ್ಲಿ ವಿಶ್ವಾಸವಿಟ್ಟಿದ್ದರೂ ಹೇಡಿಗಳ ಅಹಿಂಸೆಯು ವ್ಯರ್ಥವೆಂದು ನಾನು ಹೇಳುತ್ತೇನೆ. ಉಳಿದ ರಾಷ್ಟ್ರಗಳಂತೆ ನಮ್ಮ ರಾಷ್ಟ್ರವೂ ಸೈನ್ಯವನ್ನು ಕಟ್ಟಿದೆ. ಪ್ರಸಂಗಬಂದಾಗ ಅದರ ಉಪಯೋಗಕ್ಕೂ ಹಿಂದೆ ಸರಿಯುವದಿಲ್ಲ. ಅಂದಮೇಲೆ ಸರಕಾರವು ಅಹಿಂಸೆಗೆ ಕಟ್ಟಿಕೊಂಡಿಲ್ಲವೆಂದು ಸಿದ್ಧವಾಗುವದು. ಹೀಗಿರುವಾಗ ಸರಕಾರವು ಪ್ರತಿಯೊಂದು ಹಳ್ಳಿಪಟ್ಟಣದ ನಾಗರಿಕರಿಗೆ ಶಸ್ತ್ರಾಸ್ತ್ರದ ಉಪಯೋಗ ಕಲಿಸಬೇಕಾದುದು ಕ್ರಮಪ್ರಾಪ್ತವಾಗಿದೆ.

ಅಲ್ಪಸಂಖ್ಯಾಕರ ಸಮಸ್ಯೆ

ಈಗ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ತಿಕ್ಕಾಟದ ಪ್ರಶ್ನೆಗಳು ಮುಖ್ಯವಾಗಿ ಅಲ್ಪಸಂಖ್ಯಾಕರ ಸಮಸ್ಯೆ, ಜುನಾಗಡ, ಕಾಶ್ಮೀರ, ಹೈದರಾಬಾದ ಸಂಸ್ಥಾನಗಳ ಪ್ರಶ್ನೆ ಇವೇ ಆಗಿವೆ. ಇವು ಸಮಾಧಾನಕರವಾಗಿ ಬಿಡಿಸಲ್ಪಡದಿದ್ದರೆ ಮುಂದೆ ಇವೇ ಯುದ್ಧಕ್ಕೆ ಕಾರಣವಾಗಬಹುದು.

ಪಾಕಿಸ್ತಾನದಲ್ಲಿರುವ ಅಲ್ಪ ಸಂಖ್ಯಾಕರ ಬಗ್ಗೆ ನಮ್ಮ ಹೊಣೆ ಹಾರಿಸಿಕೊಳ್ಳಲು ನಮಗೆ ಬಾರದು. ಅವರೂ ರಾಷ್ಟ್ರದ ಅಂಗ. ಸ್ವಾತಂತ್ರ್ಯದ ಹೋರಾಟದಲ್ಲಿ ಅವರೂ ಅಸೀಮ ಕಷ್ಟ ಸಹಿಸಿದ್ದಾರೆ. ಆದರೆ ಜೂನ ೩ ರ ಯೋಜನೆಯಿಂದ ದೊರೆತ ಸ್ವಾತಂತ್ರ್ಯದ ಫಲಕ್ಕೆ ಎರವಾಗಿ ಇಂದು ಪಾಕಿಸ್ತಾನದಲ್ಲಿ ಮರಣಕ್ಕಿಂತಲೂ ಘೋರವಾದ ಯಾತನೆ ಮತ್ತು ಭಯದಿಂದ ದಿಕ್ಕೆಟ್ಟು ಓಡಿ ಬರುತ್ತಿರುವಾಗ ಅವರಿಗೆ ಆಶ್ರಯ ನಿರಾಕರಿಸುವದು ಹೇಗೆ? ಅದ್ದರಿಂದ ಯೋಗ್ಯ ಯೋಜನೆ ಕೈಕೊಂಡು ಈ ಕೆಲ ಲಕ್ಷ ಜನರ ಹೊಟ್ಟೆಬಟ್ಟೆಯ ವ್ಯವಸ್ಥೆ ಮಾಡುವದೇನು ದುಸ್ತರವಿಲ್ಲ. ಸರಕಾರ ಇದನ್ನು ಗಮನಿಸಬೇಡವೆ? ಕಣ್ಣಿದಷ್ಟು ತುಂಬುವ ಧೋರಣೆಯಿಂದ ಸಾಗಿದರೆ ಸರಿಯಲ್ಲ.

ಪಾಕಿಸ್ತಾನ ಸರಕಾರ ನಂಬಬೇಕೆ?

"ಪರಿಸ್ಥಿತಿಯು ಅಸಹನೀಯವೂ ತರ್ಕಬಾಹಿರವೂ ಇದೆ. ಅಲ್ಪ ಸಂಖ್ಯಾಕರ ರಕ್ಷಣೆಯ ವಿಷಯದಲ್ಲಿ ಪಾಕಿಸ್ತಾನ ಸರಕಾರವನ್ನು ನಂಬುವದೇ ಬಿಡುವದೇ ಎಂಬುದನ್ನು ಬೇಗ ನಿರ್ಧರಿಸಬೇಕು. ಅದು ರಕ್ಷಣೆ ಕೊಡುವದು ಶಂಕಾಸ್ಪದವೆಂದೋ ಇಲ್ಲವೆ ಅಶಕ್ತವೆಂದೋ ತೋರಿ ಬಂದರೆ ಅಲ್ಲಿಯ ಅಲ್ಪ ಸಂಖ್ಯಾಕರರನ್ನು ಆದಷ್ಟು ಬೇಗ ನಮ್ಮಲ್ಲಿಗೆ ಕರೆಯಿಸಿಕೊಂಡು ಇಲ್ಲಿಂದ ಪಾಕಿಸ್ತಾನಕ್ಕೆ ಹೋಗ ಬಯಸುವ ಮುಸಲ್ಮಾನರನ್ನು ಅಬಾಧಿತವಾಗಿ ಹೋಗಗೊಡುವದೇ ಎರಡೂ ಸರಕಾರಗಳ ಹಿತದ ದೃಷ್ಟಿಯಿಂದ ವಿಹಿತವಾಗಿದೆ.

ಕಾಂಗ್ರೆಸಿನ ಭವಿತವ್ಯ

"ಕಾಂಗ್ರೆಸು ರಾಷ್ಟ್ರೀಯ ಸಂಸ್ಥೆ. ಅದು ಅಂತರ್ರಾಷ್ಟ್ರೀಯ ಸಂಸ್ಥೆಯಲ್ಲ. ಅದ್ದರಿಂದ ಪಾಕಿಸ್ತಾನದಲ್ಲಿ ಕಾಂಗ್ರೆಸ ಪಕ್ಷವನ್ನು ಸಾಗಿಸಿಕೊಂಡು ಹೋಗುವದು ಅಸಂಗತ. ಅಲ್ಲಿಯ ಕಾಂಗ್ರೆಸ ಸಂಸ್ಥೆಗಳನ್ನು ವಿಸರ್ಜಿಸಿಬಿಡಬೇಕು. ಕಾಂಗ್ರೆಸ್ಸಿನ ಗುರಿಯಾದ ಸ್ವರಾಜ್ಯವು ದೊರೆತದ್ದರಿಂದ ಕಾಂಗ್ರೆಸ ಸಂಸ್ಥೆಯು ಹಿಂದುಸ್ತಾನದಲ್ಲಿ ಇನ್ನು ಮುಂದೆ ಆರ್ಥಿಕ ಸಮಾನತೆ ಸ್ಥಾಪಿಸುವ ಮಹಾಕಾರ್ಯ ಸಾಧಿಸಬೇಕು. ಈ ದೃಷ್ಟಿಯಿಂದ ಕಾಂಗ್ರೆಸಿನ ಧ್ಯೇಯವನ್ನು ಹೊಸದಾಗಿ ನಿರ್ಧರಿಸುವದು ಅತ್ಯಗತ್ಯ.

ಹೊಸ ರಾಷ್ಟ್ರಪತಿ


ಮೇಲ್ಕಾಣಿಸಿದಂತೆ ಆಚಾರ್ಯ ಕೃಪಲಾನಿಯವರು ಮತ್ತಾಗಿ ಹೊಸ ಅಧ್ಯಕ್ಷರನ್ನು ಆರಿಸಲು ಸಭೆಗೆ ಬಿನ್ನವಿಸಿದರು. ನಂತರ ಪಂ. ಪಂತರು ಕೃಪಲಾನಿಯವರಿಗೆ ಕೃತಜ್ಞತೆ ವ್ಯಕ್ತಪಡಿಸುವ ಗೊತ್ತುವಳಿ ತಂದರು. ಅದು ಸ್ವೀಕೃತವಾಯಿತು. ಆಮೇಲೆ ಸರದಾರ ಪಟೇಲರು, ಡಾ. ರಾಜೇಂದ್ರ ಪ್ರಸಾದರು ಕಾಂಗ್ರೆಸ ಅಧ್ಯಕ್ಷರಾಗಬೇಕೆಂದು ಸೂಚಿಸಿದ್ದು, ಪಂ. ನೆಹರೂರವರು ಅದನ್ನು ಅನುಮೋದಿಸಲು ಈ ಸೂಚನೆ ಸರ್ವಾನುಮತದಿಂದ ಸ್ವೀಕೃತವಾಗಿ ಡಾ. ರಾಜೇಂದ್ರ ಪ್ರಸಾದರು ಕಾಂಗ್ರೆಸ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಡಾ. ರಾಜೇಂದ್ರ ಪ್ರಸಾದರು ಭಾಷಣ ಮಾಡಿ ಈ ಹುದ್ದೆಯೊಡನೆ ಮಹತ್ವದ ಹೊಣೆಗಾರಿಕೆ ತಮ್ಮ ಮೇಲೆ ಬಿದ್ದಿರುವದರಿಂದ ತಾವು ಮಂತ್ರಿಪದವಿಗೆ ರಾಜೀನಾಮೆ ಕೊಡುವದಾಗಿ ಸಾರಿದರು. ಆದರೆ ಇವರು ಘಟನಾ ಸಮಿತಿಯ ಅಧ್ಯಕ್ಷಪದಕ್ಕೆ ರಾಜೀನಾಮೆ ಕೊಡುವದಿಲ್ಲ.

ಅ. ಭಾ. ಕಾಂ. ಸಮಿತಿಯಲ್ಲಿ ಗೊತ್ತುವಳಿಗಳು

ಅಖಿಲ ಭಾರತ ಕಾಂಗ್ರೆಸ ಸಮಿತಿಯಲ್ಲಿ ಒಟ್ಟು ಏಳು ಮಹತ್ವದ ಗೊತ್ತುವಳಿಗಳು ಸ್ವೀಕೃತವಾದವು. ಅವು ಮುಂದೆ ಕಾಣಿಸಿದಂತಿವೆ.

(೧) ಹಿಂದೀ ಸಂಸ್ಥಾನಗಳ ಬಗ್ಗೆ ಡಾ. ಪಟ್ಟಾಭಿಯವರು ತಂದ ಗೊತ್ತುವಳಿ. ಇದರಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಲು ಹಿಂದೀ ಸಂಸ್ಥಾನಗಳಿಗೆಲ್ಲ ಸೂಚನೆಯಿದೆ. (೨) ಜಾತೀಯ ಸಂಸ್ಥೆಗಳ ಬಗ್ಗೆ ಸ್ವತಃ ಅಧ್ಯಕ್ಷರೇ ತಂದ ಗೊತ್ತುವಳಿ. ಇದರಲ್ಲಿ ಹಿಂದೂ ಮಹಾ ಸಭೆ, ಮುಸ್ಲಿಂ ಲೀಗು, ಅಕಾಲಿದಲ ಮೊದಲಾದ ಜಾತೀಯ ಸಂಸ್ಥೆಗಳು ಸಮಗ್ರ ರಾಷ್ಟ್ರದ ಹಿತದ ದೃಷ್ಟಿಯಿಂದ ವಿಘಾತಕವೆಂದು ನಿರೂಪಿಸಲಾಗಿದೆ. (೩) ನಿರಾಶ್ರಿತರ ಬಗ್ಗೆ ಶ್ರೀ ಶಂಕರ ದೇವ ಇವರು ತಂದ ಗೊತ್ತುವಳಿ. ನಿರಾಶ್ರಿತರು ತೊರೆದು ಹೋದ ಸೊತ್ತನ್ನು ಸರಕಾರ ಮಾತ್ರ ವಶಪಡಿಸಿಕೊಳ್ಳಬಹುದೆಂದೂ ಒತ್ತಾಯದ ಧರ್ಮಾಂತರವನ್ನು ಸಮಾಜವು ಒಪ್ಪತಕ್ಕದ್ದಲ್ಲವೆಂದೂ ಅದರಂತೆ ಅಪಹೃತ ಸ್ತ್ರೀಯರನ್ನು ಸರಕಾರದ ಸಹಾಯದಿಂದ ಶೋಧಿಸಿ ಅವರವರ ಸಂಸಾರಕ್ಕೆ ಮತ್ತೆ ಮರಳಿಸಬೇಕೆಂದೂ ಇದರಲ್ಲಿ ಹೇಳಿದೆ. (೪) ಖಾಸಗಿ ಸೈನ್ಯಗಳ ಬಗ್ಗೆ ಶ್ರೀ ಗೋವಿಂದ ವಲ್ಲಭ ಪಂತರು ತಂದ ಗೊತ್ತುವಳಿ. ಖಾಸಗಿ ಸೈನ್ಯ ಕಟ್ಟುವದು ರಾಷ್ಟ್ರದ ಭದ್ರತೆಗೆ ಗಂಡಾಂತರ ಪ್ರಾಯವಾಗಿದೆಯೆಂದೂ ಸೈನ್ಯ ಕಟ್ಟುವ ಅಧಿಕಾರ ಸರಕಾರಕ್ಕೆ ಮಾತ್ರ ಇರಬೇಕೆಂದೂ ಸರಕಾರವು ಸೈನ್ಯ, ಗೃಹರಕ್ಷಕ ದಲ, ಪೋಲೀಸ ಪಡೆ, ಅಧಿಕೃತ ಸಶಸ್ತ್ರ ಸ್ವಯಂಸೇವಕ ದಲ, ಮೊದಲಾದವನ್ನು ಕಟ್ಟಬಹುದು ಅಕಾಲಿ ಶೀಖರ ಅಕಾಲಿ ಸ್ವಯಂ ಸೇವಕ ದಲ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮೊದಲಾದವು ಖಾಸಗಿ ಸೈನ್ಯ ಕಟ್ಟುವ ಚಟುವಟಿಕೆಗಳಾಗಿವೆ. ಇಂತಹ ಪ್ರಯತ್ನಗಳ ಮೇಲೆ ನಿಯಂತ್ರಣ ಬೇಕೆಂದು ಈ ಗೊತ್ತುವಳಿಯ ಆಶಯವಿದೆ. (೫) ನಿಯಂತ್ರಣದ ಬಗ್ಗೆ ಎಸ್. ಕೆ. ಪಾಟೀಲರು ತಂದ ಗೊತ್ತುವಳಿಯಲ್ಲಿ ಆಹಾರ ವಸ್ತ್ರಗಳ ನಿಯಂತ್ರಣ ಕೂಡಲೇ ಹೋಗಕೂಡದೆಂದಿದೆ (೬) ಕಾಂಗ್ರೆಸ ಘಟನೆಗೆ ಸಂಬಂಧಿಸಿದ ಗೊತ್ತುವಳಿಯನ್ನು ಶ್ರೀ ಶಂಕರರಾವ ದೇವರು ಮಂಡಿಸಿದರು. ಹೊಸ ಪರಿಸ್ಥಿತಿಗೆ ಅನುಸರಿಸಿ ಕಾಂಗ್ರೆಸ ಘಟನೆಯನ್ನು ಬದಲಾಯಿಸಲು ಈ ಕೆಳಗಿನ ಸಮಿತಿಯನ್ನು ನೇಮಿಸಲಾಯಿತು ಶ್ರೀಗಳಾದ ರಂ. ರಾ. ದಿವಾಕರ, ಪು. ದಾ. ತಂಡನ, ಆಚಾರ್ಯ ನರೇಂದ್ರದೇವ, ಎಸ್. ಕೆ. ಪಾಟೀಲ, ಡಾ. ಪಟ್ಟಾಭಿ ಸೀತಾರಾಮಯ್ಯ, ಸುರೇಂದ್ರ ಮೋಹನ ಘೋಷ ಮತ್ತು ಆಚಾರ್ಯ ಜುಗಲಕಿಶೋರ. (೭) ಕಾಂಗ್ರೆಸಿನ ಧ್ಯೇಯ ನಿರೂಪಣೆಗೆ ಸಂಬಂಧಿಸಿದ ಇನ್ನೊಂದು ಗೊತ್ತುವಳಿಯನ್ನು ಶ್ರೀ ಶಂಕರರಾವ ದೇವರು ಮಂಡಿಸಿದರು. ಈ ಗೊತ್ತುವಳಿಯನ್ವಯ ನೇಮಿಸಲ್ಪಡುವ ಸಮಿತಿಯ ಸದಸ್ಯರು ಇಂತಿರುವರು. ಪಂ. ಜವಾಹರಲಾಲ ನೆಹರು, ಮೌಲಾನಾ ಅಬುಲಕಲಂ ಅಜಾದ, ಜಯಪ್ರಕಾಶ ನಾರಾಯಣ, ಪ್ರೊ. ಎನ್. ಜಿ. ರಂಗಾ, ಗುಲಜರಿಲಾಲ ನಂದಾ, ಜೆ. ಸಿ. ಕುಮಾರಪ್ಪ, ಅಚ್ಯುತ ಪಟವರ್ಧನ, ಶಂಕರರಾವದೇವ ಮೊದಲಾದವರು ಇರುವರಲ್ಲದೆ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳಲು ಈ ಸಮಿತಿಗೆ ಅಧಿಕಾರ ಕೊಡಲಾಯಿತು.



ಮುಂಬಯಿ ಪೇಟೆ

—ತಾ. ೨೫

ಮುಂಬಯಿ ಶೇರಪೇಟೆಯಲ್ಲಿ ಬೆಲೆಗಳು ದುರ್ಬಲವಾಗಿವೆ. ಇಷ್ಟರಲ್ಲೇ ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಲ್ಪಡಲಿರುವ ಹಿಂದೀ ಒಕ್ಕೂಟ ಮುಂಗಡಪತ್ರದತ್ತ ಪೇಟೆಯ ದೃಷ್ಟಿ ತಿರುಗಿದ್ದು ಕರಗಳು ಏರಬಹುದೆಂಬ ಸಂಶಯ ಬೆಲೆಗಳನ್ನು ಶಿಥಿಲಗೊಳಿಸಿದೆ. ಆದರೂ ಇಂದು ಕೆಲ ಪಾಲುಗಳು ಸುಧಾರಿಸಿದವು. ೧೭೩೩-೦-೦ ರಿಂದ ೧೬೭೭–ಕ್ಕಿಳಿದಿದ್ದ ಟಾಟಾಸ್ಟೀಲ ಡೆಫರ್ಡ ೧೭೦೦-೮-೦ ಕ್ಕೆ ಸುಧಾರಿಸಿತು. ಇಂಡಿಯನ್ ಆಯರ್ನ ೩೩-೩-೦ ರಿಂದ ೩೨-೨-೦ ಕ್ಕಿಳಿಯಿತು. ಜವಳಿ ಪಾಲುಗಳಲ್ಲಿ ಬಾಂಬೇಡಾಯಿಂಗ್ ೧೦೩೬-೦-೦ ಕ್ಕಿಳಿದು ೧೦೫೦ ಕ್ಕೂ ಕೋಹಿನೂರು ೫೪೭-೦-೦ ರಿಂದ ೫೫೩-೦-೦ ಕ್ಕೂ ಫಿನಿಕ್ಸ ೧೩೧೦-೦-೦ ರಲ್ಲಿ ಯಥಾಸ್ಥಿತಿಯಾಗಿಯೂ ಸ್ವದೇಶಿ ೫೭೭-೦-೦ ರಿಂದ ೫೮೧-೦-೦ ಕ್ಕೂ ಗೋಕಾಕ ೩೧೪-೦-೦ ರಿಂದ ೩೧೭-೦-೧ ಕ್ಕೂ ಸುಧಾರಿಸಿದವು. ಬೇಲಾಪುರ ಸಕ್ಕರೆ ೩೦೮-೦-೦ ರಿಂದ ೩೨೩-೦-೦ ಕ್ಕೇರಿತು. ಬ್ಯಾಂಕುಗಳಲ್ಲಿ ಇಂಪೀರಿಯಲ್ ಎಫ್. ಸಿ. ೨೨೬೨-೦-೦ ಕ್ಕೂ ಸೆಂಟ್ರಲ ೮೧-೮-೦ ಕ್ಕೂ ಇಳಿದವು. ರಿಝರ್ವ ೧೧೭-೮-೦ ರ ಸುತ್ತ ಇದೆ.

ಸರಕಾರಿ ಸಾಲಗಳಲ್ಲಿ ೧೯೪೭-೫೦ ರ ೩॥/. ಸಾಲ ೧೦೨-೫-೦ ರಲ್ಲಿಯೂ ೧೯೫೩-೫೫ ರ ೩/. ಸಾಲ ೧೦೨-೧೨-೦ ರಲ್ಲಿಯೂ ಕೊನೆಗಂಡವು.

ಚಿನ್ನ ಬೆಳ್ಳಿ

ಚಿನ್ನಬೆಳ್ಳಿ ಪೇಟೆ ಪೂರ್ಣ ದಲಾಲರ ಕೈವಶವಾಗಿದ್ದು ಅವರು ಲಾಭಬಡಕತನದಿಂದಲೂ ಸಂಗ್ರಹದಿಂದಲೂ ಬೆಲೆಗಳನ್ನು ಏರಿಸುತಿದ್ದಾರೆ. ಆದುದರಿಂದ ೧೦೩-೦-೦ ರ ಸುಮಾರಲ್ಲಿದ್ದ ಚಿನ್ನ ಏರುತ್ತೇರುತ್ತ ಇಂದು ೧೦೭-೧೦-೦ ರಲ್ಲಿ ಕೊನೆಗಂಡಿತು. ವಾಯದಾ ೧೦೭-೪-೦ ಸಾವರೀನ್ ೭೦-೮-೦, ೧೫೬-೦-೦ ರ ಸುಮಾರಿಗಿದ್ದ ಬೆಳ್ಳಿಯಾದರೂ ೧೬೩-೬-೦ ಕ್ಕೇರಿತು. ವಾಯದಾ ೧೬೩-೧೦-೦.

ಅರಳಿ ಪೇಟೆ

ನಿಯಂತ್ರಣಗಳು ಹೋಗಬಹುದೆಂಬ ಆಶೆ ತೋರಿದ್ದರಿಂದ ಅರಳಿ ಪೇಟೆಗೆ ಸ್ವಲ್ಪ ಬಲ ಬಂದಿದೆ. ಬೆಲೆ ವಿಶೇಷ ಏರದಿದ್ದರೂ ಅಲ್ಲೇ ಸ್ಥಿರವಾಗಿದೆ. ಜನೆವರಿ ವಾಯಿದಾ ೪೭೪-೨-೦ ಮಾರ್ಚ ೪೭೨-೮-೦ ಮೇ. ೪೭೮-೮-೦ ಜುಲೈ ೪೮೬-೦-೦ ಸೆಪ್ಟಂಬರ ೪೯೧-೮-೦ ಕ್ಕೆ ಕೊನೆಗೊಂಡವು.

ಎಣ್ಣೆ ಕಾಳುಗಳು

ಶೇಂಗಾ	೧೪೩—೦—೦
,, (ಹೊಸತು)	೧೪೨—೦—೦
ಅಗಸಿ	೨೯-೧೦--೦
ಅಗಸೆ ಎಣ್ಣೆ	೧೭..೧೦-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೦-೧೧೧
ಹೊಸ ಮೆಣಸಿನಕಾಯಿ	೧೦೦-೧೪೦
ಶೇಂಗಾ ಖಂಡಿ	೧೦೦-೧೨೦

ಶಿವಮೊಗ್ಗೆ

ಶಿವಮೊಗ್ಗೆ ಅಡಿಕೆಪೇಟೆ ಈರೀತಿ ಇದೆ—

ದೇಶಾವರ ನಂ.	೧	ಮಣ ೧ ಕ್ಕೆ	೫೧-೫೨
,,	೨	,,	೪೮-೫೦
,,	೩	,,	೪೫-೪೭
ರಾಜಾ ಅಪಿವು		,,	೪೬-೪೭
ತೋರ ಸಾಲು		,,	೪೪-೪೮
ಬೆಟ್ಟೆ ವಂತಿ		,,	೨೯-೩೦
ಬೆಟ್ಟೆ		,,	೨೫-೨೮

ಅಡಿಕೆಗೆ ಬೇಡಿಕೆ ಇಲ್ಲ. ಮಾಲು ನಿರ್ಯಾತ ಸೌಕರ್ಯವಿಲ್ಲ.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೨೯೫-೩೦೫
,,	೨	೨೭೫-೨೮೫
,,	೩	೨೫೫-೨೬೫
ಹಳೇ ಜಯವಂತ ಹತ್ತಿ		೩೧೦-೩೨೨
ಅಪಲಂಡ ಹತ್ತಿ		೨೯೫-೩೦೫
ಜಿನ ಹಳೆದು		೨೧೧-೨೧೬
ಜಿನ ಹೊಸದು		೧೯೦-೨೦೦
ಅಪಲಂಡ ಡಬಲರೋಲ		೧೯೦-೨೦೨
ಸಾಜಿನ		೧೯೦-೧೯೫

ಮಾವಿನ ಮರದಡಿಯಲ್ಲಿ

ಲೇ:— ಶ್ರೀ ಕುಲಕರ್ಣಿ ಬಿಂದುಮಾಧವ, ಬಾದಾಮಿ

(ಶಿರಸಿಯ 'ಕಂಠೀರವ'ದ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕಥೆ)

ಚಿಕ್ಕ ಕಥೆ

" ಹೋಗಿ ಬರತೇನಿ ರಾಜ. "

" ಹೋಗಿ ಬಾ ಹಸನ "

ಮುಂದೆ ಆ ವೃದ್ಧ ಗೆಳೆಯರ ಮುಖದಿಂದ ಮಾತು ಹೊರಬಿಳಲಿಲ್ಲ. ಎಪ್ಪತ್ತು ವರ್ಷಗಳ ಕಾಲ ಒಂದಾಗಿ ಬಾಳಿದ ಗೆಳೆಯರು ಈಗ ಅಗಲ ಬೇಕಾಗಿದೆ. ಆ ಅಪಾರವಾದ ಅಗಲಿಕೆಯ ನೋವು ಗೆಳೆಯರ ಕಣ್ಣುಗಳಲ್ಲಿ ಹಣಿಕಿಕ್ಕಿತ್ತು. ತುಟಿಗಳು ಅದುರಿದರೂ ಕಂಠದಲ್ಲಿ ಹೊರಟ ಶಬ್ದಗಳು ಮರಳಿ ತಮ್ಮ ಸ್ಥಾನ ಸೇರಿದವು.

ರೈಲಿನ ಕೊನೆಯ ಡಬ್ಬಿಯ ಬಾಗಿಲಿಗೆ ನಿಂತು ಕೊಂಡು ಹಸನ ಗೆಳೆಯನ ಎರಡೂ ಹಸ್ತಗಳನ್ನು ಗಟ್ಟಿಯಾಗಿ ಹಿಡಿದಿದ್ದ. ಅವನ ಕಂಗಳಿಂದ ಎರಡು ತೊಟ್ಟು ಬಿಂದುಗಳು ರಾಜನ ಹಸ್ತಗಳ ಮೇಲೆ ಬಿದ್ದವು.

ರಾಜ ಕತ್ತೆತ್ತಿ ಹಸನನನ್ನು ನೋಡಿದ. ಆಗ ಅವನ ಕಂಗಳಲ್ಲಿಯೂ ನೀರಾಡಿತು.

ರೈಲು ಒಂದುಸಲ ಗಟ್ಟಿಯಾಗಿ ಅರಚಿತು.

ಗೆಳೆಯರು ಅದರ ಕರ್ಕಶ ಧ್ವನಿಗೆ ಬೆಚ್ಚಿಬಿದ್ದು ಇನ್ನೂ ಗಟ್ಟಿಯಾಗಿ ಒಬ್ಬರ ಹಸ್ತಗಳನ್ನೊಬ್ಬರು ಹಿಡಿದರು. ಇಬ್ಬರ ಕಂಗಳಿಂದಲೂ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ತಡೆದುಹಿಡಿಯ ಬೇಕೆಂದು ಯತ್ನಿಸಿದಷ್ಟು ದುಃಖ ಉಕ್ಕಿ ಬರುತ್ತಿತ್ತು.

ರೈಲು ನಿಧಾನವಾಗಿ ಸಾಗಿತು. ಮುಂದೆಮುಂದೆ ಹೊಗೆಕಾರುತ್ತ ಆ ಹೊಗೆಯಲ್ಲಿ ಒಟ್ಟಾಗಿ ಆ ಗೆಳೆಯರಿಬ್ಬರ ಹೃದಯಗಳನ್ನೂ ಹೊಕ್ಕು ಅನುಕಂಪವನ್ನು ಹುಟ್ಟಿಸಿತು. ಹಸನ ರಾಜನ ಕೈಗಳನ್ನು ಬಿಡಲಿಲ್ಲ. ಇನ್ನೂ ಗಟ್ಟಿಯಾಗಿ ಹಿಡಿದಿದ್ದ. ರಾಜ ಕೈಗಳನ್ನು ಬಿಡಿಸಿಕೊಳ್ಳಲು ಯತ್ನಿಸಲಿಲ್ಲ. ಹಾಗೆಯೇ ನಿಧಾನವಾಗಿ ಸಾಗುತ್ತಿರುವ ರೈಲಿನ ಸಂಗಡ ಓಡುತ್ತಿದ - ಯಾವ ಮಾಯೆಯಿಂದಲೊ ರಾಜ ರೈಲಿನಗುಂಟ ಓಡುತ್ತಿರುವದನ್ನು ಕಂಡ ಪೋರ್ಟರ ರಾಜನನ್ನು ಓಡದಹಾಗೆ ತಡೆದು ಹಿಡಿದು ಕನ್ನಡ ಭಾಷೆಯಲ್ಲಿ ಎಷ್ಟು ಕೀಳು ಶಬ್ದಗಳಿವೆಯೊ ಎಲ್ಲವನ್ನೂ ರಾಜನಿಗಾಗಿ ಉಪಯೋಗಿಸುತ್ತ ಆಚೆಗೆ ನೂಕಿದ. ನೂಕಿದ ರಭಸವನ್ನು ತಾಳಲಾರದೆ ಮುದುಕ ರಾಜ ಪ್ಲಾಟಫಾರ್ಮಿನ ಆಚೆಯ ಮೂಲೆಗೆ ಹೋಗಿಬಿದ್ದ. ಬೆರಳಿಗೆ ಚೂಪಾದ ಕಲ್ಲೊಂದು ತಾಕಿ ರಕ್ತ ಧಾರಾಕಾರವಾಗಿ ಸುರಿಯಲಾರಂಭಿಸಿತು. ಅವನ ಬೆರಳಿನ ರಕ್ತವನ್ನು ನೋಡಿ ಪೋರ್ಟರನಿಗೂ ಕೊಂಚ ವ್ಯಸನವಾಯಿತೇನೊ; ಇಲ್ಲವೇ ಕೀಳುಶಬ್ದಗಳೆಲ್ಲ ಅವನ ಭಾಂಡಾರದಿಂದ ಮುಗಿದವೊ. ಅಂತೂ ಅಲ್ಲಿ ಬಹಳ ಹೊತ್ತು ನಿಲ್ಲದೆ ಮೌನದಿಂದ ನಿಲ್ದಾಣದೊಳಕ್ಕೆ ನಡೆದ

ಕಿಟಕಿಯಲ್ಲಿ ತಲೆಯಿಟ್ಟುಕೊಂಡೇ ಹಸನ ರಾಜನನ್ನು ನೋಡುತ್ತಿದ್ದ. ರಾಜನಿಗಾದ ನೋವು ತತ್‌ಕ್ಷಣವೇ ಹಸನನ ಹೃದಯಕ್ಕೂ ಉಂಟಾಯಿತು ಎದೆಯಂತರಾಳದಲ್ಲಿ ಹುದುಗಿದ ನೋವು ರಾಜನ ಮೊಗದ ಮೇಲೆ ಸ್ಪಷ್ಟವಾಗಿ ಮೂಡಿತ್ತು. ರಾಜನ ಆ ಮೊಗ ಹಸನನ ಹೃದಯದಲ್ಲಿ ಚಿರಸ್ಥಾಯಿಯಾಗಿ ನಿಂತಿತ್ತು.

" ತಿರುಗಿ ಬಾ ಹಸನ " ಹೇಳಿದವು ರಾಜನ ಕಂಗಳು.

"ಬರತೇನಿ ರಾಜ" ಹಸನನ ಕಂಗಳು ಉತ್ತರಿಸಿದವು.

ರೈಲು ಅದೇ ಸಮಯದಲ್ಲಿ ಕೇಕೆ ಹಾಕಿ ನಕ್ಕಿತು. ಹಸನನು ಬೆಚ್ಚಿಬಿದ್ದು ಸುತ್ತಲೂ ನೋಡಿದ. ತಿರುಬಿಟ್ಟವನ್ನು ಭೇದಿಸಿಕೊಂಡು ಮುನ್ನಡೆಯುವದರಲ್ಲಿತ್ತು ರೈಲು. ಕೊನೆಯ ಸಲ ಬಾದಾಮಿ ನಿಲ್ದಾಣದೆಡೆಗೆ ತನ್ನ ದೃಷ್ಟಿಬೀರಿದ ಹಸನ.

ಭಾರವಾದ ಶರೀರವನ್ನು ಹೊತ್ತುಕೊಂಡು ರಾಜನ ಮೂರ್ತಿ ಹಸನನ ಕಂಗಳಿಗೆ ಕೊನೆಯ ಸಲ ಅಸ್ಪಷ್ಟವಾಗಿ ಕಾಣಿಸಿತು. ಅಷ್ಟರಲ್ಲಿ ಆ ತಿರುಬಿಟ್ಟ ಅಡ್ಡಬಂದು ಬಾದಾಮಿಯ ನಿಲ್ದಾಣವನ್ನೂ ರಾಜನನ್ನೂ ಮರೆಮಾಡಿತು. ಆದರೂ ಹಸನ ಹಾಗೆಯೇ ನಿಂತುಕೊಂಡು ನೋಡುತ್ತಿದ್ದ.

ಅರುಣ ಆದೇ ಉದಯಿಸಿದ್ದ. ಅವನ ಕಿರಣಗಳು ಪೂರ್ವದಿಗಂತದೆಡೆಗೆ ಮೊಗಮಾಡಿನಿಂತ ಹಸನನ ಮೊಗದ ಮೇಲೆ ಚಲ್ಲುವರಿದಿದ್ದವು.

ಹಸನ ಒಂದು ಸಲ ಕತ್ತೆತ್ತಿ ಅರುಣನನ್ನು ನೋಡಿದ. ಅರುಣ ನಗುತ್ತಿದ್ದ; ತನ್ನ ಗೆಳೆಯ ಸೂರ್ಯನ ಬರವಿಕೆಗಾಗಿ.

"ಹೂಂ-ಹೀಗೆಯೇ ನಾನು ಮನೆಗೆ ಮರಳುವ ಸಮಾಚಾರ ತಿಳಿದಾಗ ರಾಜ ನಗುತ್ತಿರ ಬಹುದಲ್ಲವೇ? ... " ಎಂದುಕೊಂಡಾಗ ಅಂತಹ ದುಃಖದಲ್ಲಿಯೂ ಹಸನನ ಮೊಗದಮೇಲೆ ನಗೆ ಮೂಡದಿರಲಿಲ್ಲ. ಹಾಗೆಯೇ ಪೂರ್ವದಿಗಂತವನ್ನೇ ನೋಡುತ್ತಿದ್ದ.

ಸೂರ್ಯ ಉದಯಿಸಿದ. ಅರುಣ ಅಗಲೇ ಮಾಯವಾಗಿಬಿಟ್ಟ. ಆಗ ಸೂರ್ಯನಿಗೆ ಎಷ್ಟು ನೋವಾಯಿತೊ ಗೆಳೆಯನ ಅಗಲಿಕೆಯಿಂದ.

ಹೌದು ಅಂತಹ ಅಗಲಿಕೆಯ ನೋವು ತನಗೂ ಆಗಿದೆಯೆಂದುಕೊಂಡಾಗ ಹಸನನ ಕಂಗಳಿಂದ ಜಾರಿದ ಎರಡು ತೊಟ್ಟು ಹನಿಗಳು ಅವನ ಶ್ವೇತವರ್ಣದ ಗಡ್ಡದಮೇಲೆ ನಿಂತು ಸೂರ್ಯನ ಕಿರಣಕ್ಕೆ ಒಂದು ಸಲ ಹೊಳೆದವು.

ಸೂರ್ಯನ ಅಗಲಿಕೆಯ ನೋವನ್ನು ನೋಡುತ್ತ ನಿಲ್ಲುವ ತಾಳ್ಮೆ ಹಸನನಿಗಿರಲಿಲ್ಲ. ಹಾಗೆಯೇ ಪೂರ್ವದಿಗಂತದಿಂದ ದೃಷ್ಟಿಯನ್ನು ಕಿತ್ತುಕೊಂಡು ಕೆಳಗೆ ಹರಿಬಿಟ್ಟ. ಗಿಡ, ಮರ, ಹೊಲಗಳು ಹಸನನನ್ನು ಕಂಡು ಗಟ್ಟಿಯಾಗಿ ನಕ್ಕವು. ಹಸನನ ನೊಂದ ಹೃದಯಕ್ಕೆ ಆ ನಗೆಯನ್ನು ಸಹಿಸಲಾಗಲಿಲ್ಲ. ಗಟ್ಟಿಯಾಗಿ ಕಣ್ಣು ಮುಚ್ಚಿದ.

" ಹೌದು ಅದೇ ಆ ಮಾವಿನಮರ!... ರಾಜ ನಾನು ಒಮ್ಮೆಲೇ ಹುಟ್ಟಿದಾಗ ನಮ್ಮಿಬ್ಬರ ತಾತಂದಿರು ಹೊಂದಿಕೆಯಾಗಿರುವ ನಮ್ಮಿಬ್ಬರ ಹೊಲಗಳ ಮಧ್ಯದ ಬದುವಿಗೆ ಆ ಮಾವಿನ ಮರವನ್ನು ನಡಲಿಲ್ಲವೆ? ......

"ನಮ್ಮಿಬ್ಬರ ಹುಟ್ಟಿನ ಸವಿ ನೆನಪಿಗೆ ನಮ್ಮಿಬ್ಬರ ಆತ್ಮಗಳು ಒಂದಾದ ಸವಿನೆನಪಿಗೆ ಸಾಕ್ಷಿಯಾಗಿ ನಿಂತಿದೆ ಇಂದಿಗೂ ಆ ಮಾವಿನಮರ! ...

" ಅಬ್ಬ! ಅದರ ಹಣ್ಣುಗಳು ಎಷ್ಟು ರುಚಿ! ... ಊರಿನ ಹಿರಿಯ ವ್ಯಾಪಾರಸ್ಥರು ಅದರ ಮಾವಿನ ಹಣ್ಣನ್ನು ಮಾರಾಟಮಾಡುವದಕ್ಕೆ ಕೇಳುತ್ತಾರೆ ಪ್ರತಿವರುಷವೂ. ಆದರೂ ನಮ್ಮ ತಾತಂದಿರು ಮನೆಗೇ ಆ ಹಣ್ಣುಗಳನ್ನಿಟ್ಟುಕೊಳ್ಳುತ್ತಿದ್ದರೇ ವಿನಾ ಮಾರಾಟ ಮಾಡಲಿಲ್ಲ. ಓ, ನಾವೂ ಹಾಗೆಯೇ ಒಂದು ಸಲವೂ ಆ ಹಣ್ಣುಗಳನ್ನು ಮಾರಾಟಮಾಡಿಲ್ಲ. ....

" ಆದರೆ ಇನ್ನು ಮುಂದೆ? ....

" ಹೂಂ, ನಾನೇ ಹೊರಟುಹೋಗುವಾಗ ಆ ಹಣ್ಣಿನ ಚಿಂತೆ ನನಗೇಕೆ? ......

" ನನಗೆ ಚಿಂತೆ ಇಲ್ಲದಿದ್ದರೂ ರಾಜನಿಗೆ ತುಂಬ ಚಿಂತೆ. ಅವನೇ ನಿನ್ನೆ ರಾತ್ರಿ ನಾವು ಅಗಲುವೆವೆಂದು ಹೇಳಿದಾಗ ಹೇಳಲಿಲ್ಲವೇ? " ...

" ನೀ ಹೋದ್ರೇನಾತು ಹಸನ. ಈ ಮಾವಿನ ಮರ ಹಿಡ್ಲ ನಿನ್ನ ಹೆಸರ ಹೇಳಿಕೈತಿ. ಎಂದದು ಒಣಗಿ ಹೋಕೈತೊ ಅಂದ... ಅಂದ ನೀನು ಒಣಗಿದೀ ಅಂತ ತಿಳಿಕೀನಿ......" ಎಂದಾಗ ಎಷ್ಟು ದುಃಖದಾಯಿತು ಇಬ್ಬರಿಗೂ.......

ಹಸನನ ಕಂಗಳು ತೇವಗೊಂಡವು. ಆರೆಮೂಕನಂತೆ ಹಸನ ಹಾಗೆಯೇ ನಿಂತುಕೊಂಡಿದ್ದ. ಹೃದಯದಲ್ಲಿ ಜ್ವಾಲಾಮುಖಿಯು ಧಗಧಗಿಸುತ್ತಲಿತ್ತು.

" ಅಗಳೇ ಹೋಯ್ತಲ್ಲ ಬಾದಾಮಿ.... " ಯಾರೋ ಪ್ರಯಾಣಿಕರು ಹೇಳಿದರು.

" ಬಾದಾಮಿ! ಬಾದಾಮಿ!! .... " ಹಸನ ಎಷ್ಟು ಸಲ ಹೇಳಿಕೊಂಡನೊ ಹಾಗೆ ನುಡಿದಾಗೆಲ್ಲ ಅವನ ಆತ್ಮತೃಪ್ತಿಕೆರಳುತ್ತಿತ್ತು. ಆ ಮೂರೇಮೂರು ಅಕ್ಕರಗಳನ್ನು ನುಡಿದಾಗ ಹಸನನ ಮನಸ್ಸು ಗಾವುದ—ಗಾವುದ ಮುಂದಕ್ಕೋಡಿ ಬಾದಾಮಿಯನ್ನು ಸಮೀಪಿಸುತ್ತಿತ್ತು. ಹಳೆಯ ನೆನಪಿನ ಬಿರುಗಾಳಿಗೆ ಸಿಲುಕಿ ತತ್ತರಿಸುತ್ತಿತ್ತು.

" ಅಯ್ಯೋ, ನಾನು ಬಾದಾಮಿಯನ್ನು ಬಿಟ್ಟು ಹೋಗಲಾರೆ...ಪ್ರಿಯ ಬಾದಾಮಿ.. "

ಒರಲುತ್ತಲಿತ್ತು ಒಂದೇ ಸವನೆ ಅಂತಃಕರಣ ಕರುಳು ಕಿತ್ತುಬರುವ ನೋವು ಎದೆಯಲ್ಲಿ.

" ಎಪ್ಪತ್ತು ವರ್ಷಕಾಲ ಆಶ್ರಯವಿತ್ತು ನನ್ನನ್ನು ಕಾಪಾಡಿದ ಬಾದಾಮಿ... " " ನಾನು ನಿನ್ನನ್ನು ಬಿಟ್ಟು ಹೇಗೆ ಹೋಗಲಿ? ...... " ಎಂದು ಒಂದೇ ಸವನೆ ಕಿರಿಚುತ್ತಿದೆ ಮನಸ್ಸು.

" ಅಯ್ಯೋ! ... ಮರಳಿ ಬರಲಾರದಲ್ಲಿಗೆ ಹೋಗುತ್ತಿದ್ದೇನೆ. ಬಾದಾಮಿಯ ಋಣವನ್ನೆಲ್ಲ ಕಡಿದುಕೊಂಡು ಹೊರಟಿದ್ದೇನೆ.... ನಿಷ್ಠುರ ಎಂದೂ ಇದ್ದ ಈ ವಿಷವೇಳೆಯಲ್ಲಿ ಬಾದಾಮಿಯನ್ನು ಬಿಟ್ಟು ಹೋಗಬೇಕೇಕು. ಮಗನ ಹಟ ಅಷ್ಟು ಬೆಳೆದಿದೆ. ಈಗ ಯಾವ ಆಟವೂ ನಡೆಯುವಹಾಗಿಲ್ಲ. ಹೋಗಬೇಕು, ಹೂಂ... ಹೋಗಲೇಬೇಕು " ...

"ಹೋಗುವದು ಹೇಗೆ? " ... " ಎಪ್ಪತ್ತು ವರ್ಷಕಾಲ ಪೋಷಿಸಿದ ಮಣ್ಣಿನ ಋಣ ಇಷ್ಟು ಬೇಗ ಹರಿದೀತೆ? ":

" ಇಲ್ಲ! ಸಾಧ್ಯವಿಲ್ಲ!! ಮರಳಿ ಒಂದಿಲ್ಲೊಂದು ದಿನ ಬರುತ್ತೇನೆ...ಪ್ರಿಯ ಬಾದಾಮಿ! ನಿನ್ನ ಮಡಿಲಲ್ಲಿ ಆ ಮಾವಿನ ಮರದಡಿಯಲ್ಲಿ ತಲೆಯಿಟ್ಟು ಚಿರನಿದ್ರೆ ಪಡೆಯುತ್ತೇನೆ...... "

ಹಸನನ ಕಂಗಳಲ್ಲಿ ಜಲಪ್ರವಾಹದಂತೆ ನೀರು ಹರಿಯುತ್ತಿತ್ತು ಆ ನೀರಿನಲ್ಲಿ ನೆನೆದು ಹೋಗಿತ್ತು ಅವನ ಗಡ್ಡ!

" ರಾಜ ಈಗ ಏನುಮಾಡುತ್ತಿರಬಹುದು? ಮನೆಗೆ ತಲುಪಿರಬಹುದ? " ...

" ಮನೆ!...... "

ಅಂತಃಕರಣ ಒಂದು ಸಲ ವಿಕಟವಾಗಿ ನಕ್ಕಹಾಗೆ ಭಾಸವಾಯಿತು ಹಸನನಿಗೆ. ಹಸನ ದಿಕ್ಕುತಪ್ಪಿ ಕಂಗಾಲಾಗಿ ದಾರಿಕಾಣದವನಂತೆ ಬಿಟ್ಟು ಕಿರುಬಿಡುತ್ತ ನಿಂತುಕೊಂಡಿದ್ದ.

" ಮನೆ! ...ಎಲ್ಲಿದೆ ನಿನ್ನ ಮನೆ? ....ಬಾದಾಮಿಯನ್ನು ಬಿಟ್ಟು ಕಾಣದ ತಿಳಿಯದ ಊರಿಗೆ ಸಂಸಾರ ಹೂಡಲು ನಡೆದಿದ್ದೀಯಲ್ಲ! ನಿನಗೇಕೆ ಬೇಕು ಬಾದಾಮಿಯಲ್ಲಿ ಮನೆ??.... " ತನ್ನನ್ನೇ ತಾನು ಪ್ರಶ್ನಿಸಿಕೊಂಡ ಹಸನ. ಅದಕ್ಕೆ ಉತ್ತರ ಮಾತ್ರ ದೊರೆಯಲಿಲ್ಲ.

"ಹೋ..." ಎಂದು ತಲೆಕೊಡವಿ ಹಾಗೆಯೇ ನಿಂತುಕೊಂಡ ಹಸನ. ಅವನ ಹೃದಯವನ್ನು ಭೇದಿಸಿ ಬಿಸಿಯುಸಿರೊಂದು ಹೊರಬಿದ್ದು ಗಾಳಿಯಲ್ಲಿ ಬೆರೆತಿತು.

" ಮನೆ? .....ನನ್ನ ಮನೆ ಬಾದಾಮಿಯಲ್ಲಿಯೇ ಇದೆ. ರಾಜ, ನಾನು ಎಂದೇ ಮನೆಗೆ ಮರಳಿದರೂ ಜೋಪಾನದಿಂದ ಕಾಯುತ್ತಾನೆ. ಮರಳಿ ಆ ಮನೆಗೆ. ಆ ನನ್ನ ಭೂಮಿತಾಯಿಯ ಬಳಿಗೆ, ಆ ನನ್ನ ಮಾವಿನಮರದ ಬಳಿಗೆ ಹೋಗುವದು ಖಂಡಿತ, ಅವರೆಗೆ ರಾಜ ತನ್ನ ಮನೆಗಿಂತಲೂ ಹೆಚ್ಚಾಗಿ ಆ ಮನೆಯನ್ನು ಜೋಪಾನ ಮಾಡುತ್ತಾನ. "

" ರಾಜ! ಇಷ್ಟು ಅಸ್ಥೆವಹಿಸಿ ಕಾಪಾಡುವ. ತನಗೂ ನನಗೂ ಏನು ಸಂಬಂಧ "

" ಗೆಳೆತನ! ....ಈ ಪ್ರಪಂಚದಲ್ಲಿ ಗೆಳೆಯನಿಗಿಂತಲೂ ಹತ್ತಿರದ ಬಂಧು ಇನ್ನಾರೂ ಇಲ್ಲ ಎನ್ನುವದನ್ನು ತಿಳಿಯಬೇಕಾದರೆ ರಾಜನ ಸ್ನೇಹದ ರುಚಿಬೇಕು. ಅವನ ಗೆಳೆತನದ ಅಮೃತವನ್ನು ಹೀರಬೇಕು. ನಮ್ಮ ಹೃದಯ ಎಷ್ಟು ಆತ್ಮೀಯವಾಗಿದೆ! ಅವನು ನನ್ನನ್ನು ಮರೆಯುವದಕ್ಕೆ ಹೇಗೆ ಸಾಧ್ಯವಿಲ್ಲವೊ ಹಾಗೆ ನಾನವನನ್ನು ಮರೆಯುವದಕ್ಕೆ ಈ ಜನ್ಮದಲ್ಲಿ ಸಾಧ್ಯವಿಲ್ಲ. "

" ಒಂದೇ ದಿನ ಹುಟ್ಟಿದೆವು.. ಒಂದಾಗಿಯೇ ಬೆಳೆದೆವು.....ಒಂದೇ ಮನೆಯವರಂತೆಯೇ ಬಾಳಿದೆವು ಈ ಎಪ್ಪತ್ತು ವರುಷಕಾಲ!..... "

"ನಿಜ ಅವನು ಹಿಂದು, ನಾನು ಮುಸ್ಲಿಂ!... ಅಂದರೇನ? ನಮ್ಮಲ್ಲಿ ಒಂದು ದಿನವಾದರೂ ಕಲಹ ಬಂದಿತೆ! ಜಾತೀಯ ಭಾವನೆಯಾದರೂ ಹುಟ್ಟಿತೆ? ಇಬ್ಬರೂ ಜತೆಯಾಗಿಯೂ ದಿನಾಲೂ ಊಟ ಮಾಡುತ್ತಿದ್ದೆವಲ್ಲ! ನನ್ನ ಮನೆಯಲ್ಲಿಯೇ ಆಗಲಿ, ಅವನ ಮನೆಯಲ್ಲಿಯೇ ಆಗಲಿ. ಕಷ್ಟಕಾಲದಲ್ಲಿಯೂ ನಾವು ಎಷ್ಟು ಪರಿಯಿಂದ ಹಿತವಾಗಿರುತ್ತಿದ್ದೆವು ಒಬ್ಬರಿಗೊಬ್ಬರು...

"ಆದರೆ ನನಗೆ ಬಂದ ಕಷ್ಟ ಕಾಲದಲ್ಲಿ ನನ್ನ ಸಮಾಜದವರು, ನಮ್ಮ ಆಪ್ತರೆನಿಸಿಕೊಂಡವರು ಯಾರಾದರೂ ನೆರವಾದರೆ?...

"ನನಗಿನ್ನೂ ಹದಿನಾರು ವರುಷ. ನನ್ನನ್ನೂ ತಾಯಿಯನ್ನೂ ಬಿಟ್ಟು ತಂದೆ ತೀರಿಕೊಂಡರು. ಆಗ ಎಂತಹ ದುರ್ದಶೆ?... ಕೇವಲ ನಾಲ್ಕುನೂರು ರೂಪಾಯಿಗಳಿಗಾಗಿ ಆ ಸಾಹುಕಾರ ಮಹಮ್ಮದ ಸಾಹೇಬರು ನನ್ನ– ರಾಜನ ಚಿರತನ ಸ್ನೇಹದ ಪ್ರತೀಕವಾಗಿ ನಿಂತ ಆ ಮಾವಿನ ಮರ ಒಂದೇ ಒಂದು ನನ್ನ ಆಸ್ತಿಯಾಗಿರುವ ಹೊಲವನ್ನು ನುಂಗಿ ನೀರು ಕುಡಿಯಲು ಯತ್ನಿಸಿದರಲ್ಲ!...

"ಆ ಮುಸುಕುಮುಸುಕಾಗಿ ನೆನಪಾಗುತ್ತಿದೆ. ಆದರೆ ಹೊಟ್ಟೆಗೇನು ಗತಿ? ಅದಕ್ಕೆಂದೇ ನನ್ನ ಸಮಾಜದವರನ್ನು ವಿಚಾರಿಸಿದೆ ಅಪ್ತರಲ್ಲಿ ಮೊರೆಯಿಟ್ಟೆ... ಯಾರೊಬ್ಬರೂ ಆ ಸಾಹೇಬರಿಗೆ ಹೇಳಲು ಮುಂದೆ ಬರಲಿಲ್ಲ. ನನ್ನ ಹೊಲವನ್ನು ಬಿಡಿಸಿ ಕೊಡಲು ಸಮರ್ಥರಾಗಲಿಲ್ಲ. ಯಾರೊಬ್ಬರೂ ಅಂದು ನನಗಾಗಿ ಮರುಗಲಿಲ್ಲ!..." ಮರುಗಿದವನು... ರಾಜ, ನನ್ನ ತಾಯಿ!"

ನನಗೆ ಬಂದ ಈ ಸ್ಥಿತಿಯನ್ನು ಕಂಡು ರಾಜನ ಹೃದಯಕ್ಕೆ ಎಷ್ಟು ದುಃಖವಾಯಿತು. ನನಗರಿಯದ ಹಾಗೆ ಮಹಮ್ಮದ ಸಾಹೇಬರ ಕೈಗೆ ನಾಲ್ಕು ನೂರು ರೂಪಾಯಿಗಳನ್ನು ಹಾಕಿ ಹೊಲ ಉಳಿಸಿಕೊಡಲಿಲ್ಲವೆ? ಆದಿನಿಂದ ನಮ್ಮ ಸ್ನೇಹ ಇನ್ನೂ ಗಾಢವಾಯಿತು. ಉಳುವಾಗ, ಬೆಳೆಯುವಾಗ, ಸೀಕು ಮುಸುರೆ ತರುವ ವರೆಗೂ ನಾವು ಒಬ್ಬರಿಗೊಬ್ಬರು ಎಷ್ಟು ನೆರವಾಗುತ್ತಿದ್ದೆವು...

"ಅವನ ಧೈರ್ಯದಿಂದಲೇ ಎರಡು ಕಾಲಿಗೆ ಜಮೀನುಗಳಿರಲಿಲ್ಲವೆ? ಮನೆಯನ್ನು ಕಟ್ಟಲಿಲ್ಲವೆ? ..

"ನನ್ನ ಮಗ ಲಾಲನಿಗೆ ಪೋಲೀಸಖಾತೆ ಸ್ಥಳ ದೊರೆಯಿತೆಂದಾಗ ಅವನಿಗೇನು ಹಿಗ್ಗು! ಇವನ ಮದುವೆ ಮಾಡುವಾಗ ರಾಜನಿಗಿಷ್ಟು ಸಂತೋಷ!! ತನ್ನ ಮಗನ ಮದುವೆ ನಡೆದ ಹಾಗೆ, ಊ ಹೂಂ... ಅದಕ್ಕೂ ಹೆಚ್ಚಾಗಿ... ನಾಲ್ಕು ಜನರು ಮಹಮ್ಮದ ಎನ್ನುವ ಹಾಗೆ ನಡೆಸಿ ಬಿಟ್ಟನಲ್ಲ!!!"

ಅಮ್ಮನಿಗೆ, ನನ್ನ ಪತ್ನಿಗೆ ಕಾಯಿಲೆಯಾದಾಗ ಅವನು ಅಹೋರಾತ್ರಿ ಅವರ ಶುಶ್ರೂಷೆಮಾಡುತ್ತ, ನನಗೂ ಸಮಾಧಾನ ಹೇಳುತ್ತ ಬರುತ್ತಿದ್ದನಲ್ಲ! ತಾಯಿಯವರು ಕಣ್ಣು ಮುಚ್ಚಿದಾಗ ರಾಜನಿಗಾದವೇದನೆಯೆಂತಹದು!! ತನ್ನ ತಾಯಿ ಹೋದರೆಯನ್ನು ಕಳೆದುಕೊಂಡಷ್ಟು ದುಃಖಪಟ್ಟನಲ್ಲ!"...

"ನಿನ್ನೆ ಅವನನ್ನಗಲಿ ಪಾಕಿಸ್ತಾನಕ್ಕೆ- ಕರಾಚಿಗೆ— ಹೋಗುವೆನೆಂದು ತಿಳಿದಾಗ ಅವನಿಗೆಷ್ಟು ದುಃಖವಾಯಿತು ಮಾವಿನಮರದಡಿಯಲ್ಲಿ ಕುಳಿತು ಅತ್ತದ್ದಾಯಿತು. ಒಂದೇ ಕಂಬಳಿಯಮೇಲೆ ಊಟವಿಲ್ಲದೆ ಮಲಗಿಕೊಂಡು ಎಷ್ಟು ಕಣ್ಣೀರು ಹರಿಸಿದೆವು.. ಇಡಿಯ ರಾತ್ರಿ ನಿದ್ರೆ ಮಾಡಲಿಲ್ಲ... ಮುಂಜಾನೆ ಅಧೋಮುಖರಾಗಿಯೇ ಎದ್ದೆವು"

"ಹೊಲಮನಿ. ಮಾವಿನಗಿಡ, ಜ್ವಾಪಾನ!— ಅಷ್ಟಾ ತಿರುಗಿಬರತೇನಿ. ರಾಜ" ಎಂದು ಹೇಳಲಿಲ್ಲವೇ? ಮನೆಬಿಟ್ಟು ಬರುವಾಗ...

"ಹಾಗಾದರೆ ನಾನು ಮರಳಿ ಹೋಗುವೆನೆ?— ಮನೆ, ಹೊಲ, ಮಾವಿನ ಗಿಡಗಳನ್ನು ಮತ್ತೆ ಕಾಣುವೆನೆ? ಅದೇ ಬದಾಮಿಯ ಮಣ್ಣಿನಲ್ಲಿ ಬೆರೆಯುವೆನೆ?"

"ಇಲ್ಲ, ಸಾಧ್ಯವಿಲ್ಲ! ಅದಕ್ಕಿಂತಲೂ ಈ ಗಾಡಿಯಿಂದ ಹಾರಿ ಪ್ರಾಣ ಬಿಡುವದೊಳ್ಳೆಯದು. ಬಾದಾಮಿಯ ಬಳಿಯಲ್ಲಾದರೂ ಗೋರಿಯಾದೀತು...

ಒಂದು ದೃಢ ನಿರ್ಧಾರಕ್ಕೆ ಬಂದಂತಿತ್ತು ಅವನ ಮನಸ್ಸು ಮೇಲೆ ದಿಗಂತ ಕೆಳಗೆ ಮಹಾಸಾಗರ ಮಧ್ಯದಲ್ಲಿ ಹಾರಾಡುವ ಪಕ್ಷಿಯಂತಾಗಿತ್ತು ಅವನ ಮನಸ್ಸು!

'ದಾದಾ' ಎಂದು ಕೂಗಿದ ಹಸನನ ಮೊಮ್ಮಗ ರಹೀಮ. ಕತ್ತನ್ನು ಕಿಟಿಕಿಯಿಂದ ತಿರುಗಿಸಿ ಮೊಮ್ಮಗನ ಕಡೆಗೆ ದೃಷ್ಟಿಬೀರಿದ ಹಸನ. ರಹೀಮ ತನ್ನ ತಾಯಿ ಫಾತಿಮಾನಿಂದ ಬಿಡಿಸಿಕೊಂಡು ಎತ್ತಿಕೊಳ್ಳೆಂದು ಸೂಚಿಸಿದ ತನ್ನಜ್ಜನಿಗೆ ಹಸನ ಆ ಮಗುವನ್ನೆತ್ತಿಕೊಂಡು ಹಾಗೆಯೇ ನಿಂತೇ ಇದ್ದ. ಅವನ ಭುಜಗಳ ಮೇಲೊರಗಿ ರಹೀಮ ಹಸನನ ಬಿಳಿಯ ಗಡ್ಡದ ಜತೆಗೆ ಚಿನ್ನಾಟವಾಡುತ್ತಲಿದ್ದ.

ಲಾಲ ತಂದೆಯನ್ನು ನೋಡಿ 'ಏಟೊತ್ತಿನತನಕ ಹಾಗ ನಿಲ್ಲತೀ ಯಪ. ಕುಂತ್ಗೋಬಾರ್ದ?'... ಎಂದ.

ಹಸನ ಮಗನ ಧ್ವನಿಯಲ್ಲಿ ಆನಂದವನ್ನು ಗ್ರಹಿಸಿದ.

'ಲಾಲ ನನ್ನ ಮಗನೆ?... ಎಷ್ಟು ಕಲ್ಲಾಗಿದೆ ಅವನ ಹೃದಯ...' ಎಂದುಕೊಂಡು ಹಸನ ಮಗ ಕೊಸೆಯನ್ನು ಒಂದು ಸಲ ನೋಡಿದ.

'ಹೃದಯವನ್ನೇ ಸುಟ್ಟುಕೊಂಡು ಪಾಕಿಸ್ತಾನಕ್ಕೆ ಹೊರಟಿದ್ದಾರೆ. ತಮ್ಮ ಜಾತಿಯ ಅನೇಕರನ್ನು ಕಿಲ್ಲವಲ್ಲ! ಎಲ್ಲಿಯೋ ಅರಿಯದ ಕಾಣದ ಊರಿಗೆ ಹೋಗಿ ಸುಖದ ಹೂಡಿದರೆ ಜಾತಿಯೊಂದಾದ ಮಾತ್ರಕ್ಕೆ ಆದಾರೇನು? ರಾಜನ ಹಾಗೆ ಜಾತಿ ಮರೆಯುವದಾರೆಯೆ? ಅರಿಯದ ಜನರನ್ನು ಸುಖಕ್ಕೆ ತನ್ನವರನ್ನು ಹರಿಬಿಟ್ಟು, ಇದ್ದ ಸತ್ಯ ಸುಖವನ್ನು ದೂರ ತಳ್ಳಿದನಲ್ಲ! ಲಾಲನಿಗೆ ಪೊಲೀಸ ತಾನೇಕೆ ಸ್ಥಳ ದೊರೆಯಿತೊ!... ಇಲ್ಲದೆಹೋಗಿದ್ದರೆ ಒಕ್ಕಲಿಗನಾಗಿ ನಿಜವಾದ ಪ್ರಪಂಚದ ಅರಿವನ್ನುಂಟುಮಾಡಿಕೊಂಡು ಬಾದಾಮಿಯಲ್ಲಿಯೇ ಸುಖವಾಗಿ ಬಾಳಬಹುದಿತ್ತಲ್ಲವೆ?...'

'ಹಾಗೆ... ಹೋಗಲಿ, ಅನುಭವವಿಲ್ಲದ ತರುಣ ರಕ್ತದ ತಳಕ. ನಾಲ್ಕು ದಿನ ಕಳೆಯಲಿ ಪಾಕಿಸ್ತಾನದಲ್ಲಿಯ ಕಷ್ಟದ ಅರಿವಾಗಲಿ ಬಾದಾಮಿಯ ಸುಖದ ನೆನಪಾಗುವದು. ಆಗ ಮರಳಿ ಬಾದಾಮಿಗೆ ಬರುವದು ಖಂಡಿತ! ಆಗ

—ಇನ್ನೂ ಇದೆ



ಜ್ಯೋತಿಷಿ:— ಕೃಷ್ಣಶಾಸ್ತ್ರಿ ಭಡೆ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಡಿಸೆಂಬರ ೧ ರಿಂದ ೭ ರ ವರೆಗೆ

ಮೇಷ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಮಕ್ಕಳು ದಗದಗಿಯು ಟಾಗುವಂಥ ಕೆಲ ಕೆಲಸ ಮಾಡುವರು. ಬಂಧು ವರ್ಗದವರಲ್ಲಿ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವು ಭಾರವಾದದ್ದು. ದೊಡ್ಡವರ ಭೆಟ್ಟಿ ಆದರೆ ಅದರ ಅಪೇಕ್ಷಿತ ಫಲ ಮಾತ್ರ ಸಂಶಯಿತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಕ್ಕಿಂತ ಮತ್ತು ಪತ್ರವ್ಯವಹಾರದಿಂದ ಅನುಕೂಲ ಘಟನೆಗೆ ಕೊಂಡರೆಯಿಂ ಪಡೆಯುತಸ್ತು. ತಾ. ೧, ೪, ೫ ಅನುಕೂಲ.

ವೃಷಭ

ಪ್ರಕೃತಿಗೆ ಕಿರುಕುಳ ಕ್ಲೇಶ ಸ್ತ್ರೀಸುಖ ಉತ್ತಮ. ಆದರೆ ಮಕ್ಕಳಿಂದಲೇ ಲೋಕಾಪವಾದ ಬರುವಂಥ ಕೆಲ ಕೃತ್ಯ ಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅನುಚಿತ ಲಾಭದ ಸಂಭವವೂ ಉಂಟು. ಗೃಹ ವೈಭವ ಇಲ್ಲವೆ ತಕ್ಕಿನ ಪ್ರಾಪ್ತಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ವಾದದಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ರೋಗಿಗಳಿಗೆ ಕೊಂಡರೆಯಿಂದಲೆ ಯಶಸ್ಸು. ತಾ. ೧, ೩, ೪, ೭ ಅನುಕೂಲ.

ಮಿಥುನ

ಪ್ರಕೃತಿ ಅನುಕೂಲ ಆದರೆ ಹೆಂಡತಿಗೊಡ ಚಿಕ್ಕಿತೆ ಕೊಡಸು. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ ಆದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ ಮತ್ತು ಶತ್ರುಗಳು ಜೋರು ಹೆಚ್ಚು ಬಂಧು ವರ್ಗದವ ರಿಂದ ಕೊಂಡರೆಯ ಕೃತ್ಯಗಳು. ಪ್ರವಾಸ ಮತ್ತು ಭೆಟ್ಟಿ ಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರೆಗೆ ಕೊಂಡರೆ ಕಡಮೆ. ತಾ. ೧, ೪, ೫ ಅನುಕೂಲ.

ಕರ್ಕ

ಪ್ರಕೃತಿಗೆ ಬಹಳ ಕ್ಲೇಶ. ಅನಪೇಕ್ಷಿತ ಕಾರಣಗಳಿಂದ ಸ್ತ್ರೀ ಸುಖದಲ್ಲಿ ವಿರಸ ಆಸ್ತರ. ಮತ್ತು ಮಿತ್ರರಿಂದ ಅತಿ ದ್ವೇಷ. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ ದೊರೆತು ಮಕ್ಕಳು ಮರಿಗಳಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ತುಂಬ ಆದರೆ ಲಾಭ ಕಡಮೆ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಯುಕ್ತ ಜೊತ್ತಿಗೆ ಗೊಂದಲ. ಪ್ರವಾಸಾದಿ ಕೆಲಸ ಹಿತದ್ದು. ಪುಷ್ಯಕ್ಕೆ ಕೊಂಡರೆ ಕಡಮೆ ತಾ. ೩, ೪, ೫. ೬ ಅನುಕೂಲ.

ಸಿಂಹ

ಪ್ರಕೃತಿ ಅನುಕೂಲ. ಸ್ತ್ರೀ ಸುಖ ಮನಸಿನಂತೆ ಆದರೆ ಪ್ರತಿಷ್ಠೆಗೆ ಸ್ವಲ್ಪ ಕುಂದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು ತಿಕಟಿ ವಸ್ತಿ ಆಪ್ತರಲ್ಲಿ ಸ್ವಲ್ಪ ಸಂಗತಿಗಳು. ಮಿತ್ರ ಸುಖ ಉತ್ತಮ. ಮತ್ತು ಪ್ರಸಿದ್ಧ ಜನರ ಸಹ ವಾಸ. ವೆಚ್ಚ ಹೆಚ್ಚು ಆದರೆ ಅದರಲ್ಲಿಯು ಹೇಳು ಸಾಧ್ಯ. ಪ್ರವಾಸಾದಿ ಕೆಲಸ ಹಿತದ್ದು ಪೂರ್ವಾಕ್ಕೆ ಕೊಂಡರೆಯಿಂದಲೆ ಯಶಸ್ಸು. ತಾ. ೧, ೪, ೫, ೭ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೂ ಉಭಯತರಲ್ಲಿ ಒಮ್ಮನಸ್ಸು ಕಡಮೆ. ಮಕ್ಕಳಲ್ಲಿ ಒಬ್ಬರ ಉತ್ಕರ್ಷವಾದರೆ ಇನ್ನೊಬ್ಬರ ಅಪಕರ್ಷ. ತಿರಸ್ಕಾರ ವೈರತ್ವದ ಕೆಲ ಪ್ರಸಂಗಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಷ್ಟ ಸಾಧ್ಯ ಮತ್ತು ವೆಚ್ಚ ಮಾತ್ರ ವಿಪರೀತ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಹಸ್ತಾಕ್ಕೆ ಹೆಚ್ಚು ಕೊಂಡರೆ. ತಾ. ೧, ೩, ೪, ಅನುಕೂಲ

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಉತ್ತಮ ಪ್ರಿಯ ಮತ್ತು ಅಪ್ರಿಯ ಜನರ ಸಹವಾಸ ಒಂದೇ ಸಮಯಕ್ಕೆ ಸಂಭವಿಸುವದರಿಂದ ಮನ ಸ್ಥಿತಿ ಗೊಂದಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಗೆ ಹೆಚ್ಚು ಉತ್ತಮ. ತಾ. ೨, ೬, ೭, ೪ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆಪ್ತರು ಮತ್ತು ಮಿತ್ರರಲ್ಲಿ ವಿಶೇಷ ಆದರ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಮಾನ್ಯ, ಆದರೆ ಪ್ರತಿಷ್ಠೆ ಹೆಚ್ಚು. ಯಾವದೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಮತ್ತು ಅಪೇಕ್ಷೆ ಮೀರಿ ಯಶಸ್ಸು. ಮಾತಾಡುವದು ಇಲ್ಲವೆ ಬರೆಯುವದು ಎರಡರಿಂದಲೂ ದ್ವೇಷ ಜೆಳಿ ಸುವಂಥದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನ್ನುದು ಅನುರಾಧೆಗೆ ಹೆಚ್ಚು ಅನುಕೂಲ. ತಾ. ೩, ೫, ೭ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಉತ್ತಮ. ಮತ್ತು ಮಕ್ಕಳಲ್ಲಿ ನಿಜ್ಜದ ಉನ್ನತಿ ಆದರೆ ಎಲ್ಲರೂ ನಿಮ್ಮ ಗೊಡ ಕಡಿಸಿಕೊಳ್ಳುವರು. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಕೊಂದರೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗದಲ್ಲಿಪ್ರಾಗತಿಕ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕೊಂದರೆಯಿಂದಲೆ ಅನುಕೂಲತೆ ಪ್ರವಾಸಕ್ಕಿಂತ ಭೆಟ್ಟಿ ಯಶಸ್ಸು. ಪತ್ರವ್ಯವಹಾರ ಹೆಚ್ಚು ಅನುಕೂಲ. ಪೂ.ಷಢಾಕ್ಕೆ ಕೊಂದರೆ ಹೆಚ್ಚು ತಾ. ೪, ೫, ೬, ೭ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೆ ಹೆಂಡತಿಗೂ ಕ್ಲೇಶ.. ಉಳಿದ ವಿಷಯ.ಗಳಲ್ಲಿ ಪ್ರಾಪಂಚಿಕ ಸುಖ ಕೆಟ್ಟ ಮಕ್ಕಳಿಂದ ಅವಾಚ್ಯ ಕೃತ್ಯಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನುಕೂಲ ಆದರೆ ಪ್ರತಿಷ್ಠೆ ಒಂದೇ ಸವತೆ ಕುಗ್ಗುತ್ತ ನಡೆಯುವದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡವದು. ಮಿತ್ರ ಸುಖ ಅನುಕೂಲ. ಸ್ತ್ರೀ ವರ್ಗದಲ್ಲಿ ಅನಾದರ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಶ್ರವಣಕ್ಕೆ ಹೆಚ್ಚು ಕೊಂದರೆ. ತಾ ೩, ೬, ೭ ಅನುಕೂಲ.

ಕುಂಭ

ಪ್ರಕೃತಿ ಸುಧಾರಣವೆ ಆದರೆ ಹೆಂಡತಿ ಮತ್ತು ಮಕ್ಕಳು ಹಾಗು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಬಹಳ ಪ್ರತಿಷ್ಠೆ ಮತ್ತು ತುಂಬ ಲಾಭ ಮಿತ್ರರಿಂದ ಬಹಳ ದ್ವೇಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಹಿತದ್ದು ಶತತಾರಕೆಗೆ ಹೆಚ್ಚು ಅನುಕೂಲ. ತಾ ೧, ೪, ೫ ಅನುಕೂಲ.

ಮೀನ

ಪ್ರಕೃತಿ ಉತ್ತಮ ಸ್ತ್ರೀ ಸುಖ ಅನುಕೂಲ. ಆದರೆ ಕ್ವಚಿತ ಕುಟುಂಬದಲ್ಲಿ ಯು ಬಹಳ ಜನರ ದೂರತ್ವ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ. ಮತ್ತು ಲಾಭ ಬಹಳ ಉತ್ತಮ ಅನುಚಿತ ಲಾಭದ ಸಂಭವ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಮತ್ತು ಪ್ರವಾಸ ಹೆಚ್ಚು ಅನುಕೂಲ. ಉತ್ತರಾಭಾದ್ರಪದಕ್ಕೆ ಹೆಚ್ಚು ಅನುಕೂಲ. ತಾ. ೩, ೪, ೬, ೭ ಅನುಕೂಲ.

ಮಾವಿನ ಮರದಡಿಯಲ್ಲಿ

(೧೫ನೇ ಪುಟದಿಂದ)

ಮಾತ್ರ ರಾಜ, ನಾನು ಗಾಢವಾಗಿ ಒಂದಾಗುತ್ತೇವೆ. ನಮ್ಮಿಬ್ಬರ ಗೆಳೆತನದ ಹುಟ್ಟಿದ ಸಾಕ್ಷಿಯಾಗಿ ನಿಂತ ಆ ಮಾವಿನಮರದ ಹಣ್ಣುಗಳನ್ನು ತಿಂದು, ಅದರ ದಟ್ಟಾದ ನೆರಳಿನಲ್ಲಿಯೇ ಶಾಶ್ವತ ಸುಖ ಪಡೆಯುತ್ತೇನೆ...ಸತ್ಯವಾಗಿ...'

ರಾಜನ ಜತೆಗೆ ಮರಳಿ ಮಾವಿನಗಿಡದ ತಂಪಿನಲ್ಲಿ ತಂಗಿ ಜಾನಪದ ಗೀತೆಗಳನ್ನು ಹಾಡುತ್ತ, ಅದೇ ಮಾವಿನಮರದ ರಸಭರಿತವಾದ ಹಣ್ಣುಗಳನ್ನು ತಿನ್ನುವ ಚಿತ್ರವನ್ನು ಉಜ್ವಲವಾಗಿ ಹಸನನ ಹೃದಯದಲ್ಲಿ ಮೂಡಿತ್ತು. ಆ ಚಿತ್ರವನ್ನು ನೋಡುತ್ತಿರುವಂತೆಯೇ ಹಸನನ ಮನಸ್ಸು ಉದ್ಗಾರ ತೆಗೆಯಿತು....

'ಹೋಗಿ ಬಂದೆ ಬರತೀನಿ ರಾಜ....'

× + ×

"ಹೋಗಿ ಬಾರಪ ಮತ್ತ ಹಸನ........."

ರಾಜ- ಹರಕು ಕಂಬಳಿಯಮೇಲೆ ಮಲಗಿದವನು ಕನವರಿಸುತ್ತ ಎದ್ದು ಕುಳಿತ. ಎಂದೂ ಇಲ್ಲದ ಉತ್ಸಾಹ ಅತನ ರೋಮರೋಮಗಳಲ್ಲಿ ಹರಿದಾಡುತಲಿತ್ತು. ಹಳ್ಳಿಯ ರೈತ ರಾಜ – ಆ ಕನಸನ್ನು ಅಸತ್ಯವೆಂದು ತಿಳಿಯಲಿಲ್ಲ. "ಮಾದೇವನ ಕರಪಾ" ಎಂದು ಓಲವಾಗಿ ನಂಬಿದ. ಹಾಗೆಯೇ ಎದ್ದು ಮುಖತೊಳೆಯಲು ನಡೆದ.

ಉಷೆಯು ಉದಯವಾಗ ಅವನ ಕಿವಿಗೆ ಇಂದು ಎಂದಿಗಿಂತಲೂ ಇಂಪಾಗಿತ್ತು ಅದಕ್ಕಿಂತಲೂ ಮೇಲಾಗಿ ರಾಜನ ಹೆಂಡತಿ ಬೀಸುತ್ತ ಜಾನಪದ ಗೀತೆಯನ್ನು ಹೇಳುತ್ತಿದ್ದಳು. ಅವಳ ಹಾಡಿನ ಜತೆಗೆ ತಾಳಹಿಡಿದಿದ್ದವು ಅವಳ ಕೈಬಳೆಗಳು ಬೀಸುಕಲ್ಲು. ಮುಂಜಾವಿನ ತಂಗಾಳಿಯಲ್ಲಿ ತೇಲಿಕೊಂಡು ಬಂದು ಮುಖತೊಳೆದುಕೊಳ್ಳುತ್ತ ಹಿತ್ತಲಲ್ಲಿನಿಂತ ರಾಜನ ಕಿವಿಗಳಿಗೆ ಅವಳ ಹಾಡು ಕೊನೆ ಶಬ್ದವನ್ನು ನೀಡಿತು.

"ಹೋಗಿ ಬಾ ಅಂತೀನಿ......."

"ತಿರುಗಿ ಬಾ ಅಂತೀನಿ.........."

"ಹೊತ್ತು ಮೂಡಕ- ಮೊದಲ ಬಾರೊ ಅಣ್ಣಯ್ಯ........"

"ಸುತ್ತ ಗುಡ್ಡ ವನೇರಿ ಬಾರೊ ಅಣ್ಣಯ್ಯ..."

ರಾಜನ ಹೃದಯಕ್ಕೆ ಪಕ್ಷಿಯ ಆ ಜಾನಪದ ಗೀತೆ ಅಪಾರವಾದ ಉತ್ಸಾಹವನ್ನಿತ್ತಿತು. ಬೇಗನೆ ಮೊಕತೊಳೆದುಕೊಂಡು ರಾಜ ಪತ್ನಿಯ ಬಳಿಗೆ ಬಂದ.

"ಇವತ್ತ ಹಸನ ಬರತಾನ ನೋಡು" ಎಂದು ನಗನಗುತ್ತ ಹೆಂಡತಿಗೆ ಹೇಳಿದ ರಾಜ. ಅವನ ಹೆಂಡತಿಗೆ ರಾಜನ ಮಾತುಗಳು ಅರ್ಥವಾಗಲಿಲ್ಲ.

"ನಿನಗ ಹುಚ್ಚು ಹಿಡಿದೈತೇನು-? ಹೀಂಗ್ಯಾಕ ಮಾತಾಡತೀದಿ? ಯಾವದೇಶವೋ-ಯಾವ ಕೋಶವೊ ಹೋಗಿಬಿಟ್ಯಾರ. ತಿರುಗಿ ಎಂದಾರ ಬರಾಕ ಆದೀತ?......"

"ಹುಚ್ಚೀ! ನಿನಗೇನು ತಿಳಿತೈತಿ ಎಲ್ಲಾ ಬರತಾರ ನೋಡೀ ಅಂತ......"

ಎಂದು ರಾಜ ಹಾಗೆಯೇ ಹೊಲದ್ದೆಡೆ ಸಾಗಿದ. ಏನೋ ಒಂದು ಗುಂಗು, ಏನೋ ಒಂದು ತೆರ ನಾದ, ಆನಂದ ಅವನ ಹೃದಯದಲ್ಲಿ ಸೂಸಿ ಬರುತ್ತಿತ್ತು.

ರಾಜ- ಆ ಮಾವಿನ ಮರದಡಿಯಲ್ಲಿ ಬಂದು ನಿಂತ. ಬಾದಾಮಿಯ ಗುಡ್ಡವನ್ನು ಸುತ್ತಿಕೊಂಡು ಸೂರ್ಯ ಮುಂದೆ ಬಂದಿದ್ದ. ರಾಜ ಮಾವಿನಮರವನ್ನು ನಿಟ್ಟಿಸಿದ. ಫಲ ಹೊತ್ತುಕೊಂಡು ಬಾಗಿ ನಿಂತಿತ್ತು ಆ ಮಾವಿನ ಮರ. ಅದರ ಮೇಲೆಲ್ಲ ಎಳೆಯ ಸೂರ್ಯನ ಕಿರಣಗಳು ಹರಡಿಕೊಂಡು ತುಂಬ ಚೆಲುವಾಗಿ ಗರಿಗೆದರಿಕೊಂಡು ಸೂರ್ಯ ಕಿರಣಗಳ ಜತೆಗೆ ಚಿನ್ನಾಟ ವಾಡುತ್ತಿರುವ ನವಿಲಿನ ಹಾಗೆ ಕಾಣುತ್ತಿತ್ತು. ಅದನ್ನು ಕಂಡು ರಾಜನ ಹೃದಯ ಹಿರಿಹಿರಿ ಹಿಗ್ಗಿತು.

"ಹಸನ, ನೀನು ಹೊರಟು ಹೋಗಿ ಒಂದು ವರುಷ ಸಂದುಹೋಯಿತು. ಈ ಸಲ ನಿನಗಾಗಿ "ಫಲ" ನ್ನು ಹೊತ್ತುಕೊಂಡು ನಿಂತಿದೆ. ನಿನಗಾಗಿ ಕಾಯುತ್ತಲಿವೆ. ಈ ಹಣ್ಣುಗಳು, ನೆನಪಾಗಲಿಲ್ಲವೆ ನಿನಗೆ? ಈ ಮಾವಿನ ಮರವನ್ನು ಮರೆತು ಬಿಟ್ಟೆಯಾ?

"ಖಂಡಿತ ಈಗ ನೀನು ಬರಲೇ ಬೇಕು ಬಂದೇ ಬರುತ್ತೀ." "ರಾಜ...ರಾಜ" ಎಂದು ಮೊದಲಿನಂತೆ ನನ್ನನ್ನು ಕರೆಯುತ್ತೀ......"ರಾಜ ಅದೇ ಮಾವಿನ ಮರದಡಿಯಲ್ಲಿ ಬಿದ್ದುಕೊಂಡು ಏನನ್ನೋ ಗುಣಿಸಿ ಭಾಗಿಸುವದರಲ್ಲಿ ಲೀನನಾಗಿದ್ದ. ...

"ರಾಜ...ರಾಜ"...

ಹೌದು ಹಸನನದೇ ಧ್ವನಿ! ಕತ್ತೆತ್ತಿ ನೋಡಿದ ರಾಜ, ಹಸನನು ರಹೀಮನನ್ನು ಎತ್ತಿಕೊಂಡು ನಿಂತಿದ್ದಾನೆ!

ಎಷ್ಟು ಸೊರಗಿ ಹೋಗಿದ್ದಾನೆ ಹಸನ! ಅವನನ್ನು ಗುರುತಿಸುವದೇ ದುಸ್ತರವಾಯಿತು ರಾಜನಿಗೆ. ಆದರೂ ಹಸನನ ಆ ಪ್ರದೀಪಮಾನವಾದ ಕಂಗಳು ಇಂದಿಗೂ ಅದೇ ಕಾಂತಿಯಿಂದ ಮಿನುಗುತ್ತಲಿವೆ.

"ಹಸನ,...ಹಸನ..." ಎನ್ನುತ್ತ ರಾಜ ಗೆಳೆಯನನ್ನು ಗಾಢವಾಗಿ ಅಪ್ಪಿ ಅವನ ಮೈಮೇಲೆ ಕೈಯಾಡಿಸಿದ. ಅಸ್ಥಿಪಂಜರದ ಮೇಲೆ ಕೈಯಾಡಿಸಿದಂತಾಯ್ತು ರಾಜನಿಗೆ!

ಒಂದು ನಿಮಿಷ...ಎರಡು...ನಿಮಿಷಗಳು ಜಾರಿದವು. ಇನ್ನೂ ಗಾಢವಾಗಿಯೇ ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು. ಅವರಿಬ್ಬರ ಕಂಗಳಿಂದ ಚಿಮ್ಮಿ ಬರುತ್ತಿದ್ದ ಕಣ್ಣೀರು ಹಸನನ ಹೆಗಲಮೇಲೊರಗಿಕೊಂಡ ರಹೀಮನ ಅಂಗಿಯನ್ನೆಲ್ಲ ನೆನೆಯಿಸಿತು- ಅವರು ಇನ್ನೂ ಹಾಗೇ ಇರುತ್ತಿದ್ದರೇನೊ ರಹೀಮ ಅರಚದಿದ್ದರೆ; ಅಂಗಿ ಒದ್ದೆಯಾಗಲು ಮಗು ಅರಚಿತ್ತು, ಆಗ ಇಬ್ಬರಿಗೂ ಎಚ್ಚರವಾಯಿತು.

"ಅಂತೂ ಕಡೆಗೊಮ್ಮೆ ಬಂದೆಯಲ್ಲ ಹಸನ!." ಎಂದ ರಾಜ ಅಲ್ಲಿ ಕವಿದ ಗಾಢವಾದ ಮೌನವನ್ನು ಮುರಿದು.

"ಹೂಂ, ಬದ್ಮೆಶ. ಇನ್ನು ಎಂದೆಂದಿಗೂ ಹೋಗುದಿಲ್ಲ ರಾಜ! ನಿನ್ನಾಣೆ ಮಾಡಿ ಹೇಳತೀನಿ, ಖರೇವಂದ್ರ ಹೋಗುವದಿಲ್ಲ. ಯಾವದೋ ಒಂದು ಕಠಿನವಾದ ನಿರ್ಧಾರ ಹಸನನ ಮೊಗದಮೇಲೆ ಮಿನುಗುತ್ತಿತ್ತು.

"ಎಲ್ಲಿರೂ ಬಂದರಿ..... ಲಾಲ....?.... ಫೌತಿಮಾ ?..," ರಾಜ ಆತುರದಿಂದ ಕೇಳಿದ.

ಅವನ ಪ್ರಶ್ನೆಯಿಂದ ಮುದುಕ ಹಸನನ ಕಣ್ಣುಗಳಲ್ಲಿ ನೀರು ಕಾಣಿಸಿಕೊಂಡಿತು. ನಿಧಾನವಾಗಿ ತನ್ನ ದುಃಖವನ್ನು ಹತ್ತಿಕ್ಕಲು ಯತ್ನಿಸಿ ಹೇಳಿದ ಹಸನ—

"ಏನಂತ ಹೇಳಲ್ಯೋ ರಾಜ?... ಅವರು... ಅವರೆಲ್ಲ ನನ್ನ ಕೈಬಿಟ್ಟರು...'! ಹಸನ ಒಂದು ದೀರ್ಘವಾದ ನಿಟ್ಟುಸಿರು ಹೊರಹಾಕಿದ ಹೃದಯದಿಂದ.

ಹಸನನ ಒಂದೊಂದು ಶಬ್ದವೂ ಸಿಡಿಲಿನಂತೆ ರಗಿತು ರಾಜನಿಗೆ. ಹೃದಯ ಕಿತ್ತುಹೋದ ಹಾಗಾಯಿತು. 'ಏನಂದಿ?'...ಎಂದ ರಾಜ ಹೇಗೋ ಚೇತರಿಸಿಕೊಂಡು.

"ಹೌದು ರಾಜ, ಬ್ಯಾಡದಲ್ಲಿಗೆ ಹೋದರು... ಅದಕ ಮಾದೇವರು ನಮ್ಮ ಮ್ಯಾಲೆ ಸಿಟ್ಟಗೆದ್ದ ಮಗನ್ನ...ಸೊಸಿನ್ನ ಕಟಕೊಂಡು ಹೋದ..."

ಏನಾಗಿತ್ತ ಅವರಿಗೆ ಹಸನ?...

ಏನಾಗಿತ್ತ? ಏನ ಹೇಳಲಿ ರಾಜ, ಅದ್ನ? ನೀವೆಲ್ಲ ಅದ್ಹಾಂಗ ಆ ಪಾಕಿಸ್ತಾನದ ಮುಂದಿ ಅಕ್ಕಾರೇನೋ?...ಹವಾ ತಡೀಲಿಲ್ಲ. ಕರಾಚಿದು. ಹೊತ್ತುಹೊತ್ತಿಗೆ ಫಗಾರ ಸಿಗದ್ಹ ದಾಗ್ದರಿಗೆ ತೋರ್‍ಸುವಾಗಲಿಲ್ಲ...ರೋಗ...ಹೆಚ್ಚಾಗಿ ಮಗಾ, ಸೊಸಿ, ಕಣ್ಣು ಮುಚ್ಚಿದರು! ಪಾಕಿಸ್ತಾನದ ಗೋರ್‍ಯಾಗ ಅವರ್‍ನ ಬಲಿಕೊಟ್ಟು ಬಂದೆ..."

ಮುಂದೆ ಮಾತಾಡಲಾಗಲಿಲ್ಲ ಹಸನನಿಗೆ ಅವನ ಕಂಗಳಿಂದ ನೀರು ಸುರಿಯುತ್ತಿತ್ತು. ಧಾರಾಕಾರವಾಗಿ.

ಹತ್ತು ನಿಮಿಷಗಳು ನೀರವವಾಗಿ ಜಾರಿದವು. ಹಸನ ದುಃಖವನ್ನು ಹೇಗೋ ತಡೆಹಿಡಿದುಕೊಂಡು ತನ್ನ ಮಾತನ್ನು ಮುಂದುವರಿಸಿದ-

"ಇದೊಂದು ಮುಮ್ಮಗ ಉಳದೈತಿ ರಾಜ,... ಮುಪ್ಪಿನ ಕಾಲಾನೆಲ್ಲ ಇದ್ನ ನೋಡ ಕಳೀಬೇಕನಾ; ಮಾದೇವ ಹಾಂಗ ಹಣ್ಯಾಗ ಬರದ ಮ್ಯಾಲ ಅನುಭವಿಸಬೇಕಾಕ್ತೈತಿ...

ರಾಜ ಅವನನ್ನು ಸಂತೈಸಿದ. ಅವನ ಮಾತು ತನ್ನ ಹೃದಯವನ್ನು ತಟ್ಟಲಿಲ್ಲವೆಂಬಂತೆ ಹಸನ ತನ್ನ ಮಾತು ಮುಂದುವರಿಸಿದ—

"ನಾವೇನು ರಾಜ ಹಿಂದಿದ್ದಂಗ ಬಾಳ ದಿನ ಮುಂದ ಬಾಳೂದಿಲ್ಲ. ಮಾದೇವ ಗಡಾನ ನಮ್ಮನ್ನೂ ಕರಕೊಂಡಾನ...ಆಗ ನನ್ನ ದೇಹಾನ ಇದ ಮಾವಿನಮರದ ಬುಡಕ ಹುಗಿದು ಗೋರಿ ಕಟ್ಟಿಸು ಅಂದರ ನನಗ ಏಟ ಸಂತೋಷಾಕ್ಕೆ ತಂದ...

ಹಸನನ ಮೊಮ್ಮಗ ರಹೀಮನಿಗೆ ಅದೇನೆಂದು ತಿಳಿಯಲಾಗದಿದ್ದರೂ ಹಸನ, ರಾಜ, ತಿಳಿದು ಚಕಿತರಾಗಿ ಆ ಮಾವಿನ ಮರವನ್ನು ನಿಟ್ಟಿಸಿದರು—

ಹೂ, ಕಾಯಿಗಳಿಂದ ಅಲಂಕೃತವಾಗಿದ್ದ ಆ ಮಾವಿನಮರಗಾಳಿಯ ರಭಸಕ್ಕೆ ನಾಲ್ಕು ಹೂ ಮಿಡಿಗಳನ್ನು ದುರಿಸಿತು.

ಈ ಪತ್ರಿಕೆಯು ... ಹೆಚ್ಚ ಸೆಂಯುಲ್ಲ ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕ ಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಮೊಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.